
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 22 | ಮೇ 24–30, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com




ಎಂ.ಜಿ.ವೆಂಕಟೇಶ್ ಲಾಲ್ ಸಲಾಂ



ನಗರ ಉದ್ಯೋಗ ಖಾತ್ರಿ ಯೋಜನೆ ಬೇಕು



ಯಡಿಯೂರಪ್ಪ ಅವರ ಕಾಟಾಚಾರದ ಪ್ಯಾಕೇಜ್



ಕೋವಿಡ್ -19 ಎರಡನೆಯ ಅಲೆ

ಹಲವು ಪ್ರಶ್ನೆಗಳು





ಕೋವಿಡ್ ನಿರ್ವಹಣೆ: ಸರ್ಕಾರಕ್ಕೆ ಕೋರ್ಟುಗಳ ಚಾಟಿಯೇಟು



ಮತ್ತೆ ಇಸ್ರೇಲಿನ ಜನಾಂಗ ದ್ವೇಷ ಪ್ರದರ್ಶನ



ಸತತ ಎರಡನೇ ಬಾರಿ ಕೇರಳ ಮುಖ್ಯಮಂತ್ರಿಯಾಗಿ ಪಿಣರಾಯಿ ವಿಜಯನ್ ಪ್ರಮಾಣ ವಚನ ಸ್ವೀಕಾರ

ಎಲ್.ಡಿ.ಎಫ್. ಸಂಪುಟದಲ್ಲಿ ಮೂವರು ಮಹಿಳೆಯರು, 80% ಹೊಸ ಮುಖಗಳು

ಕೇರಳ ವಿಧಾನಸಭೆಯಲ್ಲಿ ಐತಿಹಾಸಿಕ ಗೆಲುವು ದಾಖಲಿಸಿದ ಪಿಣರಾಯಿ ವಿಜಯನ್ ಮೇ 20ರಂದು ಸತತ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಎಪ್ರಿಲ್–ಮೇ ನಲ್ಲಿ ನಡೆದ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ 140 ಸ್ಥಾನಗಳಲ್ಲಿ 99 ಸ್ಥಾನಗಳನ್ನು ಗೆದ್ದು ಎರಡನೇ ಅವಧಿಗೆ ಸರಕಾರ ರಚಿಸಿದೆ.

ತಿರುವನಂತಪುರಂ ಸೆಂಟ್ರಲ್ ಸ್ಟೇಡಿಯಂನಲ್ಲಿ ನಡೆದ ಸರಳ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ, ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಪ್ರಮಾಣ ವಚನ ಬೋಧಿಸಿದ್ದಾರೆ. ಕೋವಿಡ್ ಸಾಂಕ್ರಾಮಿಕ ರೋಗವನ್ನು ಗಮನದಲ್ಲಿಟ್ಟುಕೊಂಡು ಸಮಾರಂಭದಲ್ಲಿ ಭಾಗವಹಿಸುವವರ ಸಂಖ್ಯೆಯನ್ನು ಮಿತಿಗೊಳಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಿಪಿಐಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಸೇರಿದಂತೆ ಕೇರಳದ ಪಕ್ಷದ ಪ್ರಮುಖರು ಭಾಗವಹಿಸಿದ್ದರು. ಸಿಎಂ ಪರಿಹಾರ ನಿಧಿಗೆ ದೇಣಿಗೆ ನೀಡಿದ್ದ, ಬೀಡಿ ಕಾರ್ಮಿಕ ಚಲಾದನ್, ಆಡು ಸಾಕುವ ಸುಬೈದಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಸಿಎಂ ಪಿಣರಾಯಿ ವಿಜಯನ್ ಇವರಿಬ್ಬರಿಗೂ ವಿಶೇಷ ಆಹ್ವಾನವನ್ನು ನೀಡಿದ್ದರು. ಬೀಡಿ ಕಾರ್ಮಿಕ ಚಲಾದನ್ ಜನಾರ್ಧನನ್, ಈ ಹಿಂದೆ ಮುಖ್ಯಮಂತ್ರಿ ಪರಿಹಾರ ನಿಧಿಗೆ ತಮ್ಮ ಖಾತೆಯಲ್ಲಿದ್ದ ಎರಡು ಲಕ್ಷವನ್ನು ದೇಣಿಗೆಯಾಗಿ ನೀಡುವ ಮೂಲಕ ಸುದ್ದಿಯಾಗಿದ್ದರು. ಹಾಗೆಯೇ ಆಡು ಸಾಕುವ ಮಹಿಳೆ ಸುಬೈದಾ, ಎರಡು ಬಾರಿ ತನ್ನ ಆಡು, ಕುರಿಗಳನ್ನು ಮಾರಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆ ನೀಡುವ ಮೂಲಕ ಸುದ್ದಿಯಾಗಿದ್ದರು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ರವರೊಂದಿಗೆ ಇನ್ನೂ 20ಶಾಸಕರು ಈ ಎಲ್‌ಡಿಎಫ್ ಸರಕಾರದಲ್ಲಿ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. 21 ಸದಸ್ಯರಿರುವ ಮಂತ್ರಿಮಂಡಲದಲ್ಲಿ 17 ಹೊಸ ಮುಖಗಳಿವೆ ಎಂಬುದು ಈ ಸಂಪುಟದ ವೈಶಿಷ್ಟ್ಯ.

ಮೊತ್ತ ಮೊದಲ ಬಾರಿಗೆ ಮೂರು ಮಹಿಳಾ ಮಂತ್ರಿಗಳನ್ನು ಹೊಂದಿರುವುದು ಈ ಸಂಪುಟದ ಇನ್ನೊಂದು ವೈಶಿಷ್ಟ್ಯ. ಹಿಂದಿನ ಎಲ್‌ಡಿಎಫ್ ಸಂಪುಟದಲ್ಲಿ ಇಬ್ಬರು ಮಹಿಳಾ ಸದಸ್ಯರಿದ್ದರು. ಈ ಬಾರಿ ಇರುವ ಮೂವರು ಮಹಿಳೆಯರಲ್ಲಿ ಇಬ್ಬರು, ಪ್ರೊ.ಆರ್.ಬಿಂದು ಮತ್ತು ವೀಣಾ ಜಾರ್ಜ್ ಸಿಪಿಐ(ಎಂ)ನಿಂದ ಹಾಗೂ ಜೆ.ಚಿಂಜು ರಾಣಿ ಸಿಪಿಐ ನಿಂದ ಆರಿಸಿ ಬಂದವರು.

ಈಗಾಗಲೇ ವರದಿಯಾಗಿರುವಂತೆ ಈ ಸಂಪುಟದ ಸಿಪಿಐ(ಎಂ)ನ 12 ಸದಸ್ಯರಲ್ಲಿ ಮುಖ್ಯಮಂತ್ರಿಗಳನ್ನು ಬಿಟ್ಟು ಉಳಿದವರೆಲ್ಲರೂ ಹೊಸಬರು. ಹೊಸಬರಿಗೆ ಹೊಣೆಗಾರಿಕೆಗಳನ್ನು ಕೊಡಲಿಕ್ಕಾಗಿ ಮುಖ್ಯಮಂತ್ರಿಗಳನ್ನು ಬಿಟ್ಟು ಹಿಂದಿನ ಸಂಪುಟದಲ್ಲಿದ್ದ ಇತರ ಎಲ್ಲ ಸಿಪಿಐ(ಎಂ) ಮಂತ್ರಿಗಳನ್ನು ಈ ಸಂಪುಟದಲ್ಲಿ ಸೇರಿಸದಿರಲು, ಸಿಪಿಐ(ಎಂ) ರಾಜ್ಯ ಸಮಿತಿ ಒಮ್ಮತದಿಂದ ನಿರ್ಧರಿಸುವುದಾಗಿ ವರದಿಯಾಗಿದೆ. ಈ ಮೊದಲು, ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆರಿಸುವಲ್ಲಿಯೂ ರಾಜ್ಯ ಸಮಿತಿ ಹೊಸಬರಿಗೆ ಹೆಚ್ಚಿನ ಅವಕಾಶ ಕೊಡುವ ಸೂತ್ರವನ್ನು ಅವಲಂಬಿಸಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು. ಸಿಪಿಐ(ಎಂ) ಕೈಬಿಡಲು ನಿರ್ಧರಿಸಿದವರಲ್ಲಿ, ಕೊವಿಡ್ ವಿರುದ್ಧ ಸಮರದಲ್ಲಿ ಆರೋಗ್ಯ ಮಂತ್ರಿಯಾಗಿ ಬಹುಮುಖ್ಯ ಪಾತ್ರ ವಹಿಸಿ ದೇಶ–ವಿದೇಶಗಳಲ್ಲೂ ಪ್ರಶಂಸೆ ಗಳಿಸಿರುವ ಕೆ.ಕೆ.ಶೈಲಜಾ ಟೀಚರ್ ಕೂಡಿದ್ದಾರೆ. ಅವರು ಪಕ್ಷದ ಸಚೇತಕರಾಗಿ ಆಯ್ಕೆಯಾಗಿದ್ದಾರೆ. ಹಿಂದಿನ ಸಂಪುಟದಲ್ಲಿ ಕಾರ್ಮಿಕ ಮಂತ್ರಿಯಾಗಿದ್ದ ಟಿ.ಪಿ.ರಾಮಕೃಷ್ಣನ್ ಸಿಪಿಐ(ಎಂ) ಶಾಸಕಾಂಗ ಪಕ್ಷದ ಕಾರ್ಯದರ್ಶಿಯಾಗಿರುತ್ತಾರೆ.

ಹಿಂದೆ ರಾಜ್ಯಸಭಾ ಸದಸ್ಯರಾಗಿದ್ದ ಎಂಬಿ. ರಜೇಶ್ ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ಎಲ್‌ಡಿಎಫ್ ಅಭ್ಯರ್ಥಿಯಾಗಿದ್ದಾರೆ. ಹಾಗೂ ಸಿಪಿಐನ ಚಿತ್ತಯಂ ಗೋಪಕುಮಾರ್ ಉಪಾಧ್ಯಕ್ಷ ಸ್ಥಾನಕ್ಕೆ ಎಲ್‌ಡಿಎಫ್ ಅಭ್ಯರ್ಥಿಯಾಗಿದ್ದಾರೆ.

ಈ ಹಿಂದೆ ರಾಜ್ಯಸಭಾ ಸದಸ್ಯರಾಗಿದ್ದ ಪಿ. ರಾಜೀವ್ ಕೈಗಾರಿಕಾ ಮಂತ್ರಿಯಾಗಿದ್ದಾರೆ ಹಾಗೂ ಕೆ.ಎನ್ ಬಾಲಗೋಪಾಲ್ ಹಣಕಾಸು ಮಂತ್ರಿಯಾಗಿದ್ದಾರೆ. ವೀಣಾ ಜಾರ್ಜ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಯಾಗಿದ್ದಾರೆ. ಪ್ರೊ. ಆರ್.ಬಿಂದು ಉನ್ನತ ಶಿಕ್ಷಣ ಮಂತ್ರಿಗಳು ಹಾಗೂ ಜೆ.ಚಿಂಜು ರಾಣಿ ಪಶುಸಾಕಣೆ ಮತ್ತು ಡೈರಿ ಅಭಿವೃದ್ಧಿ ಮಂತ್ರಿಯಾಗಿದ್ದಾರೆ.

ಡಿವೈಎಫ್‌ಐನ ಅಖಿಲ ಭಾರತ ಅಧ್ಯಕ್ಷರಾಗಿರುವ ಪಿ ಎ ಮಹಮ್ಮದ್ ರಿಯಾಝ್ ಸಾರ್ವಜನಿಕ ಕಾಮಗಾರಿ ಮಂತ್ರಿ ಹಾಗೂ ಶಿವನಕುಟ್ಟಿ ಕಾಮಿಕ ಮಂತ್ರಿಯಾಗಿದ್ದಾರೆ.

21 ಸದಸ್ಯರ ಸಂಪುಟದಲ್ಲಿ ಸಿಪಿಐ(ಎಂ)ನಿಂದ 11, ಒಬ್ಬರು ಸಿಪಿಐ(ಎಂ) ಬೆಂಬಲಿತ ಪಕ್ಷೇತರರು, ಸಿಪಿಐ ನಿಂದ 4, ಹಾಗೂ ಕೇರಳ ಕಾಂಗ್ರೆಸ್(ಎಂ), ಇಂಡಿಯನ್ ನ್ಯಾಷನಲ್ ಲೀಗ್, ಜನತಾ ದಳ, ಎನ್‌ಸಿಪಿ ಮತ್ತು ಕೇರಳ ಕಾಂಗ್ರೆಸ್ ಡೆಮಾಕ್ರಟಿಕ್ ನಿಂದ ತಲಾ ಒಬ್ಬರು ಇದ್ದಾರೆ.



ಮೇ 26: ಕೃಷಿ ಕಾಯ್ದೆಗಳ ವಿರುದ್ಧ ರೈತರಿಂದ 'ಕರಾಳ ದಿನ' ಆಚರಣೆ

ಕೇಂದ್ರ ಸರಕಾರ ಪಾಸು ಮಾಡಿಸಿಕೊಂಡಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿ ದಿಲ್ಲಿಯ ಗಡಿಗಳಲ್ಲಿ ರೈತರು ನಡೆಸುತ್ತಿರುವ ಹೋರಾಟ ಆರಂಭವಾಗಿ ಮೇ 26 ರಂದು ಆರು ತಿಂಗಳಾಗುತ್ತದೆ. ಮೋದಿ ಸರಕಾರ ಇನ್ನೂ ನಿರ್ಲಕ್ಷ್ಯ ತೋರುತ್ತಿರುವುದನ್ನು ಪ್ರತಿಭಟಿಸಿ ಮೇ 26ನ್ನು ಕರಾಳ ದಿನವಾಗಿ ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

"ಮೇ 26 ರಂದು ಈ ಪ್ರತಿಭಟನೆಯ ಆರು ತಿಂಗಳುಗಳನ್ನು ಪೂರೈಸುತ್ತಿದ್ದೇವೆ. ಮತ್ತು ಅಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಸರಕಾರ ರಚಿಸಿ ಏಳು ವರ್ಷಗಳಾಗುತ್ತವೆ ಕೂಡ. ನಾವು ಇದನ್ನು ಕರಾಳ ದಿನವಾಗಿ ಆಚರಿಸುತ್ತೇವೆ" ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಹೇಳಿದ್ದಾರೆ.

ಅಂದು ರೈತರು ಮತ್ತು ಜನಸಾಮಾನ್ಯರು ತಂತಮ್ಮ ಮನೆಗಳಲ್ಲಿ, ಟ್ರಾಕ್ಟರುಗಳಲ್ಲಿ, ವಾಹನಗಳಲ್ಲಿ ಕಪ್ಪು ಬಾವುಟ ಹಾರಿಸುತ್ತಾರೆ ಮತ್ತು ಹಳ್ಳಿಗಳಲ್ಲಿ ಪ್ರಧಾನಗಳ ಪ್ರತಿಕೃತಿಗಳನ್ನು ಸುಡುತ್ತಾರೆ ಎಂದೂ ಅವರು ಹೇಳಿದ್ದಾರೆ.

ಮಾತುಕತೆಗಳಿಲ್ಲದೆ, ಕೇಂದ್ರ ಸರಕಾರದ ನಿರ್ಲಕ್ಷ್ಯ ಮತ್ತು ಅಜ್ಞಾನ ರೈತರ ಹೋರಾಟವನ್ನು ದುರ್ಬಲಗೊಳಿಸುತ್ತದೆ ಎಂದು ಭಾವಿಸುತ್ತಿದ್ದರೆ ಅದು ಸರಕಾರದ ಮೂರ್ಖತನವಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ರೈತರು ಸೋಂಕನ್ನು ಹಳ್ಳಿಗಳಿಗೆ ಒಯ್ಯುತ್ತಿದ್ದಾರೆ ಎಂದು ಹರ್ಯಾಣದ ಮುಖ್ಯಮಂತ್ರಿಗಳು ಹೇಳಿರುವುದಾಗಿ ವರದಿಯಾಗಿದೆ. "ರೈತರನ್ನು ಖಳನಾಯಕರಾಗಿ ಬಿಂಬಿಸುತ್ತಾರೆ ಎಂದು ನಾವು ನಿರೀಕ್ಷಿಸಿದ್ದೇವಾದರೂ, ಕೇಂದ್ರ ಸರಕಾರ, ಒಂದೆಡೆಯಲ್ಲಿ ತಾನೇ ಹರಿದ್ವಾರದಲ್ಲಿ ಕುಂಭಮೇಳವನ್ನು ಪ್ರಾಯೋಜಿಸುತ್ತ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಪ್ರಚಾರ ಮಾಡುತ್ತ, ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆಗೆ ಮತ್ತು ಮತ್ತು ಈಗ ಕೊವಿಡ್ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ನಮ್ಮನ್ನು ದೂಷಿಸುವಷ್ಟು ಕೀಳು ಮಟ್ಟಕ್ಕೆ ಇಳಿಯುತ್ತದೆ ಎಂದು ಖಂಡಿತ ನಿರೀಕ್ಷಿಸಿರಲಿಲ್ಲ" ಎಂದು ಇದಕ್ಕೆ ಪ್ರತಿಕ್ರಿಯಿಸುತ್ತ ಸಂಯುಕ್ತ ಕಿಸಾನ್ ಮೋರ್ಚಾದ ಒಬ್ಬ ಮುಖಂಡರಾದ ಬಲ್ಬೀರ್ ಸಿಂಗ್ ರಾಜೇವಾಲ್ ಹೇಳಿದ್ದಾರೆ.

ಮೂರು ಕರಾಳ ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಕನಿಷ್ಟ ಬೆಂಬಲ ಬೆಲೆಗಳಿಗೆ ಕಾನೂನಾತ್ಮಕ ಖಾತ್ರಿ ನೀಡಬೇಕು ಎಂಬ ಬೇಡಿಕೆಗಳೊಂದಿಗೆ 'ಮಿಷನ್ ಉತ್ತರಪ್ರದೇಶ ಮತ್ತು ಉತ್ತರಾಖಂಡ'ವನ್ನು ಆರಂಭಿಸಲಾಗುವುದು ಎಂದೂ ಎಸ್‌ಕೆಎಂ ಮುಖಂಡರು ಹೇಳಿದ್ದಾರೆ.

ಈ ನಡುವೆ ಗೋದಿಯ ಕೊಯ್ಲಿನ ನಂತರ ನೂರಾರು ರೈತರು ಗಡಿಗಳಲ್ಲಿನ ಪ್ರತಿಭಟನಾ ಸ್ಥಳಗಳಿಗೆ ಮರಳಿ ಬರುತ್ತಿದ್ದಾರೆ. ಸಿಂಘು ಗಡಿಯಲ್ಲಿ ಅವರನ್ನು ಮೇ 16ರಂದು ಎಐಕೆಸ್ ಅಧ್ಯಕ್ಷರಾದ ಡಾ.ಅಶೋಕ ಧವಳೆ ಮತ್ತು ಹಣಕಾಸು ಕಾರ್ಯದರ್ಶಿ ಪಿ. ಕೃಷ್ಣಪ್ರಸಾದ್ ಸ್ವಾಗತಿಸಿದರು. ಗಡಿಯಲ್ಲಿ ರೈತರು ಹಾಕಿಕೊಂಡಿರುವ ಕ್ಯಾಂಪುಗಳನ್ನು ಹಾದು ಬಂದ 5 ಕಿ.ಮೀ. ಮೆರವಣಿಗೆಯ ನಂತರ ನಡೆದ ರ್‍ಯಾಲಿಯಲ್ಲಿ ಮೇ 26ರ ಕರಾಳ ದಿನಾಚರಣೆಯನ್ನು ದೇಶಾದ್ಯಂತ ಯಶಸ್ವಿಗೊಳಿಸಲು ಕರೆ ನೀಡಲಾಯಿತು.



ಸಂಪಾದಕೀಯ

ಯಡಿಯೂರಪ್ಪನವರ ಕಾಟಾಚಾರದ ಪ್ಯಾಕೇಜ್

ಕೊನೆಗೂ ರಾಜ್ಯದಲ್ಲಿ ಕೋವಿಡ್ ಸಂಕಷ್ಟಕ್ಕೆ ಸಿಲುಕಿ ಸಂಕಷ್ಟಕ್ಕೀಡಾದ ಕಾಯಕ ಸಮುದಾಯಗಳಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಪರಿಹಾರದ ಪ್ಯಾಕೇಜ್ ಒಂದನ್ನು ಘೋಷಿಸಿದ್ದಾರೆ. ಇದೊಂದು ಕಾಟಾಚಾರದ ಪರಿಹಾರ ಪ್ಯಾಕೇಜ್ ಎಂಬುದಾಗಿ ವ್ಯಾಪಕ ಟೀಕೆಗೆ ಒಳಗಾಗಿದೆ.

ಸರ್ಕಾರವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಸರ್ಕಾರ 1,250 ಕೋಟಿ ರೂ. ಗಳನ್ನು ನೀಡಿದ್ದು ಈ ಮೊತ್ತವು ಒಟ್ಟು 4.34 ಕೋಟಿ ಫಲಾನುಭವಿಗಳ ನಡುವೆ ಹರಿದು ಹಂಚಿ ಹೋಗಲಿದೆ. ಅಂದರೆ ಕೇವಲ ತಲಾ ರೂ. 290 ರಷ್ಟು ಪರಿಹಾರ ದೊರೆಯಲಿದೆ. ಇದು ಕಾಟಾಚಾರದ ಪರಿಹಾರವಲ್ಲದೆ ಮತ್ತೇನು? ಇಷ್ಟು ಅತ್ಯಲ್ಪ ನೆರವಿನಿಂದ ಬಡ ದುಡಿಮೆಗಾರರ ಸಂಕಷ್ಟವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಯಾವುದೇ ಬಡ ಕುಟುಂಬ ಕೇವಲ ರೂ. 3000 ಪರಿಹಾರದಿಂದ ಕೋವಿಡ್ ನಿರ್ವಹಣೆ ಹೇಗೆ ಸಾಧ್ಯ?

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರೂ. 1250 ಕೋಟಿ ರೂ. ಪ್ಯಾಕೇಜ್ ಎಂದಿದ್ದಾರೆ. ಆದರೆ ಕರ್ನಾಟಕ ಸರ್ಕಾರ ಪ್ರಕಟಿಸಿರುವ ಅಂಕಿ ಅಂಶಗಳ ಪ್ರಕಾರ ಘೋಷಿತ ಒಟ್ಟು ಮೊತ್ತ ಕೇವಲ 1,111.82 ಕೋಟಿ ರೂ. ಮಾತ್ರ ಇದರಲ್ಲಿ ಕಟ್ಟಡ ಕಾರ್ಮಿಕರಿಗೆ, ಕಾರ್ಮಿಕರ ಕಲ್ಯಾಣ ನಿಧಿಯಿಂದ ರೂ. 494 ಕೋಟಿ ಸಿಗಲಿದೆ. ಇದು ಸರ್ಕಾರ ತನ್ನ ಕೈಯಿಂದ ನೀಡುವುದಿಲ್ಲ. ಸಹಕಾರ ಬ್ಯಾಂಕುಗಳು ನೀಡಿರುವ 134.38 ಕೋಟಿ ರೂ. ಸಾಲ ವಸೂಲಾತಿ ಗಡುವು ಮೂರು ತಿಂಗಳು ಮುಂದೂಡಲಾಗಿದೆ. ಇದು ಸರ್ಕಾರ ನೀಡುವ ಪರಿಹಾರ ಆಗುವುದಿಲ್ಲ. ಅವುಗಳನ್ನು ಕೈಬಿಟ್ಟರೆ ಉಳಿಯುವುದು ರೂ. 483.44 ಮಾತ್ರ. ಅಂದರೆ ಸರ್ಕಾರ ಘೋಷಿಸಿದ ರೂ. 1250 ಕೋಟಿ ರೂ. ಪರಿಹಾರದಲ್ಲಿ ಬಡವರಿಗೆ ತಲುಪುವುದು ಕೇವಲ ರೂ. 483.44 ಮಾತ್ರ. ಈ ಕನಿಷ್ಠ ಪರಿಹಾರವಾದರೂ ಬಡ ಕುಟುಂಬಗಳಿಗೆ ಯಾವಾಗ ದೊರೆಯಬಹುದು? ಸರ್ಕಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಲು ಸರ್ಕಾರಕ್ಕೆ ಎಷ್ಟು ದಿನ ಬೇಕು? ಈ ಷರತ್ತು ಬದ್ಧ ಪರಿಹಾರ ಪಡೆಯಲು ಬಡವರು ಎಷ್ಟು ದಿನ ಕಂಬದಿಂದ ಕಂಬಕ್ಕೆ ಓಡಾಡಬೇಕು? ಅಲ್ಪ ಮೊತ್ತದ ಈ ಪರಿಹಾರ ಕೂಡಲೇ ಎಲ್ಲ ಫಲಾನುಭವಿಗಳಿಗೆ ಯಾವುದೇ ಪಕ್ಷಪಾತ, ತಾರತಮ್ಯವಿಲ್ಲದೆ ದೊರೆಯುವಂತೆ, ಅವರವರ ಬ್ಯಾಂಕ್ ಖಾತೆಗೆ ಜಮಾ ಮಾಡುವರೆ?

ಸರ್ಕಾರ ಘೋಷಣೆ ಮಾಡಿದ್ದು ಯಾವ ಬಡ ಕುಟುಂಬಕ್ಕೂ ಸಾಲದು. ಬಡಜನರ ಮೇಲೆ ಕೋವಿಡ್ ದಾಳಿ ಮುಂದುವರೆಯಲಿದೆ. ಆದ್ದರಿಂದ ಪರಿಹಾರ ವಿತರಣೆ ನಿರಂತರ ಪ್ರಕ್ರಿಯೆಯಾಗಬೇಕು. ಪ್ರತಿಯೊಂದು ಕುಟುಂಬಕ್ಕೆ ಮುಂದಿನ 6 ತಿಂಗಳು ಯಾವುದೇ ಷರತ್ತು ವಿಧಿಸದೆ ಮಾಸಿಕವಾಗಿ ರೂ. 10,000 ಪರಿಹಾರ ವಿತರಣೆಯಾಗಬೇಕು. ಕೊರೋನಾಕ್ಕೆ ಬಲಿಯಾಗುತ್ತಿರುವ ಬಡಕುಟುಂಬಗಳ ಸದಸ್ಯರ ನಿರೋಧಕ ಶಕ್ತಿಯನ್ನು ಬಲಪಡಿಸಲು ಸಾಧ್ಯವಾಗುವಂತೆ ಪ್ರತಿಯೊಂದು ಕುಟುಂಬದ ಸದಸ್ಯರಿಗೆ ಮಾಸಿಕವಾಗಿ ತಲಾ 10 ಕೆ.ಜಿ. ಅಕ್ಕಿಯನ್ನು ಮತ್ತು ಇತರ ದಿನಸಿ ಪದಾರ್ಥಗಳನ್ನು ಕಡ್ಡಾಯವಾಗಿ ವಿತರಿಸಬೇಕು. ಪಡಿತರ ಎಪಿಎಲ್, ಬಿಪಿಎಲ್ ಕಾರ್ಡುಗಳ ಅಗತ್ಯವನ್ನು ಒತ್ತಾಯಿಸಬಾರದು.

ಅಸಂಘಟಿತ ಕಾರ್ಮಿಕರ ಮಾದರಿಯಲ್ಲಿ ಕೃಷಿ ಕೂಲಿಕಾರರಿಗೆ ಪರಿಹಾರದ ಪ್ಯಾಕೇಜ್ ದೊರೆಯಬೇಕು. ಅವರು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನೋಂದಾಯಿಸಲ್ಪಟ್ಟವರಾಗಿರಬಹುದು ಅಥವ ಇಲ್ಲದಿರಬಹುದು. ಪರಿಹಾರ ಪ್ಯಾಕೇಜ್ ಎಲ್ಲರಿಗೂ ತಲ್ಲಪುವುದನ್ನು ಖಚಿತ ಪಡಿಸಿಕೊಳ್ಳಬೇಕು. ಆರ್ಥಿಕ ನೆರವು, ಆಹಾರ ಕಿಟ್ ಹಾಗೂ ವೈದ್ಯಕೀಯ ಕಿಟ್ ಎಲ್ಲಾ ಬಡವರಿಗೆ, ಅವರ ಕುಟುಂಬಗಳಿಗೆ ಆದಷ್ಟು ಬೇಗ ತಲುಪುವಂತಾಗಬೇಕು.

ಜನತೆಗೆ ಬೇಕಿರುವುದು ತೋರಿಕೆಯ ಪರಿಹಾರವಲ್ಲಾ, ನಿಜ ಪರಿಹಾರ!-CPIM

ಮುಖ್ಯಮಂತ್ರಿ ಯಡಿಯೂರಪ್ಪರವರು ಅಂತೂ ಕೊನೆಗೆ, ತಡವಾಗಿಯಾದರೂ ಜನತೆಯ ಒತ್ತಾಯಕ್ಕೆ ಮಣಿದು ರಾಜ್ಯದ ಜನತೆಗೆ 608 ಕೋಟಿ ರೂ.ಗಳ ಮತ್ತು ಕಾರ್ಮಿಕ ಕಲ್ಯಾಣ ಮಂಡಳಿಯ 492 ಕೋಟಿ ರೂ ಪರಿಹಾರದ ಪ್ಯಾಕೇಜ್ ಘೋಷಿಸಿದ್ದಾರೆ. ಇದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸ್ವಾಗತಿಸುತ್ತದೆ.

ಆದರೇ, ಕಳೆದ 2021 ರ ಮಾರ್ಚ್ ತಿಂಗಳಿಂದಲೇ ಕೋವಿಡ್ ಎರಡನೇ ಅಲೆಯ ಬಾಧೆಗೊಳಗಾದ ಜನತೆಗೆ ಘೋಷಿಸಲಾದ ಈ ನೆರವು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಿದೆ.

ತಜ್ಞರ ಪ್ರಕಾರ ಈ ಕೋವಿಡ್ ಅಲೆ ಜುಲೈ – ಆಗಷ್ಟ್ ತಿಂಗಳವರೆಗೆ ಮುಂದುವರೆಯಲಿದ್ದು, ಮುಂದೆ ಸೆಪ್ಟಂಬರ್ ನಂತರ ಮೂರನೇ ಅಲೆ ಅಪ್ಪಳಿಸುವ ಭೀತಿಯು ನಮ್ಮ ಮುಂದಿದೆ. ಪರಿಸ್ಥಿತಿ ಹೀಗಿರುವಾಗ, ಕೋವಿಡ್ ಬಾದೆ ನಿವಾರಣೆಯಾಗಿ, ಯಥಾ ಸ್ಥಿತಿ ನಿರ್ಮಾಣ ವಾಗುವವರೆಗೆ ರಾಜ್ಯದ ಜನತೆಗೆ ಸರಕಾರ ನೆರವು ನೀಡಿ ರಕ್ಷಿಸ ಬೇಕಾಗಿದೆ.

ಸರಕಾರವೇ ತಿಳಿಸಿದಂತೆ ಸುಮಾರು 1.27 ಕೋಟಿ ಬಿಪಿಎಲ್, ಅಂತ್ಯೋದಯ ಕಾರ್ಡ್ ದಾರರಿಗೆ ಬಹುತೇಕ ನೀಡಲಾದ ನೆರವು ಇದಾಗಿದೆ. ತಲಾ ಕುಟುಂಬಗಳಿಗೆ ಸುಮಾರು ಸರಾಸರಿ ಕೇವಲ 500 ರೂ. ಗಳಿಗಿಂತಲೂ ಕಡಿಮೆ ಆಗಿದೆ. ಅಂದರೇ ತಲಾ ವ್ಯಕ್ತಿಗೆ 125 ರೂಗಳಷ್ಟಾದರೂ ಪರಿಹಾರವಿಲ್ಲ.

ಕೇಂದ್ರ ಸರಕಾರದ ನೆರವಿನಲ್ಲಿ ಕೇವಲ ಎರಡು ತಿಂಗಳಿಗಷ್ಟೇ ತಲಾ ಐದು ಕೆ.ಜಿ. ಅಕ್ಕಿ ಮಾತ್ರವೇ ನೀಡಲಾಗುತ್ತದೆ. ಇತರೇ ಧಾನ್ಯಗಳು ಮತ್ತು ತರಕಾರಿ ಮತ್ತಿತರೆ ಸಾಮಾಗ್ರಿ ಖರೀದಿಸಲು ಯಾವುದೇ ನೆರವಿಲ್ಲ. ಕೇವಲ 89,000 ರೈತರಿಗೆ ಪ್ರತಿ ಎಕರೆಗೆ ಹೂ– ಹಣ್ಣು, ತರಕಾರಿ ಬೆಳೆಗಾರರಿಗೆ ಕೇವಲ 4,000 ರೂ.ಗಳ ಪರಿಹಾರ ಘೋಷಿಸಿದೆ. ಇದು, ಈ ರೈತರು ತಲಾ ಎಕರೆಯಲ್ಲಿ ನಷ್ಟ ಹೊಂದಿದುದರ ಕೇವಲ ಶೇ. 5 ರಷ್ಟು ಮಾತ್ರವೇ ಆಗಿದೆ.

ರಾಜ್ಯದ ಬಹುತೇಕ ಭತ್ತ, ತೊಗರಿ, ಮೆಕ್ಕೆಜೋಳ, ರೇಷ್ಮೆ, ಈರುಳ್ಳಿ, ಒಣ ಮೆಣಸಿನಕಾಯಿ ಮುಂತಾದ ದಶಲಕ್ಷಾಂತರ ಬೆಳೆಗಾರರಿಗೆ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಯೂ ದೊರೆಯದೇ ಲೂಟಿಗೊಳಗಾದವರಿಗೆ ಯಾವುದೇ ಪರಿಹಾರವಿಲ್ಲ.

ಉದ್ಯೋಗ ಖಾತ್ರಿ ಕೆಲಸ ಸಿಗದೇ ನಿರುದ್ಯೋಗ ಎದುರಿಸುವ ಕೃಷಿಕೂಲಿಕಾರರಿಗೆ ಯಾವುದೇ ಪರಿಹಾರವಿಲ್ಲ. ಅದೇ ರೀತಿ, ಮನೆ ಮನೆ ತಿರುಗಿ ಹೂ– ಹಣ್ಣು, ತರಕಾರಿ ಮಾರಾಟ ಮಾಡುವ ನಿರುದ್ಯೋಗಕ್ಕೆ, ಮದುವೆ ಮತ್ತಿತರೆ ಸಂಭ್ರಮದ ಕಾರ್ಯ ಕ್ರಮಗಳಿಲ್ಲದೇ ನಿರುದ್ಯೋಗ ಎದುರಿಸುವ ಮಂಗಳವಾದ್ಯ ಕಲಾವಿದರು, ಬಾಣಸಿಗರು ಮುಂತಾದವರಿಗೆ, ಅಕ್ಷರ ದಾಸೋಹ, ಹಾಸ್ಟೆಲ್ ಸಿಬ್ಬಂದಿಯವರಿಗೆ ಯಾವುದೇ ನೆರವಿಲ್ಲ. ಮಸಣಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ವಿಮೆಯಾಗಲೀ, ಸುರಕ್ಷತಾ ಕ್ರಮಗಳಾಗಲೀ, ವಿಶೇಷ ನೆರವಾಗಲೀ ಇಲ್ಲ.

ಕರ್ಫ್ಯೂ, ಲಾಕ್ ಡೌನ್, ಸಂಪೂರ್ಣ ಲಾಕ್ ಡೌನ್ ಕಾರಣದಿಂದ, ಆದಾಯವಿಲ್ಲದವರ ಸಾಲ ಹಾಗೂ ಸ್ತ್ರೀಶಕ್ತಿ, ಸ್ವ ಸಹಾಯ ಗುಂಪುಗಳ ಮಹಿಳೆಯರ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಸಾಲದ ಮೇಲಿನ ಬಡ್ಡಿ ಮನ್ನಾ ಯಾವುದೂ ಇಲ್ಲ.

ಇನ್ನು ಸಾರಿಗೆ, ಕಟ್ಟಡ ಮುಂತಾದ ಕಾರ್ಮಿಕರಿಗೆ ಘೋಷಿಸಲಾದ ನೆರವು ಕೇವಲ 3,000 ರೂ. ಮಾತ್ರವೇ ಆಗಿದೆ. ಕಾರ್ಮಿಕರ ವೇತನ ಸಹಿತ ರಜೆಯ ವಿಚಾರದ ಪ್ರಸ್ತಾಪವೇ ಇಲ್ಲ.

ಇದೆಲ್ಲಾ, ದುಃಖಕ್ಕೀಡು ಮಾಡಿದವನೇ, ದುಃಖಿತನ ಕಣ್ಣೀರು ಒರೆಸಿ, ಒಣ ಪ್ರಚಾರ ಪಡೆಯುವ ಕ್ರೌರ್ಯದ ಕೆಲಸದಂತೆ ತೋರುತ್ತಿದೆ. ಕೋವಿಡ್ ಸಂಕಷ್ಟದಲ್ಲಿರುವ ಮತ್ತು ಹಸಿವಿನ ಆತಂಕದಲ್ಲಿರುವ ಜನತೆಯ ಜೊತೆ ನಿಲ್ಲಲು ಸರಕಾರ ಪ್ರಾಮಾಣಿಕವಾಗಿಲ್ಲವೆಂಬುದನ್ನು ಮರಳಿ ಇದು ಬೆತ್ತಲುಗೊಳಿಸುತ್ತಿದೆ.

ತಕ್ಷಣವೇ ಸಮಗ್ರ ಪರಿಹಾರದ ಕ್ರಮಗಳಿಗೆ ತುರ್ತು ಗಮನ ನೀಡಲೇ ಬೇಕೆಂದು ಸಿಪಿಐ(ಎಂ) ಮುಖ್ಯಮಂತ್ರಿಗಳನ್ನು ಬಲವಾಗಿ ಮರಳಿ ಒತ್ತಾಯಿಸುತ್ತದೆ.

ಕೋವಿಡ್ ಬಾಧೆ ನಿವಾರಣೆಯಾಗಿ ಯಥಾಸ್ಥಿತಿ ನಿರ್ಮಾಣವಾಗುವವರೆಗೆ, ಎಲ್ಲಾ ಬಿಪಿಎಲ್, ಅಂತ್ಯೋದಯ ಹಾಗೂ ಅಗತ್ಯವಿರುವ ಎಪಿಎಲ್ ಕಾರ್ಡ್ ದಾರರಿಗೆ ತಲಾ 10 ಕೆ.ಜಿ. ಅಗತ್ಯ ವಿವಿಧ ಆಹಾರ ಸಾಮಗ್ರಿಗಳನ್ನು ಕೇರಳ ಸರಕಾರದ ಮಾದರಿಯಲ್ಲಿ ನೀಡಬೇಕು. ರಾಜ್ಯ ಸರಕಾರ ಪಡಿತರ ಕಡಿತಮಾಡಿರುವುದನ್ನು ವಾಪಾಸು ಪಡೆದು ಪೂರ್ಣ ಪಡಿತರ ನೀಡಬೇಕು. ಅದೇ ರೀತಿ, ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ, ಕನಿಷ್ಠ ಈ ಎಲ್ಲಾ ಕುಟುಂಬಗಳಿಗೆ ಮಾಸಿಕ 10,000 ರೂ. ಗಳ ನೆರವು ಒದಗಿಸಬೇಕು.

ಅದೇ ರೀತಿ, ಈ ಎಲ್ಲಾ ಕುಟುಂಬಗಳಿಗೆ ಆರೋಗ್ಯ ಸುರಕ್ಷತಾ ಕಿಟ್ ಒದಗಿಸಬೇಕು. ವೃದ್ಧಾಪ್ಯ, ವಿಧವಾ, ಅಂಗವಿಕಲರ, ದೇವದಾಸಿ ಮಹಿಳೆಯರು ಸೇರಿದಂತೆ ಎಲ್ಲಾ ಸಾಮಾಜಿಕ ಪಿಂಚಣಿದಾರರ ಬಾಕಿ ವೇತನ ಮತ್ತು ಮುಂದಿನ ಮೂರು ತಿಂಗಳ ಮುಂಗಡ ವೇತನವನ್ನು ಒಂದೇ ಬಾರಿ ಕೂಡಲೇ ಒದಗಿಸಬೇಕು.

ಅರೆ ಬರೆ ಪ್ಯಾಕೇಜ್ ಜೀವನ ಉಳಿಸದು: ಸಿಪಿಐ(ಎಂ)

ರಾಜ್ಯದ ಮುಖ್ಯಮಂತ್ರಿ ಪ್ರಕಟಿಸಿರುವ ಪ್ಯಾಕೇಜ್ ಅರೆ ಬರೆ ಪ್ಯಾಕೇಜ್ ಆಗಿದೆ ಕೋವಿಡ್ ಸಂಕಷ್ಟದ ವೇಳೆ ಜನತೆಯ ಜೀವನ ಉಳಿಸದು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಟೀಕಿಸಿವೆ.

ಆದಾಯ ತೆರಿಗೆಯಿಂದ ಹೊರಗಿರುವ ರಾಜ್ಯದ ಪ್ರತಿ ಕುಟುಂಬಕ್ಕೆ ಮಾಸಿಕ ಹತ್ತು ಸಾವಿರ ರೂಪಾಯಿ ಪರಿಹಾರವನ್ನು ಕನಿಷ್ಠ 6 ತಿಂಗಳು ನೀಡಬೇಕು ಮತ್ತು ಪ್ರತಿಯೊಂದು ಕುಟುಂಬಕ್ಕೂ ತಲಾ 10 ಕೆಜಿ ಉಚಿತ ಪಡಿತರ ನೀಡಬೇಕು ಹಾಗು ಉದ್ಯೋಗ ಖಾತ್ರಿ ಕೆಲಸವನ್ನು 600 ರೂ ಕೂಲಿಯೊಂದಿಗೆ 200 ದಿನಗಳಿಗೆ ಹೆಚ್ಚಿಸಿ ನಗರ ಪ್ರದೇಶಕ್ಕೂ ವಿಸ್ತರಿಸಬೇಕೆಂಬುದು ಸಿಪಿಐ(ಎಂ) ಮತ್ತು ಜನತೆಯ ಒತ್ತಾಯವಾಗಿದೆ. ಆದರೆ ಮುಖ್ಯ ಮಂತ್ರಿಗಳು ಪ್ರಕಟಿಸಿರುವ ಕೇವಲ 1250 ಕೋಟಿ ರೂಗಳ ಪ್ಯಾಕೇಜ್ ಅಗತ್ಯದ ಒಂದು ಶೇಕಡ ಪರಿಹಾರ ಸಹಾ ಆಗಿರುವುದಿಲ್ಲ ಎಂದಿದೆ ಸಿಪಿಐ(ಎಂ).

ಕೋವಿಡ್ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸದ ರಾಜ್ಯ ಬಿಜೆಪಿ ಸರ್ಕಾರವು ಅರೆಬರೆ ಲಾಕ್ಡೌನ್ ಘೋಷಿಸಿದೆ. ಇದೀಗ ಅರೆ ಬರೆ ಪ್ಯಾಕೇಜ್ ಘೋಷಿಸಿದೆ. ಹಾಗಾಗಿ ರಾಜ್ಯ ಬಿಜೆಪಿ ಸರ್ಕಾರದ ಕೋವಿಡ್ ನಿಯಂತ್ರಣ ಕ್ರಮಗಳು ಜನರ ಜೀವವನ್ನು ಉಳಿಸುವುದಿಲ್ಲ ಮಾತ್ರವಲ್ಲದೆ ಪ್ಯಾಕೇಜ್ ಜೀವನವನ್ನು ರಕ್ಷಿಸದು ಎಂದಿದೆ ಸಿಪಿಐ(ಎಂ).

ಕಳೆದ ವರ್ಷದ ಪ್ಯಾಕೇಜ್ ನ ಅರ್ಧದಷ್ಟು ಸಹಾ ಇರದ ಪ್ರಸಕ್ತ ಪ್ಯಾಕೇಜ್ ಕೋವಿಡ್ 2ನೇ ಅಲೆಯ ವ್ಯಾಪಕತೆ, ಸಾವು ನೋವಿನ ಪ್ರಮಾಣಕ್ಕೆ ಅನುಗುಣವಾಗಿಲ್ಲ. ಕೇವಲ ಮೂಗಿಗೆ ತುಪ್ಪ ಸವರುವ ಪ್ಯಾಕೇಜ್ ಅನ್ನು ಜನತೆಯ ಸಿಟ್ಟನ್ನು ಶಮನ ಮಾಡಲು ರಾಜ್ಯ ಬಿಜೆಪಿ ಸರ್ಕಾರವು ಪ್ರಕಟಿಸಿದೆ ಎಂದಿದೆ ಸಿಪಿಐ(ಎಂ).

ಈ ಹಿನ್ನೆಲೆಯಲ್ಲಿ ಮೇ 21 ರಂದು ರಾಜ್ಯದ ಕಾರ್ಮಿಕರು, ರೈತರು ಮತ್ತು ಕೂಲಿಕಾರರು ಹಮ್ಮಿಕೊಂಡಿರುವ ಹಾಗು 24 ರಂದು ಅಸಂಘಟಿತ ಕಾರ್ಮಿಕರು ಹಮ್ಮಿಕೊಂಡಿರುವ ಮನೆಯಿಂದಲೆ ಪ್ರತಿಭಟನೆ ಪ್ರತಿರೋಧವನ್ನು ಸಿಪಿಐ(ಎಂ) ಬೆಂಬಲಿಸಿದೆ ಹಾಗು ಜನತೆ ಅದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದೆ.





ಕೋವಿಡ್ ನಿಭಾವಣೆಯಲ್ಲಿ ವಿಫಲರಾದ ಸರಕಾರದ ವಿರುದ್ಧ ಆಕ್ರೋಶಗೊಂಡ ರೈತ–ಕಾರ್ಮಿಕರು

ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರವು ಕೋವಿಡ್–19 ಎರಡನೇ ಅಲೆಯನ್ನು ನಿಯಂತ್ರಿಸುವ ಸಲುವಾಗಿ ಮೇ 10 ರವರೆಗೆ ಮೊದಲ ಹಂತದ ಮತ್ತು ಮೇ 24 ರವರೆಗೆ ಎರಡನೇ ಹಂತಹ ಲಾಕ್‌ಡೌನ್ ಘೋಷಣೆ ಮಾಡಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವಕೋವಿಡ್ ಸೋಂಕಿತರ ಸಂಖ್ಯೆ ಮತ್ತು ಸಾವಿನ ಪ್ರಮಾಣವು ಜನತೆಯಲ್ಲಿ ಆತಂಕವನ್ನು ಸೃಷ್ಟಿಸಿದೆ. ಇದಕ್ಕೆ ಸಂಪೂರ್ಣವಾಗಿ ಸರಕಾರದ ವಿಫಲತೆಯೇ ಕಾರಣವೆಂದು ಸಿಐಟಿಯು, ಕೆಪಿಆರ್‌ಎಸ್, ಎಐಎಡಬ್ಲ್ಯೂಯು ಸಂಘಟನೆಯು ಜಂಟಿಯಾಗಿ ಇಂದು ರಾಜ್ಯಾದ್ಯಂತ ಪ್ರತಿಭಟನೆಯನ್ನು ಹಮ್ಮಿಕೊಂಡಿತು.

ರಾಜ್ಯಾದ್ಯಂತ ನಡೆದ ಪ್ರತಿಭಟನೆಯಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆ (ಎಐಎಡಬ್ಲ್ಯೂಯು) ಜಂಟಿ ಸಂಘಟನೆಯ ಕಾರ್ಯಕರ್ತರು ಕೋವಿಡ್ ನಿಯಮಗಳ ಪಾಲಿಸಿ ತಾವು ವಾಸಿಸುವ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿ ಕೃಷಿ ಕೂಲಿಕಾರರೂ ಸೇರಿದಂತೆ 3 ಕೋಟಿಗೂ ಹೆಚ್ಚಿನ ಅಸಂಘಟಿತ ಕಾರ್ಮಿಕರು ಸರಿಯಾದ ಕೆಲಸಗಳಿಲ್ಲದೆ ಮತ್ತು ಆದಾಯಗಳಿಲ್ಲದೆ ಸಮಸ್ಯೆಗೆ ಸಿಲುಕಿದ್ದಾರೆ. ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಖಾಸಗಿ ವಾಹನ ಚಾಲಕರು, ಬೀದಿ ಬದಿ ವ್ಯಾಪಾರಿಗಳು, ಮನೆಗೆಲಸಗಾರರು, ಹಮಾಲಿಗಳು, ಬಿಸಿಯೂಟ ನೌಕರರು, ದಿನಗೂಲಿಗಳು, ಗುತ್ತಿಗೆ–ಹೊರಗುತ್ತಿಗೆಕಾರ್ಮಿಕರು, ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಸಿಬ್ಬಂದಿಗಳು ಮುಂತಾದವರು ಆದಾಯಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಸಂಘಟನೆಯ ಆರೋಪಿಸಿದೆ.

ಜನರ ಆದಾಯಗಳು ಕುಸಿದ ಮತ್ತು ಬೆಲೆಗಳ ಏರಿಳಿತದ ಪರಿಣಾಮವಾಗಿ ಕೃಷಿ ಮಾರುಕಟ್ಟೆ ಕುಸಿದಿದೆ. ಕೋವಿಡ್–19 ರಆತಂಕ ಹಾಗೂ ಲಾಕ್‌ಡೌನ್ ಕಾರಣದಿಂದ ಹೂವು, ಹಣ್ಣು ಮತ್ತು ತರಕಾರಿ ಮುಂತಾದ ಪದಾರ್ಥಗಳಿಗೆ ಮಾರುಕಟ್ಟೆ ಸಂಕುಚಿತಗೊಂಡಿದೆ. ಕೃಷಿ ಚಟುವಟಿಕೆಗಳು ಕುಂಠಿತಗೊಂಡಿವೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ರೈತರ ಆದಾಯಗಳು ಕುಸಿಯುತ್ತಿವೆ. ಕೆಲವು ಬೆಳೆಗಳಿಗೆ ನೀಡುತ್ತಿದ್ದ ಬೆಂಬಲ ಬೆಲೆಯ ಪ್ರೋತ್ಸಾಹಧನ ಘೋಷಣೆಯನ್ನು ಮತ್ತ ಖರೀದಿಯನ್ನು ನಿಲ್ಲಿಸಲಾಗಿದೆ ಎಂದು ಕೆಪಿಆರ್‌ಎಸ್ ಸಂಘಟನೆಯು ತಿಳಿಸಿದೆ.

ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಕೋವಿಡ್ ಪರಿಹಾರ ಎಂಬ ತೋರಿಕೆಯ ಕ್ರಮಗಳನ್ನು ಘೋಷಿಸಿದೆ. ವಿವಿಧ ಜನ ವಿಭಾಗಗಳಿಗೆ 2 ರಿಂದ 3 ಸಾವಿರ ಪರಿಹಾರವೆಂದು ಘೋಷಿಸಲಾಗಿದ್ದು, ಇದಕ್ಕಾಗಿಬಟ್ಟು ರೂ. 1,111.82 ಕೋಟಿಗಳನ್ನು ಖರ್ಚು ಮಾಡುತ್ತಿರುವುದಾಗಿ ಸರ್ಕಾರ ಹೇಳಿದೆ. ಇದರಲ್ಲಿ ಕಟ್ಟಡ ಕಾರ್ಮಿಕಕಲ್ಯಾಣ ಮಂಡಳಿಯ ರೂ. 494 ಕೋಟಿಗಳನ್ನು ಬಳಸಲಾಗುತ್ತಿದೆ. ಹೀಗಾಗಿ ಸರ್ಕಾರ ಅಸಲಿಗೆ ಖರ್ಚು ಮಾಡುತ್ತಿರುವುದುರೂ. 617.82 ಕೋಟಿಗಳು ಮಾತ್ರ. ರಾಜ್ಯದಲ್ಲಿ ಸುಮಾರು 3 ಕೋಟಿ ಅಸಂಘಟಿತ ಕಾರ್ಮಿಕರಿದ್ದು ಇಷ್ಟು ಅತ್ಯಲ್ಪ ಮೊತ್ತವನ್ನು ಕೇವಲ ಕೆಲವೇ ಜನರಿಗೆ ಮಾತ್ರ ಕೊಡಬಹುದು. ಬಹುಸಂಖ್ಯಾತ ಅಸಂಘಟಿತ ಕಾರ್ಮಿಕರಿಗೆ ಯಾವುದೇ ಪರಿಹಾರವೂ ಸಿಗುವುದಿಲ್ಲ. ಎಲ್ಲ ಅಸಂಘಟಿತರಿಗೂ ಸರ್ಕಾರರೂ. 10,000 ಪರಿಹಾರವನ್ನು ಮ ತಲಾ 10 ಕೆಜಿ ರೇಷನ್ ನೀಡಬೇಕಾಗಿದೆ ಎಂದು ಸಿಐಟಿಯು ಸಂಘಟನೆಯು ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಜಂಟಿ ಸಂಘಟನೆಗಳು ಬೇಡಿಕೆಗಳಿಗೆ ಈಡೇರಿಸಬೇಕೆಂದು ಪ್ರತಿಭಟನೆ ಮೂಲಕ ರಾಜ್ಯ ಸರಕಾರವನ್ನು ಆಗ್ರಹಿಸಿವೆ.

ಬೇಡಿಕೆಗಳು

1. ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಆಟೋ, ಟ್ಯಾಕ್ಸಿ, ಗೂಡ್ಸ್ ಮುಂತಾದ ಖಾಸಗಿ ಮತ್ತು ವಾಣಿಜ್ಯ ವಾಹನ ಚಾಲಕರು, ಬೀದಿ ಬದಿ ವ್ಯಾಪಾರಿಗಳು, ಮನೆಗೆಲಸಗಾರರು, ಹಮಾಲಿಗಳು, ಬಿಸಿಯೂಟ ನೌಕರರು, ದಿನಗೂಲಿಗಳು, ಗುತ್ತಿಗೆ–ಹೊರಗುತ್ತಿಗೆ ಕಾರ್ಮಿಕರು, ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಸಿಬ್ಬಂದಿಗಳು, ಮೆಕ್ಯಾನಿಕ್‌ಗಳು, ಕ್ಷೌರಿಕರು, ದೋಬಿಗಳು, ಸೆಕ್ಯೂರಿಟಿಗಳು ಮುಂತಾದ ಎಲ್ಲಾಅಸಂಘಟಿತ ಶ್ರಮಜೀವಿಗಳಿಗೆ ಮತ್ತುಆದಾಯ ತೆರಿಗೆ ಪಾವತಿ ವ್ಯಾಪ್ತಿಯಲ್ಲಿ ಬರದಿರುವ ರೈತ ಕೂಲಿಕಾರರು, ಬಡ ರೈತರು ಹಾಗೂ ದಲಿತರೂ ಸೇರಿದಂತೆ ಎಲ್ಲರಿಗೂ ಪ್ರತಿ ತಿಂಗಳು ರೂ.10,000 ದಂತೆ ಮೂರು ತಿಂಗಳು ನೇರ ಹಣ ವರ್ಗಾವಣೆ ಮಾಡಬೇಕು. ಈಗಾಗಲೇ ರಾಜ್ಯದ ವಿವಿಧ ಮೂಲಗಳಿಂದ'ಪಿಎಂ–ಕೇರ್ಸ್'ಗೆ ನೀಡಲಾಗಿರುವ ಹಣದಲ್ಲಿ ಪಾಲು ಹಾಗೂ ರಾಜ್ಯದ ಎಲ್ಲ ಕಾರ್ಪೊರೇಟ್ ಕಂಪನಿಗಳ ಬಳಿಯಿರುವ ಸಿಎಸ್‌ಆರ್ ನಿಧಿಯನ್ನು ಸಮರ್ಪಕವಾಗಿ ಕ್ರೋಢೀಕರಿಸಿದರೆ ಇದಕ್ಕೆ ಬೇಕಾದ ಸಂಪನ್ಮೂಲವನ್ನು ಸಂಗ್ರಹಿಸಬಹುದು.
2. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾವಣೆಯಾಗಿರುವ ಎಲ್ಲಾ ಫಲಾನುಭವಿಗಳಿಗೆ ವಾರಕ್ಕೆ ರೂ. 2,500 ರಂತೆ ಮಾಸಿಕ ರೂ. 10,000 ಪರಿಹಾರವನ್ನುಒದಗಿಸಬೇಕು. ಇದರಿಂದ ಜನರ ಆದಾಯವನ್ನು ಸಂರಕ್ಷಿಸಲು ಮತ್ತು ಆರೋಗ್ಯವನ್ನು ಕಾಪಾಡಲು ಸಹಾಯಕವಾಗುತ್ತದೆ. ರಾಜ್ಯ ಸರ್ಕಾರ ಘೋಷಿಸಿರುವ ಪರಿಹಾರ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಾಗಿದೆ. ಇದರಿಂದ ವಾಸ್ತವದಲ್ಲಿ ಬಹುತೇಕರಿಗೆ ಪ್ರಯೋಜವಾಗುವುದಿಲ್ಲ.
3. ಕೈಗಾರಿಕಾ ಕಾರ್ಮಿಕರಿಗೆ ಹಾಗೂ ಸಂಘಟಿತ ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯಲ್ಲಿ ನೀಡಲಾಗುವ ರಜೆಗಳನ್ನು "ಸಂಬಳ ಸಹಿತ ರಜೆ" ಎಂದು ಘೋಷಿಸಬೇಕು. ಈ ಅವಧಿಯಲ್ಲಿ ಯಾವುದೆ ಲೇ–ಆಫ್, ರಿಟ್ರೆಂಚ್ಮೆಂಟ್ ಹಾಗು ಉದ್ಯೋಗ ನಷ್ಟವಾಗುವ ಯಾವುದೇ ಕ್ರಮಗಳನ್ನು ಕಾನೂನು ಬಾಹಿರವೆಂದು ಘೋಷಿಸಬೇಕು.
4. ರೈತರ ಬದುಕನ್ನುಕಾರ್ಪೊರೇಟ್ ಕಂಪನಿಗಳ ಅಧೀನಕ್ಕೆ ಒಪ್ಪಿಸುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೃಷಿ ಕಾಯ್ದೆಗಳನ್ನು ಕೈಬಿಡುವಂತೆ ರಾಜ್ಯ ಸರ್ಕಾರ ತೀರ್ಮಾನಿಸಬೇಕು. ರೈತರ ಬೆಳೆಗೆ ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆಯನ್ನುಒದಗಿಸಬೇಕು. ಎಲ್ಲಾ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗೆ ಪ್ರೋತ್ಸಾಹ ಧನ ಘೋಷಿಸಬೇಕು. ಮಾರುಕಟ್ಟೆಯಿಲ್ಲದೆ ನಷ್ಟಕ್ಕೊಳಗಾಗುತ್ತಿರುವುದರಿಂದ ರೈತರಿಗೆ ಬೆಳೆ ಪರಿಹಾರವನ್ನು ಘೋಷಿಸಬೇಕು.
5. ಗ್ರಾಮೀಣ ಉದ್ಯೋಗ ಖಾತ್ರಿ ಅಡಿಯಲ್ಲಿ ಕೃಷಿ ಕೂಲಿಕಾರರಿಗೆ ಕನಿಷ್ಟ 200 ದಿನಗಳ ಉದ್ಯೋಗವನ್ನು ನೀಡಬೇಕು. ದಿನದಕೂಲಿಯನ್ನು 700 ರೂಗಳಿಗೆ ಹೆಚ್ಚಿಸಬೇಕು. ದಿನಗೂಲಿಗಳ ಬಾಕಿ ವೇತನವನ್ನು ಕೂಡಲೇ ಪಾವತಿಸಬೇಕು. ಕೃಷಿ ಕೂಲಿಕಾರರಿಗೆ ಸಮಗ್ರವಾದ ಸಾಮಾಜಿಕ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಬೇಕು.
6. ಕರ್ನಾಟಕ ರಾಜ್ಯದ ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ.ಆಹಾರ ಧಾನ್ಯವನ್ನುಆರು ತಿಂಗಳ ಕಾಲ ಪಡಿತರ ವ್ಯವಸ್ಥೆ ಮೂಲಕ ಉಚಿತವಾಗಿ ನೀಡಬೇಕು. ಎಫ್‌ಸಿಐ ಮಳಿಗೆಗಳಲ್ಲಿ ಆಹಾರ ಧಾನ್ಯಗಳು ಕೊಳೆಯುವುದನ್ನು ತಪ್ಪಿಸಿ, ಅದನ್ನು ಜನರಿಗೆ ಹಂಚಬೇಕು. ಪ್ರತಿಯೊಬ್ಬರಿಗೂ 10 ಕೆ.ಜಿ. ಆಹಾರ ಧಾನ್ಯಗಳನ್ನು ಉಚಿತವಾಗಿ ನೀಡಬೇಕೆಂಬ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿರುವು ಸೂಚನೆಯನ್ನು ರಾಜ್ಯ ಸರ್ಕಾರವು ಪಾಲಿಸಬೇಕು. ನೆರೆಯ ಕೇರಳ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳು ಅಲ್ಲಿನ ಜನತೆಗೆ ಉಚಿತ ರೇಷನ್ ಮತ್ತು ಹಣಕಾಸಿನ ನೆರವನ್ನು ನೀಡುತ್ತಿರುವ ರೀತಿಯಲ್ಲಿ ಕರ್ನಾಟಕ ಸರ್ಕಾರವು ಕೂಡಲೇ ಇಂತಹ ಯೋಜನೆಯನ್ನು ಪ್ರಕಟಿಸಬೇಕು.
7. ಇಂದಿರಾ ಕ್ಯಾಂಟೀನ್‌ಗಳಲ್ಲಿ ಪೌಷ್ಟಿಕ ಮತ್ತು ಗುಣಮಟ್ಟದ ಆಹಾರವನ್ನು ನೀಡಬೇಕು. ಕೋವಿಡ್ ಪರಿಹಾರ ಸಾಮಗ್ರಿಗಳ ಖರೀದಿಯಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆಯುತ್ತಿದ್ದು ಸಮಗ್ರವಾದ ತನಿಖೆಗೆ ಒಳಪಡಿಸಬೇಕು.
8. ಕೋವಿಡ್ ಸೋಂಕಿತರನ್ನುಪತ್ತೆಹಚ್ಚಲು ಪರೀಕ್ಷೆಗಳ ವ್ಯಾಪಕತೆಯನ್ನು ಹೆಚ್ಚಿಸಬೇಕು. ಅಗತ್ಯವಾದ ಹಾಸಿಗೆಗಳು, ಔಷಧಿಗಳು, ಇಂಜೆಕ್ಷನ್‌ಗಳು, ಆಮ್ಲಜನಕ, ವೆಂಟಿಲೇಟರ್ ವ್ಯವಸ್ಥೆಗಳನ್ನು ಸಮರೋಪಾದಿಯಲ್ಲಿ ಒದಗಿಸಬೇಕು. ಇದಕ್ಕೆಅಗತ್ಯವಾದ ಹಣವನ್ನುಕ್ರೋಢೀಕರಿಸಲು, ತುರ್ತಲ್ಲದ ಬಂಡವಾಳ ವೆಚ್ಚದ ಯೋಜನೆಗಳನ್ನು ಮುಂದೂಡಬೇಕು. ಲಸಿಕೆಯನ್ನು ಸಾರ್ವತ್ರಿಕವಾಗಿ ಹಾಗೂ ಉಚಿತವಾಗಿ ನೀಡಬೇಕು. ಕೋವಿಡ್ ಆತಂಕದ ಸಂದರ್ಭಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಕಾಳಸಂತೆಕೋರರ ಮೇಲೆ ತೀವ್ರವಾದ ಕ್ರಮಕೈಗೊಳ್ಳಬೇಕು. ಮುಂಚೂಣಿಯಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕೋವಿಡ್ ಯೋಧರಿಗೂ ಕಡ್ಡಾಯ 30 ಲಕ್ಷ ವಿಮೆಯನ್ನು ಖಾತ್ರಿಗೊಳಿಸಬೇಕು.

ಈ ಮೇಲಿನ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ವಿವಿಧ ಜಿಲ್ಲೆಗಳಿಂದ ರಾಜ್ಯದ ಮುಖ್ಯಮಂತ್ರಿಗಳಿಗೆ ಜಂಟಿ ಸಂಘಟನೆಗಳು ಮನವಿಯನ್ನು ಸಲ್ಲಿಸಿದೆ.

ರಾಜ್ಯ ಸರಕಾರವು ಬೇಡಿಕೆಗಳನ್ನು ಈಡೇರಿಸಲಿ ಒತ್ತಾಯಿಸಿ ಪ್ರತಿಭಟನೆಯಲ್ಲಿ ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ ಎಲ್ಲಾ ರೈತ ಕಾರ್ಮಿಕ ಸಂಘಟನೆಯ ಕಾರ್ಯಕರ್ತರು ಮತ್ತು ಜನತೆಗೆ ಸಿಐಟಿಯು ಸಂಘಟನೆಯ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕೆಪಿಆರ್‌ಎಸ್ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ, ಎಐಎಡಬ್ಲ್ಯೂಯು ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಅವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಕಾಂ. ಪಿ. ಚಂದ್ರಯ್ಯ ಇನ್ನಿಲ್ಲ



ಪಕ್ಷದ ರಾಜಾಜೀನಗರ ವಲಯ ಸಮಿತಿ ಸದಸ್ಯರು ಹಾಗು ಶ್ರೀರಾಂಪುರ ಶಾಖೆಯ ಕಾರ್ಯದರ್ಶಿಗಳಾದ ಕಾಂ. ಪಿ. ಚಂದ್ರಯ್ಯ (40 ವರ್ಷ) ರವರು ನಮ್ಮನ್ನಗಲಿದ್ದಾರೆ.

ನಾಲ್ಕು ದಿನಗಳ ಹಿಂದಷ್ಟೇ ಕೋವಿಡ್ ಸೊಂಕಿನಿಂದ ಅಲ್ಪಮಟ್ಟಿಗೆ ಚೇತರಿಸಿಕೊಂಡು ಬಂದಿದ್ದ ಅವರು, ಆಕ್ಸಿಜನ್ ಪ್ರಮಾಣ ಕಡಿಮೆಯಾಗಿ ಮೇ 21 ರಂದು ನಿಧನರಾದರು.

ಬೆಂಗಳೂರು ನೇಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರಖರ ಪ್ರತಿಪಾದಕರಾಗಿ ಅತ್ಯಂತ ಕ್ರಿಯಾಶೀಲ ಸಂಗಾತಿಯಾಗಿದ್ದರು. ಈ ಹಿಂದೆ ಡಿ.ವೈ.ಎಫ್.ಐ. ಸಂಘದ ಜಿಲ್ಲಾ ಮುಖಂಡರು ಕೂಡ ಆಗಿದ್ದರು.

ಈ ಕ್ರೂರ ಬಂಡವಾಳಶಾಹಿ ವ್ಯವಸ್ಥೆ ಹಾಗು ಪ್ರಸಕ್ತ ಸರ್ಕಾರದ ಕೊಲೆಗಡುವ ನೀತಿಯಿಂದ ಮತ್ತೊಂದು ಪ್ರಾಮಾಣಿಕ ಹೋರಾಟದ ಸಂಗಾತಿಯನ್ನು ಕಳೆದುಕೊಂಡಿದ್ದೇವೆ ಎಂದು ಕಾಂ. ಪಿ. ಚಂದ್ರಯ್ಯ ರವರಿಗೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ದ.ಕ. ಜಿಲ್ಲೆಯ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯಕ್ಕೆ ಆಹಾರ ಸಾಮಾಗ್ರಿ ಸಹಿತ ಪ್ರಾಕೃತಿಕ ವಿಕೋಪ ಪರಿಹಾರ ಒದಗಿಸಲು ಒತ್ತಾಯ



ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ, ಪಲ್ಗುಣಿ ನದಿ ತೀರದಲ್ಲಿ ಟೆಂಟ್ ಗಳನ್ನು ನಿರ್ಮಿಸಿ ಕಳೆದ ಹಲವಾರು ವರುಷಗಳಿಂದ ವಾಸಿಸುತ್ತಿರುವ ಅಲೆಮಾರಿ ಶಿಳ್ಳೆಕ್ಯಾತ ಜನಾಂಗವು ತೆಪ್ಪದ ಮೂಲಕ ಮೀನು ಹಿಡಿಯುವ ಕಾಯಕ ನಡೆಸಿ ಜೀವನ ಸಾಗಿಸುತ್ತಾ ಬಂದಿದೆ. ಈ ಸಮುದಾಯವು ಯಾವುದೇ ಕನಿಷ್ಟ ಮೂಲಭೂತ ಸೌಕರ್ಯಗಳಾದ, ವಸತಿ, ನೀರು, ರಸ್ತೆ, ವಿದ್ಯುತ್, ಶೌಚಾಲಯಗಳಿಲ್ಲದೆ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಕಳೆದ ಸುಮಾರು 15 ವರುಷಗಳಿಂದ ನದಿ ತೀರವನ್ನೇ ನಂಬಿ ಅಲ್ಲೆ ಗುಡಿಸಲು ನಿರ್ಮಿಸಿ ದಿನನಿತ್ಯ ಆತಂಕದಿಂದ ಬದುಕುತ್ತಿರುವ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯವು ವರ್ಷಂಪ್ರತಿ ಮಳೆಗಾಲದ ಸಂದರ್ಭ ಸುರಿವ ವಿಪರೀತ ಮಳೆಯಿಂದ ನದಿ ಪಾತ್ರ ತುಂಬಿ ಪ್ರವಾಹ ಬರುವ ಸನ್ನಿವೇಶ ಸೃಷ್ಟಿಯಾದಾಗ ನೆಮ್ಮದಿಯಿಂದ ಬದುಕು ನಿರ್ವಹಿಸಲು ಹೆಣಗಾಡುತ್ತಿದ್ದಾರೆ. ಮೊನ್ನೆಯಿಂದ ತೌಕ್ತೆ ಚಂಡಮಾರುತದ ಪ್ರಭಾವದಿಂದ ವಿಪರೀತವಾಗಿ ಬೀಸಿದ ಬಿರುಗಾಳಿ, ಮಳೆಗೆ ಇವರ ಗುಡಿಸಲುಗಳು ಹಾರಿಹೋಗಿ ಗಾಳಿ, ಮಳೆಯಿಂದ ತಮ್ಮನ್ನು ತಾವು ಕಾಪಾಡಲು ಪೇಚಾಡುವ ಸ್ಥಿತಿ ನಿರ್ಮಾಣವಾಗಿದೆ. ಮಂಗಳೂರಿನ ಹೊಯಿಗೆಬಜಾರ್ ನಲ್ಲಿ ಗುಡಿಸಲು ನಿರ್ಮಿಸಿ ಬದುಕುತ್ತಿರುವ ಎಂಟು ಶಿಳ್ಳೆಕ್ಯಾತ ಕುಟುಂಬಗಳ ಟೆಂಟುಗಳು ಮೊನ್ನೆಯ ಚಂಡಮಾರುತದಿಂದಾಗಿ ಬೀಸಿದ ಬಿರುಗಾಳಿ ಮತ್ತು ಮಳೆಗೆ ಹಾರಿ ಹೋಗಿ ಬಹಳ ನಷ್ಟವನ್ನು ಅನುಭವಿಸಿರುತ್ತಾರೆ. ಮಾತ್ರವಲ್ಲದೆ ಕೋರೋನಾ ರೋಗದ ಈ ಕಾಲಘಟ್ಟದಲ್ಲಿ ಉಂಟಾದ ಸಮಸ್ಯೆ ಮತ್ತು ಲಾಕ್ಡೌನ್ ತಮ್ಮ ಬದುಕಿಗೆ ಮೂಲ ಆಧಾರವಾಗಿದ್ದ ಕುಲ ಕಸುಬನ್ನೇ ಕಸಿದುಕೊಂಡಿದೆ. ಒಂದೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನಲೆಯಲ್ಲಿ ಜಿಲ್ಲಾಡಳಿತ ಕೂಡಲೇ ಸಂಕಷ್ಟದ ಸುಳಿಯಲ್ಲಿರುವ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯ ರಕ್ಷಣೆಗೆ ಬೇಕಾದ ಪರಿಹಾರಗಳನ್ನು ಒದಗಿಸಿಕೊಡಬೇಕು. ಚಂಡಮಾರುತದಿಂದಾಗಿ ಹಾನಿಗೊಳಗಾದ ಕುಟುಂಬಗಳಿಗೆ ಆರ್ಥಿಕ ಪರಿಹಾರ ಸಹಿತ ಶಾಶ್ವತ ನಿವೇಶನ ಮತ್ತು ವಸತಿ ವ್ಯವಸ್ಥೆ ಕಲ್ಪಿಸಬೇಕು. ಹಾಗೂ ಜಿಲ್ಲೆಯ ಎಲ್ಲಾ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯಕ್ಕೆ ಬೇಕಾದ ಆಹಾರ ಭದ್ರತೆ ಈ ಕೂಡಲೇ ಒದಗಿಸಬೇಕು ಎಂದು ಕರಾವಳಿ ವೃತ್ತಿನಿರತ ಅಲೆಮಾರಿ ಹಕ್ಕುಗಳ ಸಮಿತಿಯ ಗೌರವಾದ್ಯಕ್ಷ, ಡಿವೈಎಫ್ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಡಿವೈಎಫ್ಐ ಮಂಗಳೂರು ಸಹಾಯವಾಣಿಯಿಂದ ರಕ್ತದಾನ ಶಿಬಿರ

ಕೋವಿಡ್ ಗೆ ಸಂಬಂಧಿಸಿ ಮಂಗಳೂರು ಡಿವೈಎಫ್ಐ ಸಂಘಟನೆ ನಡೆಸುತ್ತಿರುವ ಹೆಲ್ಪ್ ಲೈನ್ ಕಳೆದ ಹಲವು ದಿನಗಳಿಂದ ನಿರಂತರ ಕೆಲಸ ನಿರ್ವಹಿಸುತ್ತಿದೆ.

ಡಿವೈಎಫ್ಐ ಸಹಾಯವಾಣಿ ತಂಡವು ಕೋವಿಡ್ ಸೋಂಕಿತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಆಯುಷ್ಮಾನ್ ಅಡಿ ಉಚಿತ ಬೆಡ್ ಗಳನ್ನು ಒದಗಿಸುವುದು, ಬಿಲ್‌ಗಳಲ್ಲಿ ಆಗಿರುವ ವ್ಯತ್ಯಾಸಗಳನ್ನು ಸರಿಪಡಿಸುವುದು, ಜಿಲ್ಲಾಡಳಿತದ ಅಧಿಕಾರಿಗಳ ಸಂಪರ್ಕ ಪಡೆದು ದುಬಾರಿ ಬಿಲ್ ಗಳಲ್ಲಿ ಡಿಸ್ಕೌಂಟ್ ಮಾಡಿಸುವುದು, ಹೋಂ ಐಸೊಲೇಷನ್ ನಲ್ಲಿ ಇರುವ ಸೋಂಕಿತರಿಗೆ ಔಷಧಿ ತಲುಪಿಸುವುದು, ಸೋಂಕಿತರ, ಐಸೊಲೇಷನ್ ನಲ್ಲಿ ಇರುವವರ ಮನೆಗಳನ್ನು ಸ್ಯಾನಿಟೈಜ್ ಮಾಡುವುದು ಹಾಗೂ ತುರ್ತು ಸಂದರ್ಭದಲ್ಲಿ ಅಗತ್ಯ ಇರುವ ರೋಗಿಗಳಿಗೆ ರಕ್ತದಾನ ಮಾಡುವುದು ಹೀಗೆ ಹಲವು ಕೆಲಸಗಳನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ.

17-05-2021 ರ ಸೋಮವಾರ ಡಿವೈಎಫ್ಐ ಮಂಗಳೂರು ಸಹಾಯವಾಣಿ ನೇತೃತ್ವದಲ್ಲಿ ಬೆಂಗರೆ ಪ್ರದೇಶದ ಡಿವೈಎಫ್ಐ ಕಾರ್ಯಕರ್ತರು ಇಂಡಿಯನ್ ರೆಡ್ ಕ್ರಾಸ್ ಬ್ಲಡ್ ಬ್ಯಾಂಕ್ ನಲ್ಲಿ ಸಾಮೂಹಿಕವಾಗಿ ರಕ್ತದಾನ ಮಾಡಿದರು. ಈ ವೇಳೆ ಡಿವೈಎಫ್ಐ ರಾಜ್ಯಾದ್ಯಕ್ಷರಾದ ಮುನೀರ್ ಕಾಟಿಪಳ್ಳ, ಸಹಾಯವಾಣಿ ನೇತೃತ್ವ ವಹಿಸಿದ ಡಿವೈಎಫ್ಐ ದ.ಕ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ನಗರಾದ್ಯಕ್ಷ ನವೀನ್ ಕೊಂಚಾಡಿ, ನೌಶದ್ ಬೆಂಗರೆ ಹಾಗೂ ಬೆಂಗರೆ ಪ್ರದೇಶದ ಮುಖಂಡರಾದ ರಿಯಾಜ್ ಬೆಂಗರೆ, ಬಿಲಾಲ್ ಬೆಂಗರೆ, ಅಸ್ಲಂ, ಮುಹಾಬ್ ಮುಂತಾದವರು ಉಪಸ್ಥಿತರಿದ್ದರು.



ಗಂಗೆಯೊಡಲಲ್ಲಿ ದೇಹಗಳು ತೇಲಿವೆ ದೊರೆಯೇ

ಹೊಸದಿಲ್ಲಿ: ಗುಜರಾತಿ ಕಾವ್ಯದ ಮುಂದಿನ ಅತಿ ದೊಡ್ಡ ಪ್ರತೀಕ ಎಂದು ರಾಜ್ಯದ ಬಲಪಂಥೀಯ ಸಾಹಿತಿಗಳಿಂದ ಪ್ರಶಂಸೆಗೊಳಗಾದ ಗುಜರಾತ್ನ ಕವಯಿತ್ರಿ ಪಾರುಲ್ ಖಕ್ಕರ್ ಈಗ ಬಿಜೆಪಿಯ ಐಟಿ ಸೆಲ್ನ ಟ್ರೋಲ್ ಪಡೆಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಕೊರೋನ ಎರಡನೇ ಅಲೆ ನಿರ್ವಹಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿರುವುದರಿಂದ ಭಾರತೀಯರು ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಅವರು ಪ್ರಭಾವಶಾಲಿ ಕವನವೊಂದನ್ನು ಬರೆದಿದ್ದರು.

14 ಸಾಲುಗಳ ಈ ಕವನ ಒಂದು ವಾರದಲ್ಲಿ ಕನಿಷ್ಠ 6 ಭಾಷೆಗೆ ಭಾಷಾಂತರಗೊಂಡಿತ್ತು. ಇದು ಸಾಂಕ್ರಾಮಿಕ ರೋಗದಿಂದ ಉಂಟಾದ ದುರಂತಗಳಿಂದ ದುಃಖಿತರಾಗಿರುವ, ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸದೇ ಇರುವ ಹಾಗೂ ಅದರಿಂದ ದೂರ ಇರುವ ಕೇಂದ್ರ ಸರಕಾರದ ಬಗ್ಗೆ ಆಕ್ರೋಶಿತರಾದ ಎಲ್ಲ ಭಾರತೀಯನ ಧ್ವನಿಯಾಗಿತ್ತು.

ಪಾರುಲ್ ಖಕ್ಕರ್ ಅವರು 'ಶಬ್ವಾಹಿನಿ ಗಂಗಾ' ಎಂಬ ಶೀರ್ಷಿಕೆಯ ಕವನವನ್ನು ತನ್ನ ಸಾಮಾಜಿಕ ಜಾಲ ತಾಣದ ಖಾತೆಯಲ್ಲಿ ಮೇ 11 ರಂದು ಪೋಸ್ಟ್ ಮಾಡಿದ್ದರು. ಪುಟ್ಟದಾದ ಹಾಗೂ ಪ್ರಭಾವಶಾಲಿಯಾದ ಈ ಗುಜರಾತಿ ವಿಡಂಬನಾತ್ಮಕ ಕವನದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಮ ರಾಜ್ಯವನ್ನು ಆಳುತ್ತಿರುವ 'ನಗ್ನ ದೊರೆ' ಎಂದು ಹಾಗೂ ಪವಿತ್ರ ಗಂಗಾ ನದಿಯನ್ನು ಹೆಣಗಳನ್ನು ಸಾಗಿಸುವ ಗಾಡಿ ಎಂದು ವಿವರಿಸಲಾಗಿತ್ತು. ಕನ್ನಡದಲ್ಲಿಯೂ ಅನೇಕರು ಅನುವಾದಸಿ ಕವಿತೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚುತ್ತಿದ್ದಾರೆ. ಅವುಗಳಲ್ಲಿ ಆಯ್ದು ಒಂದು ಅನುವಾದಿತ ಕವಿತೆ.

ಕಳವಳ ವೇಕೆ, ಸಂತಸದಿಂದಿರು
ಹೆಣದ ದೇಹದೊಳಗಿನ
ಒಂದು ಧ್ವನಿ.
ದೊರೆಯೇ
ನಿನ್ನ ರಾಮರಾಜ್ಯದ ಗಂಗೆಯೊಡಲಲ್ಲಿ ದೇಹಗಳು
ತೇಲಿವೆ.

ದೊರೆಯೇ,
ರುದ್ರಭೂಮಿಗೆ ಸ್ಥಳವಿಲ್ಲ ಇಲ್ಲಿ
ಸುಡಲು ಉರುವುಗಳಿಲ್ಲ
ಮರಮುಟ್ಟು ಬೂದಿಯಾಗಿವೆ
ಬಿಳಿಬಟ್ಟೆ ತೊಟ್ಟವರಿಲ್ಲ
ದುಃಖಿಸುವವರಿಲ್ಲ ಎಲ್ಲವೂ ವಿದಾಯ ಹೇಳಿವೆ
ಚರಮಗೀತೆ ಹಾಡಲು ಕೊರಳು
ಕೊರಡು.

ದೊರೆಯೇ,
ಅವಳು ಕುಣಿದ ಹೆಜ್ಜೆಗಳ ಬೆಡಗ
ಮನೆ ತುಂಬಿಸಿಕೊಳ್ಳುವ ಮಹದಾಸೆ ಇತ್ತು
ಆದರೆ ದೊರೆಯೇ
ನಿನ್ನ ರಾಮರಾಜ್ಯದ ಗಂಗೆ ಒಡಲಲ್ಲಿ ದೇಹಗಳು ತೇಲಿವೆ.

ದೊರೆಯೇ
ಅಲುಗಾಡದೆ ಬಿಮ್ಮನೆ ಕೂತಿದೆ ರೋಗ
ಹೊಗೆಯುಗುಳುವ ನಳಿಗೆಗಳು ನಡುಗಿವೆ
ಬಿಲ್ಲಾ-ರಂಗರ ಈಟಿ ಮೊನೆಚಿನ ಇರಿತಕ್ಕೆ
ಕೈ ಬಳೆಗಳು ನುಚ್ಚು ನೂರಾಗಿವೆ
ಹೃದಯಗಳು ಛಿದ್ರವಾಗಿವೆ
ಅವರ ಕೈಗೊಂಬೆಗಳಂತೆ
ನಗರ ಸುಡುತ್ತಿದೆ
ದೊರೆಯೇ
ನಿನ್ನ ರಾಮರಾಜ್ಯದ ಗಂಗೆ ಒಡಲಲ್ಲಿ
ದೇಹಗಳು ತೇಲುವುದ ನಾ ಕಂಡೆ.

ದೊರೆಯೇ,
ನಿನ್ನ ಥಳುಕಿನ ಪೋಷಾಕಿಗೆ ನಿನ್ನ ಹೊಳಪೆ
ನಗರ ಹೂಯಲ್ಪಿದೆ
ಕಟ್ಟ ಕಡೆಯ ನಿನ್ನ ನಿಜ ಮುಖದ ದರುಶನಕೆ
ಯಾವ ಆಕ್ಷೇಪಗಳಿಲ್ಲ
ನಿನ್ನ ದಿಟ್ಟತೆ ತೋರು, ಎಲ್ಲವನೂ ಮುಚ್ಚಿ ಹೊರಗೆ ಬಾ ಬಯಲಿಗೆ,
ಜೋರಾಗಿ ಕೂಗು.

"ದುರ್ಬಲ ದೊರೆ ಬೆತ್ತಲು".

ದೊರೆಯೇ
ಸಾಕಿನ್ನು ಕುಂಟುನೆಪ
ಆವೇಶದಲಿ ನಗರ ರೊಚ್ಚಿಗೆದ್ದಿದೆ
ಮುಗಿಲೆತ್ತರ ಉರಿಯಲೆ ಚಿಮ್ಮಿದೆ
ದೊರೆಯೇ
ನೋಡಿದೆಯಾ
ನಿನ್ನ ರಾಮರಾಜ್ಯದ ಗಂಗೆ
ಒಡಲಲ್ಲಿ
ತೇಲುವ ದೇಹಗಳಾ?.

ಪರುಳ್ ಖಕ್ಕರ್
ಗುಜರಾತಿ ಕವಯಿತ್ರಿ

ಭಾವಾನುವಾದ.
ಪಿ.ಆರ್.ವೆಂಕಟೇಶ್.



ಕೃಪೆ: ಸತೀಶ್ ಆಚಾರ್ಯ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಮಾದರಿಯಲ್ಲೇ ನಗರದಲ್ಲೂ ಒಂದು ಉದ್ಯೋಗ ಖಾತ್ರಿ ಕಾನೂನನ್ನು ಕುರಿತು ಚಿಂತಿಸುವ ಸಮಯ ಬಂದಿದೆ. ಕೆಲಸ ಕಳೆದುಕೊಂಡವರಿಗೆ ಅವಶ್ಯಕವಾದ ಪರ್ಯಾಯ ಉದ್ಯೋಗ ನರೇಗಾ ಮಾದರಿಯ ನಗರ ಉದ್ಯೋಗ ಯೋಜನೆಯಿಂದ ದೊರೆಯಬಹುದು. ಇಂತಹ ಒಂದು ಯೋಜನೆಯ ಪ್ರಸ್ತಾಪವನ್ನು, **DUET** ಯೋಜನೆ, ಅಂದರೆ ವಿಕೇಂದ್ರೀಕೃತ ನಗರ ಉದ್ಯೋಗ ಮತ್ತು ತರಬೇತಿ ಯೋಜನೆ ಎಂಬುದನ್ನು ಪ್ರಖ್ಯಾತ ಆರ್ಥಿಕ ತಜ್ಞ ಜೀನ್ ಡ್ರೆಜ್ ಮುಂದಿಟ್ಟಿದ್ದಾರೆ.

ನಗರಗಳಲ್ಲಿ ಉದ್ಯೋಗಕ್ಕಾಗಿ "ಡುಏಟ್" ಯೋಜನೆ

ಅನುವಾದ: **ಟಿ.ಎಸ್. ವೇಣುಗೋಪಾಲ್** ಕೃಪೆ: Bloomberg

ಭಾರತದ ಒಟ್ಟು ದೇಶೀಯ ಉತ್ಪನ್ನ(ಜಿಡಿಪಿ)ದ 2020-21ರ ಮೊದಲ ತ್ರೈಮಾಸಿಕ ಆವಧಿಯ ಅಂದಾಜು ಬಿಡುಗಡೆಯಾಗುತ್ತಿದ್ದಂತೆ ಆತಂಕ ವ್ಯಕ್ತವಾಗಿದೆ. ಈ ಅವಧಿಯಲ್ಲಿ ಆರ್ಥಿಕ ಚಟುವಟಿಕೆಗಳು ತೀವ್ರವಾಗಿ ಕುಸಿದಿದ್ದವು. ಇದನ್ನು ಹಲವು ಕೌಟುಂಬಿಕ ಸಮೀಕ್ಷೆಗಳು ಸ್ಪಷ್ಟವಾಗಿ ತಿಳಿಸಿವೆ. ನಿರುದ್ಯೋಗ, ಬಡತನ, ಮತ್ತು ಹಸಿವು ಇವೆಲ್ಲಾ ವ್ಯಾಪಕವಾಗಿದ್ದಾಗ ಆರ್ಥಿಕತೆ ಒಳ್ಳೆಯ ಸ್ಥಿತಿಯಲ್ಲಿರುವ ಸಾಧ್ಯತೆಗಳು ಕಡಿಮೆ.

ಇತ್ತೀಚೆಗೆ ಲಂಡನ್ ಸ್ಕೂಲ್ ಆಫ್ ಎಕಾನಮಿಕ್ಸ್‌ನ ಆರ್ಥಿಕ ಪರಿಸ್ಥಿತಿಯ ಅಧ್ಯಯನ ಕೇಂದ್ರವು 8500 ನಗರ ಕಾರ್ಮಿಕರನ್ನು ವಿಶೇಷವಾಗಿ ಸಂದರ್ಶಿಸಿ ಸಮೀಕ್ಷೆ ನಡೆಸಿದೆ. ಅದು ಒಟ್ಟಾರೆ ಪರಿಸ್ಥಿತಿಯ ಕುರಿತಂತೆ ಸ್ಪಷ್ಟವಾದ ಚಿತ್ರವನ್ನು ಕೊಡುತ್ತದೆ. ಸಮೀಕ್ಷೆಗೆ ಒಳಗಾದವರಲ್ಲಿ ಸುಮಾರು ಅರ್ಧದಷ್ಟು ಜನರ ಸರಾಸರಿ ವರಮಾನ ಕಮ್ಮಿಯಾಗಿತ್ತು. ವಲಸೆ ಕಾರ್ಮಿಕರ ವಿಷಯದಲ್ಲಿ ವರಮಾನದ ಇಳಿತ ಇನ್ನೂ ಹೆಚ್ಚೇ ಆಗಿತ್ತು. ಅವರ ವರಮಾನ ಶೇಕಡ 82ರಷ್ಟು ಕಡಿಮೆಯಾಗಿತ್ತು. ಈ ಮೊದಲೇ ಬಡತನದಲ್ಲಿ ಇದ್ದವರಲ್ಲಿ ಈ ವರಮಾನದ ಕುಸಿತ ಇನ್ನೂ ತೀವ್ರವಾಗಿತ್ತು. ಇದರಿಂದ ಪಟ್ಟಣದ ಕಾರ್ಮಿಕರಲ್ಲಿ ಅಸಮಾನತೆ ಇನ್ನಷ್ಟು ಹೆಚ್ಚಾಯಿತು. ಮೇಲ್‌ಸ್ತರದ ಶೇಕಡ 25ರಷ್ಟು ಕಾರ್ಮಿಕರ ವರಮಾನ ಲಾಕ್‌ಡೌನ್ ಮೊದಲು ಶೇಕಡ 64ರಷ್ಟು ಇದ್ದುದು, ಲಾಕ್ ಡೌನ್ ನಂತರ ಶೇಕಡ 84ರಷ್ಟಾಯಿತು. ಅಂದರೆ ಕೆಳಸ್ತರದಲ್ಲಿದ್ದ ಶೇಕಡ 75ರಷ್ಟು ಜನ ಕೇವಲ ಶೇಕಡ 16ರಷ್ಟು ವರಮಾನವನ್ನು ಹಂಚಿಕೊಂಡು ಜೀವನ ನಡೆಸುತ್ತಿದ್ದರು.

ಕಳೆದ ಕೆಲವು ವಾರಗಳಲ್ಲಿ ನಗರದ ಕಾರ್ಮಿಕರ ಸ್ಥಿತಿಯಲ್ಲಿ ಸುಧಾರಣೆಯಾಗಿದೆ ಎಂದು ಅನ್ನಿಸುತ್ತದೆ. ವಲಸೆ ಕಾರ್ಮಿಕರು ಮರಳಿ ತಮ್ಮ ಊರುಗಳಿಗೆ ಹೋಗಿದ್ದರಿಂದ, ಅವರು ಕೆಲಸ ಮಾಡುತ್ತಿದ್ದ ಪ್ರದೇಶಗಳಲ್ಲಿ ಕೆಲಸಗಾರರ ಕೊರತೆಯಿಂದಾಗಿ ಸ್ಥಳೀಯ ಕೆಲಸಗಾರರಿಗೆ ಒಂದಿಷ್ಟು ಅನುಕೂಲವಾಗಿರಬಹುದು. ಆದರೂ ವಿಶೇಷವಾಗಿ ಲಾಕ್‌ಡೌನ್ ಮುಂದುವರಿದಿರುವ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆ ಸಾಮಾನ್ಯ ಮಟ್ಟಕ್ಕಿಂತ ತುಂಬಾ ಕಡಿಮೆಯೇ ಇದೆ. ಕೆಲವು ವೃತ್ತಿಗಳಲ್ಲಂತೂ ಜನರಿಗೆ ಹಲವು ತಿಂಗಳುಗಳಿಂದ ಕೆಲಸವೇ ಇಲ್ಲ. ಸಧ್ಯದಲ್ಲಿ ಕೆಲಸ ಸಿಗುವ ಸಾಧ್ಯತೆಯೂ ಇಲ್ಲ. ತಿಂಡಿ ಮಾರುವವರು, ಬಸ್ ಕಂಡಕ್ಟರುಗಳು, ಸಿನೆಮಾ ಹಾಲಿನಲ್ಲಿ ಕೆಲಸ ಮಾಡುತ್ತಿರುವವರು, ಲೈಂಗಿಕ ಕಾರ್ಯಕರ್ತೆಯರು, ಬ್ಯಾಂಡ್ ಕಲಾವಿದರು, ವಲಸೆ ಕಾರ್ಮಿಕರು ಇವರ ಬಗ್ಗೆ ಯೋಚಿಸಿ. ಅವರಲ್ಲಿ ಬಹುಪಾಲು ಜನ ಆಸರೆಗೆ ಹತಾಶೆಯಿಂದ ಪರ್ಯಾಯ ಕೆಲಸಗಳನ್ನು ಹುಡುಕುತ್ತಿದ್ದಾರೆ.

ಈ ಪರಿಸ್ಥಿತಿಯಿಂದಾಗಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಮಾದರಿಯಲ್ಲೇ ನಗರದಲ್ಲೂ ಒಂದು ಉದ್ಯೋಗ ಖಾತ್ರಿ ಕಾನೂನನ್ನು ಕುರಿತು ಚಿಂತಿಸುವ ಸಮಯ ಬಂದಿದೆ. ಕೆಲಸ ಕಳೆದುಕೊಂಡವರಿಗೆ ಅವಶ್ಯಕವಾದ ಪರ್ಯಾಯ ಉದ್ಯೋಗ ನರೇಗಾ ಮಾದರಿಯ ನಗರ ಉದ್ಯೋಗ ಯೋಜನೆಯಿಂದ ದೊರೆಯಬಹುದು. ಕೇವಲ ತಾತ್ಕಾಲಿಕವಾಗಿ ಕೆಲಸ ಕಳೆದುಕೊಂಡವರಿಗೆ ಮಾತ್ರವಲ್ಲ, ಕೆಲಸವೇ ಇಲ್ಲದವರಿಗೂ ಇದರಿಂದ ಉದ್ಯೋಗ ಸಿಗುತ್ತದೆ. ಆದರೆ ನಗರದಲ್ಲಿ ಅಂತಹ ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸುವುದಕ್ಕೆ ಹೆಚ್ಚಿನ ಅನುಭವ ಬೇಕು. ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಕೆಲಸಗಳಿಗೆ ಸಂಬಂಧಿಸಿದಂತೆ ಈಗ ಇರುವ ಅನುಭವ ಸಾಲುವುದಿಲ್ಲ. ನರೇಗಾ ಯೋಜನೆಯನ್ನು ರೂಪಿಸುವುದರ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಕ್ಷಾಮದ ಪರಿಹಾರಕ್ಕೆ ಸಂಬಂಧಿಸಿದಂತೆ ಹಲವು ದಶಕಗಳ ಅನುಭವ ಇತ್ತು ಅನ್ನುವುದನ್ನು ಮರೆಯಬಾರದು. ಆ ಅನುಭವ ನರೇಗಾ ಯೋಜನೆಯನ್ನು ರೂಪಿಸುವಲ್ಲಿ ನೆರವಾಯಿತು.

ಸಿದ್ಧ ಚೌಕಟ್ಟನ್ನು ಮೀರಿ ಯೋಚಿಸೋಣ

ಸಿದ್ಧ ಚೌಕಟ್ಟನ್ನು ಮೀರಿ ಯೋಚಿಸಿದರೆ ನಗರ ಕಾರ್ಮಿಕರಿಗೆ ತಕ್ಷಣದ ಪರಿಹಾರ ಕೊಡುವಂತಹ ನಗರ ಉದ್ಯೋಗ ಯೋಜನೆಯನ್ನು ರೂಪಿಸುವುದಕ್ಕೆ ಸಾಧ್ಯ. ಅದು ನಮಗೆ ಬೇಕಾದ ಅನುಭವವನ್ನು ಕೊಡುತ್ತದೆ. ಕೆಲವು ರಾಜ್ಯಗಳು ಈ ರೀತಿಯ ಯೋಜನೆಗಳನ್ನು ರೂಪಿಸಲು ಈಗಾಗಲೇ ಪ್ರಯತ್ನಿಸಿವೆ. ಕೇರಳ 10 ವರ್ಷದ ಹಿಂದೆಯೇ ಅಯ್ಯಂಕಳಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸಿತ್ತು. 2019-20ರಲ್ಲಿ ಅದರಿಂದ 27 ಲಕ್ಷ ವ್ಯಕ್ತಿ-ದಿನಗಳ ಉದ್ಯೋಗ ಸೃಷ್ಟಿಯಾಗಿತ್ತು. ಈ ವರ್ಷ ಹಿಮಾಚಲ ಪ್ರದೇಶ, ಜಾರ್ಖಂಡ್, ಮತ್ತು ಒಡಿಶಾ ಸೇರಿದಂತೆ ಹಲವು ರಾಜ್ಯಗಳು ಕೂಡ ನಗರ ಉದ್ಯೋಗ ಖಾತ್ರಿ ನೀಡುವ ಯೋಜನೆಗಳನ್ನು ಪ್ರಾರಂಭಿಸಿವೆ. ಆದರೆ ಬಜೆಟ್ ಕೊರತೆಯಿಂದ, ಈ ಯೋಜನೆಗಳು ಬಹುಪಾಲು ಸಾಂಕೇತಿಕ ಯೋಜನೆಗಳಾಗಿ ಬಿಟ್ಟಿವೆ. ಇದಕ್ಕಾಗಿ ವಿನಿಯೋಗಿಸಿರುವ ಹಣ ಅತ್ಯಲ್ಪ.

ಇನ್ನೊಂದು ಪರ್ಯಾಯ ಯೋಜನೆಯನ್ನು ನೋಡೋಣ. ಇದನ್ನು ವಿಕೇಂದ್ರಿಕೃತ ನಗರ ಉದ್ಯೋಗ ಹಾಗೂ ತರಬೇತಿ ಅಥವಾ ಡುಏಟ್ (ಡಿಸೆಂಟ್ರಲೈಸ್ಡ್ ಅರ್ಬನ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್) ಯೋಜನೆ ಎಂದು ಕರೆಯೋಣ. ಅದರ ಮೂಲಭೂತ ಯೋಚನೆ ಹೀಗಿದೆ. ಸರ್ಕಾರ ಉದ್ಯೋಗದ ಸ್ಟಾಂಪುಗಳನ್ನು ಬಿಡುಗಡೆ ಮಾಡುತ್ತದೆ. ಅವನ್ನು ಅಂಗೀಕೃತ ಸಾರ್ವಜನಿಕ ಸಂಸ್ಥೆಗಳಿಗೆ ವಿತರಿಸಲಾಗುತ್ತದೆ. ಉದಾಹರಣೆಗೆ ಶಾಲೆಗಳು, ಕಾಲೇಜುಗಳು, ಹಾಸ್ಟೆಲ್ಲುಗಳು, ವಸತಿ ಗೃಹಗಳು, ಬಂದಿಖಾನೆಗಳು, ಮ್ಯೂಸಿಯಂಗಳು, ಮುನಿಸಿಪಾಲಿಟಿಗಳು, ಸರ್ಕಾರಿ ಇಲಾಖೆಗಳು, ಆರೋಗ್ಯ ಕೇಂದ್ರಗಳು, ಸಾರಿಗೆ ಕಾರ್ಪೋರೇಷನ್ನುಗಳು, ನೆರೆಹೊರೆಯ ಅಸೋಸಿಯೇಷನ್ನುಗಳು, ನಗರದ ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ಅವುಗಳನ್ನು ವಿತರಿಸಲಾಗುತ್ತದೆ. ಒಂದು ಉದ್ಯೋಗ ಸ್ಟಾಂಪು ಅಂದರೆ ಒಬ್ಬ ವ್ಯಕ್ತಿಯ ಒಂದು ದಿನದ ಕೆಲಸ. ಪ್ರತಿಯೊಂದು ಸಂಸ್ಥೆಯು ತಮ್ಮಲ್ಲಿ ಇರುವ ಸ್ಟಾಂಪುಗಳನ್ನು ಈ ಕ್ರಮದಲ್ಲಿ ಬಳಸಿಕೊಳ್ಳಬಹುದು. ಆದರೆ ಅದನ್ನು ನಿಗದಿತ ಆವಧಿಯಲ್ಲಿ ಬಳಸಿಕೊಳ್ಳಬೇಕು. ಜೊತೆಗೆ ನೇಮಕಗೊಂಡ ಕೆಲಸಗಾರರಿಗೆ ಕೆಲಸ ಕೊಡುವುದಕ್ಕೆ ಆ ಸಂಸ್ಥೆಗಳಿಗೆ ಸಾಧ್ಯವಾಗಬೇಕು. ಕೆಲಸದ ನಂತರ ಆ ಸಂಸ್ಥೆಗಳು ತಮ್ಮ ದೃಢೀಕರಣದೊಂದಿಗೆ ಸ್ಟಾಂಪುಗಳನ್ನು ಕೆಲಸಗಾರರಿಗೆ ನೀಡಬೇಕು. ಆ ದೃಢೀಕೃತ ಉದ್ಯೋಗದ ಸ್ಟಾಂಪುಗಳನ್ನು ಕೆಲಸಗಾರರು ಪಾವತಿಸಿದ ಕೂಡಲೇ ಅವರ ಕೂಲಿಯನ್ನು ಸರ್ಕಾರ ನೇರವಾಗಿ ಅವರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಬೇಕು. ಸಂಸ್ಥೆಗಳು ಹಾಗೂ ಕಾರ್ಮಿಕರು ಶಾಮೀಲಾಗುವುದನ್ನು ತಪ್ಪಿಸಲು ಕೆಲಸಗಾರರನ್ನು ನೇಮಿಸುವುದಕ್ಕೆ ಒಂದು ಸ್ವತಂತ್ರ ನೇಮಕಾತಿ ಏಜೆನ್ಸಿ ಇರಬೇಕು. ಕೆಲವು ಉದ್ಯೋಗವನ್ನು ಅರೆಕಾಲಿಕ ಉದ್ಯೋಗವನ್ನಾಗಿಯೂ ಯೋಚಿಸಬಹುದು. ಉದಾಹರಣೆಗೆ ದಿನಕ್ಕೆ ನಾಲ್ಕು ಗಂಟೆಯಂತೆ. ಆಗ ಮಹಿಳೆಯರಿಗೆ ಅದರಲ್ಲಿ ಪಾಲ್ಗೊಳ್ಳಲು ಅನುಕೂಲವಾಗುತ್ತದೆ.

ಈ ಕ್ರಮದಿಂದ ಹಲವು ಅನುಕೂಲಗಳಿವೆ:

ಮೊದಲನೆಯದಾಗಿ, ವಿಭಿನ್ನ ಅನುಮೋದಿತ ಉದ್ಯೋಗದಾತರನ್ನು ಸಕ್ರಿಯಗೊಳಿಸುವುದರಿಂದ, ಹೆಚ್ಚೆಚ್ಚು ಉದ್ಯೋಗ ಸೃಷ್ಟಿಯಾಗಬಹುದು

ಎರಡನೆಯದಾಗಿ, ಅನುಮೋದಿತ ಉದ್ಯೋಗದಾತರು ಕೆಲಸ ಹೆಚ್ಚು ಉತ್ಪಾದಕವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಮೂರನೆಯದಾಗಿ, ಈ ಯೋಜನೆಯಲ್ಲಿ ಕೆಲಸವನ್ನು ನೀಡುತ್ತಿರುವ ಸಂಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿರುವುದರಿಂದ ಅದಕ್ಕೆ ವಿಶೇಷವಾಗಿ ಕೆಲಸಗಾರರನ್ನು ನೇಮಿಸಿಕೊಳ್ಳಬೇಕಾಗಿಲ್ಲ.

ನಾಲ್ಕನೆಯದಾಗಿ, ಕೆಲಸಗಾರರಿಗೆ ಕನಿಷ್ಠ ಕೂಲಿ ಜೊತೆಗೆ ಬಹುಶಃ ಇತರ ಅನುಕೂಲಗಳ ಖಾತರಿ ಇರುತ್ತದೆ.

ಈ ಯೋಜನೆ ಹೇಗೆ ಕೆಲಸ ಮಾಡುತ್ತದೆ?

ಡುಯೆಟ್ ಯೋಜನೆಯಲ್ಲಿ ಯಾವೆಲ್ಲಾ ಕೆಲಸಗಳು ಸೇರಿಕೊಳ್ಳುತ್ತವೆ? ಮಾಡುವುದಕ್ಕೆ ತುಂಬಾ ಕೆಲಸಗಳಿವೆ. ಮೊದಲಿಗೆ ಭಾರತದ ಸಾರ್ವಜನಿಕ ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳು (ಪಾರ್ಕುಗಳು, ಕೆರೆಗಳು, ಬಾವಿಗಳು, ಆಟದ ಮೈದಾನಗಳು, ಬಸ್‌ಸ್ಟಾಂಡುಗಳು, ರೈಲ್ವೆ ಸ್ಟೇಷನ್ನುಗಳು ಇವೆಲ್ಲಾ) ಸರಿಯಾದ ಉಸ್ತುವಾರಿ ಇಲ್ಲದೆ ತುಂಬಾ ಹಾಳಾಗುತ್ತಿವೆ. ಲಾಕ್‌ಡೌನ್ ನಂತರ ಕೆಲವು ತಿಂಗಳಲ್ಲಿ ಅವು ಮತ್ತೆ ಪ್ರಾರಂಭವಾದಾಗ ಅವುಗಳನ್ನು ದುರಸ್ತಿಗೊಳಿಸುವುದಕ್ಕೆ ತುಂಬಾ ಕೆಲಸ ಹಿಡಿಯುತ್ತದೆ. ಶುಚಿ ಮಾಡುವುದು, ಬಣ್ಣ ಹೊಡೆಯುವುದು, ಕಳೆ ಕೀಳುವುದು, ರಿಪೇರಿ ಮಾಡುವುದು, ಪೈಪುಗಳ ರಿಪೇರಿ ಹೀಗೆ ಹಲವು ಕೆಲಸಗಳು ಇರುತ್ತವೆ. ನಗರದಲ್ಲಿ ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಅಂದೋಲನಕ್ಕೆ ಇದೊಂದು ಒಳ್ಳೆಯ ಸಮಯ. ಸಾರ್ವಜನಿಕ ಸ್ಥಳಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು ಮಾತ್ರವಲ್ಲದೆ, ಸಾರ್ವಜನಿಕ ಆರೋಗ್ಯ, ಪರಿಸರ ಸುಧಾರಣೆ, ಬಹುಶಃ ಗೃಹಕೃತ್ಯದ ಕೆಲಸಗಳೂ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉತ್ಪಾದಕ ಕೆಲಸಗಳಿಗೆ ತುಂಬಾ ಅವಕಾಶಗಳಿವೆ. ನಗರ ಪ್ರದೇಶಗಳಲ್ಲಿ ಮಾಡಬಹುದಾದ ಸಾರ್ವಜನಿಕ ಕೆಲಸಗಳ ಒಂದು ಪಟ್ಟಿಯನ್ನೇ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯದ ತಾಳಿಕೆಯ ಉದ್ಯೋಗ ಕೇಂದ್ರವು ಯೋಚಿಸಿ ಸಿದ್ಧಪಡಿಸಿದೆ. ನಗರ ಉದ್ಯೋಗ ಖಾತ್ರಿಗಾಗಿ ಅದು ಇತ್ತೀಚೆಗೆ ಸಲ್ಲಿಸಿರುವ ಸಲಹೆಯಲ್ಲಿ ನೀಡಿದೆ. ಇನ್ನು ಡುಏಟ್‌ನಲ್ಲಿ ಬರುವ ಟಿ, ಅಂದರೆ ಟ್ರೈನಿಂಗ್- ತರಬೇತಿಯು ಮುಖ್ಯವಾಗಿ ಕೆಲಸ ಮಾಡುತ್ತಲೇ ಪಡೆಯುವ ತರಬೇತಿಯ ರೂಪದಲ್ಲಿರುತ್ತದೆ. ಕೌಶಲವಿಲ್ಲದ ಕಾರ್ಮಿಕರು ಕೌಶಲವಿರುವ ಕಾರ್ಮಿಕರ ಜೊತೆ ಕೆಲಸ ಮಾಡುವ ಪ್ರಕ್ರಿಯೆಯಲ್ಲಿ ಕೆಲಸ ಕಲಿಯುತ್ತಾರೆ. ನೇಮಕಾತಿ ಏಜೆನ್ಸಿಗಳು ಕೇವಲ ಕೆಲಸಗಾರರನ್ನು ನಿಗದಿ ಮಾಡುವುದರ ಜೊತೆಗೆ ಕುಶಲತೆಯನ್ನು ನೀಡುವ ಹಾಗೂ ಅದನ್ನು ಪ್ರಮಾಣೀಕರಿಸುವ ಕೆಲಸವನ್ನು ಮಾಡಬಹುದು.

ತಾತ್ತ್ವಿಕವಾಗಿ ಮುನಿಸಿಪಾಲಿಟಿಗಳು ವಿಭಿನ್ನ ನೇಮಕಾತಿ ಏಜೆನ್ಸಿಗಳನ್ನು ಇಟ್ಟುಕೊಂಡಿರಬಹುದು. ಕೆಲವು ಕಾರ್ಮಿಕರ ಸಹಕಾರ ಸಂಸ್ಥೆಗಳಾಗಿ ಕೆಲಸ ಮಾಡಬಹುದು. ಡುಏಟ್ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಅಂತಹ ಸಂಸ್ಥೆಗಳು ಹಾಗೂ ಯೋಜನೆಗಳಿಂದ ಬೆಂಬಲ ಪಡೆದುಕೊಳ್ಳಬಹುದು.

ಕೆಲವು ದೇಶಗಳು ತಮ್ಮಲ್ಲಿ ಡುಏಟ್ ರೀತಿಯ ಉದ್ಯೋಗ ಸಬ್ಸಿಡಿ ಯೋಜನೆಯಂತಹ ಯೋಜನೆಗಳನ್ನು ಆಚರಣೆಗೆ ತಂದಿವೆ. ಉದಾಹರಣೆಗೆ ಹಲವು ಐರೋಪ್ಯ ದೇಶಗಳಲ್ಲಿ ಚಾಲ್ತಿಯಲ್ಲಿರುವ 'ಸೇವಾ ವೋಚರ್ ಯೋಜನೆ'(ಎಸ್‌ವಿಎಸ್-ಸರ್ವಿಸ್ ವೋಚರ್ ಸ್ಕೀಮ್). ಆದರೆ ಇಲ್ಲಿ ಇರುವ ಮುಖ್ಯ ವ್ಯತ್ಯಾಸ ಅಂದರೆ ಎಸ್‌ವಿಎಸ್ ವೋಚರುಗಳನ್ನು ಸಾಮಾನ್ಯವಾಗಿ ಮನೆ ಶುಚಿಗೊಳಿಸುವುದು, ಅಡಿಗೆ ಮಾಡುವುದು, ಇಸ್ತ್ರಿಮಾಡುವುದು ಮೊದಲಾದ ಗೃಹಕೃತ್ಯದ ಕೆಲಸಗಳಿಗೆ ಬಳಸಲಾಗುತ್ತದೆ. ಆದರೂ ಇದು ಉತ್ತೇಜನಕಾರಿಯಾದ ಪೂರ್ವನಿದರ್ಶನ - ಒಳ್ಳೆಯ ಎಸ್‌ವಿಎಸ್ ಯೋಜನೆಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಹಾಗೂ ಅವು ತುಂಬಾ ಜನಪ್ರಿಯವಾಗಿವೆ. ಈಗ ಹೆಚ್ಚು ಮಹದಾಸೆಯ ಯೋಜನೆಗಳಿಗೆ ರಾಜ್ಯ ಬಜೆಟ್ಟುಗಳಲ್ಲಿ ಅಷ್ಟಾಗಿ ಅವಕಾಶವಿಲ್ಲ. ಆದರೆ ಡುಏಟ್ಟನ್ನು ಒಂದು ತುರ್ತು, ಕೇಂದ್ರ ಆಯೋಜಿತ ಯೋಜನೆಯಾಗಿ ಪ್ರಾರಂಭಿಸಬಹುದು. ಪರಿಸ್ಥಿತಿ ಅನುಕೂಲಕರವಾಗಿದ್ದಾಗ ಇವನ್ನು ರಾಜ್ಯ ಸರ್ಕಾರಗಳು ನೋಡಿಕೊಳ್ಳುತ್ತವೆ. ಇದು ನಿರುದ್ಯೋಗಿಗಳಿಗೆ ನೆರವಾಗುವುದರ ಜೊತೆಗೆ ಲಾಕ್ ಡೌನ್ ನಂತರದ ಆವಧಿಯಲ್ಲಿ ಆರ್ಥಿಕ ಉತ್ತೇಜಕವಾಗಿ ಕೆಲಸ ಮಾಡುತ್ತದೆ. ಸಾರ್ವಜನಿಕ ಸೇವೆಗಳು ಪುನಶ್ಚೇತನಗೊಳ್ಳಲು ಸಹ ನೆರವಾಗುತ್ತವೆ.







ಪೂರ್ವ ಜೆರುಸಲೇಮ್‌ನ ಶೇಖ್ ಜರ್‍ರಾಹ್ ಪ್ರದೇಶದಲ್ಲಿ ಪ್ಯಾಲೆಸ್ತೀನಿಯರ ಭೂಮಿ ಮತ್ತು ಮನೆಗಳನ್ನು ಕಿತ್ತುಕೊಳ್ಳುವ ನೆಲೆಸಿಗರ ವಸಾಹತುವಾದ, ಇಸ್ರೇಲ್ ಪ್ರಭುತ್ವದ ಜನಾಂಗದ್ವೇಷ ಉಂಟು ಮಾಡಿರುವ ಪ್ರಸಕ್ತ ಸಂಘರ್ಷ ಇದುವರೆಗೆ 64 ಮಕ್ಕಳು, 38 ಮಹಿಳೆಯರು ಸೇರಿದಂತೆ 227 ಪ್ಯಾಲೆಸ್ತೀನಿಯನ್ನರನ್ನು ಬಲಿ ತೆಗೆದುಕೊಂಡಿದೆ. ಸ್ವಯಂ-ನಿರ್ಣಯಕ್ಕಾಗಿ ಏಳು ದಶಕಗಳಿಂದ ನಡೆಯುತಿರುವ ಪ್ಯಾಲೆಸ್ತೀನಿಯರ ಹೋರಾಟವು ಜಗತ್ತಿನಲ್ಲೇ ಅತಿ ದೀರ್ಘ ಕಾಲದಿಂದ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಹೋರಾಟವಾಗಿದೆ. 1967ರ ಪೂರ್ವದ ಇಸ್ರೇಲ್ ಗಡಿಗಳನ್ನು ಹೊಂದಿರುವ ಪ್ರದೇಶಗಳೊಂದಿಗೆ ಸ್ವತಂತ್ರ ಪ್ಯಾಲೆಸ್ತೀನಿ ಪ್ರಭುತ್ವ ಸ್ಥಾಪನೆಯಾಗುವ ವರೆಗೂ ಈ ಹೋರಾಟ ಕೊನೆಗೊಳ್ಳದು.

ಇಸ್ರೇಲ್ ಆಕ್ರಮಣ ಕೊನೆಗೊಳ್ಳಬೇಕು ಪ್ಯಾಲೆಸ್ಟೀನ್ ವಿಮೋಚನೆಗೊಳ್ಳಬೇಕು

*** ಪ್ರಕಾಶ್ ಕಾರಟ್**

ಜೆರುಸಲೇಮ್‌ನಲ್ಲಿ ಪ್ಯಾಲೆಸ್ತೀನಿಯರ ಮೇಲೆ ಇಸ್ರೇಲಿ ದಾಳಿಗಳು ಮತ್ತು ಗಾಜಾ ಮೇಲೆ ಇಸ್ರೇಲಿ ದಾಳಿ -ಇವೆರಡೂ ವಿಭಿನ್ನವಾದ ಅಥವಾ ಕಾಕತಾಳೀಯ ಘಟನೆಗಳಲ್ಲ. ಅವುಗಳು ಗಾಜಾ ಮತ್ತು ಪಶ್ಚಿಮ ದಂಡೆಯ ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲೆಸ್ತೀನಿ ಜನರ ಮೇಲೆ ಇಸ್ರೇಲಿ ಪ್ರಭುತ್ವ ನಡೆಸುತ್ತಿರುವ ಸುದೀರ್ಘ ಯುದ್ಧದ ಭಾಗಗಳಾಗಿವೆ. ಇಸ್ರೇಲ್ ಪ್ರಭುತ್ವದ 1967ಕ್ಕೆ ಮುಂಚಿನ ಗಡಿಗಳ ಒಳಗಡೆ ಅರಬ್-ಪ್ಯಾಲೆಸ್ತೀನಿಯರನ್ನು ದಮನಿಸುವ ದೌರ್ಜನ್ಯದ ಭಾಗವಾಗಿವೆ.

ಪ್ರಸಕ್ತ ಸಂಘರ್ಷವು ಅತಿಕ್ರಮಣ, ನೆಲೆಸಿಗರ ವಸಾಹತುವಾದ, 'ಜನಾಂಗೀಯ ಶುದ್ಧೀಕರಣ' ಮತ್ತು ಆಕ್ರಮಿತ ಪ್ರದೇಶಗಳಲ್ಲಿ ಜನಾಂಗವಾದದ ಆಡಳಿತ ಸ್ಥಾಪಿಸುವ ಇತಿಹಾಸದ ಒಂದು ಅಧ್ಯಾಯವಾಗಿದೆ.

ಪೂರ್ವ ಜೆರುಸಲೇಮ್‌ನ ಶೇಖ್ ಜರ್‍ರಾಹ್ ಪ್ರದೇಶದಲ್ಲಿ ಪ್ಯಾಲೆಸ್ತೀನಿಯರ ಭೂಮಿ ಮತ್ತು ಮನೆಗಳನ್ನು ವಂಚಿಸಿ ಇಸ್ರೇಲ್ ಸ್ಥಾಪನೆಯಾದ 1948ರಿಂದಲೂ ನೆಲೆಸಿರುವ ಜನರನ್ನು ಈಗ ತೆರವು ಮಾಡಲಾಗುತ್ತಿದೆ.

ತೀವ್ರ ಬಲಪಂಥೀಯ ಯೆಹೂದಿ ಪಕ್ಷಗಳು ಹಾಗೂ ಸತತವಾಗಿ ಆಡಳಿತ ನಡೆಸಿದ ಬೆಂಜಮಿನ್ ನೆತನ್ಯಾಹು ನೇತೃತ್ವದ ಬಲಪಂಥೀಯ ಸರ್ಕಾರಗಳು ನಡೆಸುತ್ತಿರುವ ಪ್ಯಾಲೆಸ್ತೀನ್ ವಿರುದ್ಧದ ಜನಾಂಗವಾದಿ ಮತ್ತು ಜನಾಂಗ ದ್ವೇಷಿ ನೀತಿಗಳು ಈಗ ತೀವ್ರಗೊಂಡಿವೆ. ನಾಲ್ಕನೇ ಬಾರಿ ಚುನಾವಣೆ ನಡೆದರೂ ಬಹುಮತವಿಲ್ಲದೆ ಒಂದು ಹೊಸ ಸರ್ಕಾರವನ್ನು ರಚಿಸಲಾಗದಿರುವ ಸನ್ನಿವೇಶದಲ್ಲಿ ಈಗ ಪ್ರಸಕ್ತ ಆಕ್ರಮಣ, ದಬ್ಬಾಳಿಕೆ ನಡೆಯುತ್ತಿದೆ.

ತಮ್ಮ ಸಶಸ್ತ್ರ ಕಾವಲುಕೋರ ಪಡೆಗಳೊಂದಿಗೆ ಬಲಪಂಥೀಯ ನೆಲೆಸಿಗ ಗುಂಪುಗಳು ಪೊಲೀಸರ ನೆರವಿನಿಂದ ಶೇಖ್ ಜರ್‍ರಾಹ್ ದಲ್ಲಿರುವ ಪ್ಯಾಲೆಸ್ತೀನಿ ಕುಟುಂಬಗಳನ್ನು ಒಕ್ಕಲೆಬ್ಬಿಸುತ್ತಿವೆ. ಇದನ್ನು ಪ್ಯಾಲೆಸ್ತೀನಿಯರು ಪ್ರತಿರೋಧಿಸುತ್ತಿದ್ದಾರೆ. ರಮ್ಜಾನ್ ಆರಂಭದ ವೇಳೆ, ಡಮಾಸ್ಕಸ್ ಗೇಟ್ ಬಳಿ ಪ್ಯಾಲೆಸ್ತೀನಿಯರು ಸಾಮಾನ್ಯವಾಗಿ ಒಟ್ಟು ಸೇರುತ್ತಿದ್ದ ಸ್ಥಳಕ್ಕೆ ಹೋಗದಂತೆ ಇಸ್ರೇಲಿ ಅಧಿಕಾರಿಗಳು ತಡೆ ಹಿಡಿದಿದ್ದರು. ಇದು ಅಲ್-ಅಕ್ಸಾ ಮಸೀದಿಯಿರುವ ಟೆಂಪಲ್ ಮೌಂಟ್‌ನ ಹಾದಿಯಲ್ಲಿದೆ. ಅಲ್-ಅಕ್ಸಾ ಮಸೀದಿಯು ಜಗತ್ತಿನ ಮುಸ್ಲಿಮರಿಗೆ ಮೂರನೇ ಪವಿತ್ರ ಪ್ರಾರ್ಥನಾ ಸ್ಥಳವಾಗಿದೆ.



ತಮ್ಮಿಂದ ಕದ್ದುಕೊಂಡ ತಮ್ಮದೇ ಮನೆಯೆದುರು ವೃದ್ಧ ಪ್ಯಾಲೆಸೀನೀ ದಂಪತಿ-ಈಗ ಅದರಲ್ಲಿ ನೆಲೆಸಿರುವವರು ನ್ಯೂಯಾರ್ಕಿನಿಂದ ಬಂದಿರುವ ಯೆಹೂದಿ ದಂಪತಿ

ಮೇ 7 ರಂದು ಮಸೀದಿ ಆವರಣದೊಳಗೆ ಪ್ರತಿಭಟನೆ ನಡೆಸುತ್ತಿದ್ದ ಜನರ ಮೇಲೆ ಸಶಸ್ತ್ರ ಪೊಲೀಸರು ಅಶ್ರುವಾಯು, ಗ್ರೆನೇಡ್ ದಾಳಿ ನಡೆಸಿದರು. ರಬ್ಬರ್-ಆವರಣವಿದ್ದ ಬುಲೆಟ್‌ಗಳನ್ನು ಹಾರಿಸಿದರು. ಇದು ಎಲ್ಲೆಡೆ ಪ್ಯಾಲೆಸ್ತೀನಿಯರಲ್ಲಿ ಆಕ್ರೋಶ ಭುಗಿಲೇಳುವಂತೆ ಮಾಡಿದೆ. ಈ ದಾಳಿಯಲ್ಲಿ ನೂರಾರು ಜನರು ಗಾಯಗೊಂಡಿದ್ದಾರೆ. ಇಸ್ರೇಲ್‌ನಾದ್ಯಂತ ಪಟ್ಟಣಗಳಲ್ಲಿ ಪ್ಯಾಲೆಸ್ತೀನಿ-ಅರಬ್ಬರು ಪ್ರತಿಭಟನೆ ನಡೆಸಿದ್ದು ಯೆಹೂದಿ ಬಲಪಂಥೀಯ ಗ್ಯಾಂಗ್‌ಗಳು ಹಾಗೂ ಪೊಲೀಸರು ಅವುಗಳ ಮೇಲೆ ಹಿಂಸಾತ್ಮಕ ದಾಳಿ ನಡೆಸಿದ್ದಾರೆ. ಈ ದಾಳಿಗಳಿಗೆ ಪ್ರತಿಯಾಗಿ ಗಾಜಾದಲ್ಲಿರುವ ಹಮಾಸ್ ಪ್ರಾಧಿಕಾರ ಇಸ್ರೇಲ್ ಪಡೆಗಳಿಗೆ ಗಡುವು ನೀಡಿದೆ, ಪೂರ್ವ ಜೆರುಸಲೇಮ್ ಮತ್ತು ಟೆಂಪಲ್ ಮೌಂಟ್ ಪ್ರದೇಶ ಬಿಟ್ಟು ಹೋಗಿ ಎಂದು ತಾಕೀತು ಮಾಡಿದೆ. ಇದಕ್ಕೆ ಇಸ್ರೇಲಿ ಪಡೆಗಳು ಕಿವಿಗೊಡದಿದ್ದಾಗ ಗಾಜಾದಿಂದ ರಾಕೆಟ್ ದಾಳಿ ನಡೆಸಲಾಗಿದೆ.

ಇಸ್ರೇಲಿ ಪಡೆಗಳು ಈ ಕಿರಿದಾದ ಭೂ ಪ್ರದೇಶದಿಂದ ಹಿಂದೆ ಸರಿದಾಗಿನಿಂದಲೂ ಗಾಜಾವನ್ನು ಈಜಿಪ್ಟ್ ಬೆಂಬಲದಿಂದ 15 ವರ್ಷಗಳಿಂದ ದಿಗ್ಬಂಧನಕ್ಕೆ ಒಳಪಡಿಸಿಟ್ಟಿವೆ. ಗಾಜಾದಲ್ಲಿ 1.9 ಮಿಲಿಯ ಪ್ಯಾಲೆಸ್ತೀನಿಯರು ವಾಸಿಸುತ್ತಿದ್ದಾರೆ. 2008 ಮತ್ತು 2014ರಲ್ಲಿ ಗಾಜಾದ ಮೇಲೆ ವೈಮಾನಿಕ ದಾಳಿ ನಡೆಸಲಾಗಿತ್ತು. 2014ರ ಯುದ್ಧದಲ್ಲಿ ಬಹುತೇಕವಾಗಿ ನಾಗರಿಕರ ಸಹಿತ 2,300 ಪ್ಯಾಲೆಸ್ತೀನಿಯರು ಮೃತಪಟ್ಟಿದ್ದರು; 18,000 ಮನೆಗಳು ನಾಶಗೊಂಡಿದ್ದವು.

ಈಗ, ಮೇ 19ರ ವರೆಗೆ ಗಾಜಾದ ಮೇಲೆ ಸತತ ಒಂಬತ್ತು ದಿನ ಬಾಂಬ್ ದಾಳಿ ನಡೆದಿದೆ. 227 ಜನರು ಮೃತಪಟ್ಟಿದ್ದಾರೆ. ಆ ಪೈಕಿ 64 ಮಕ್ಕಳು ಮತ್ತು 38 ಮಹಿಳೆಯರು ಎನ್ನುವುದು ಆಘಾತಕಾರಿ ಸಂಗತಿ. ಕ್ಷಿಪಣಿಗಳು ಮತ್ತು ಬಾಂಬ್‌ಗಳಿಂದ ನಡೆಸಿದ ಬರ್ಬರ ದಾಳಿಯಿಂದ ಇಡೀ ಜಗತ್ತು ಆಘಾತಗೊಂಡಿದೆ. ಏನನ್ನೂ ಬಿಡದೆ ದಾಳಿ ನಡೆಸಲಾಗಿದೆ. ಗಾಜಾದಲ್ಲಿ ವಾಸದ ಕಟ್ಟಡಗಳಲ್ಲದೆ ಅಂತಾರಾಷ್ಟ್ರೀಯ ಮಾಧ್ಯಮ ಕೇಂದ್ರ ಮತ್ತು ಏಕೈಕ ಕೋವಿಡ್ ಪರೀಕ್ಷಾ ಕೇಂದ್ರವಿದ್ದ ಒಂದು ಕಟ್ಟಡವನ್ನು ಕೂಡ ನಾಶ ಮಾಡಲಾಗಿದೆ. ಇಸ್ರೇಲ್‌ನಲ್ಲಿ ರಾಕೆಟ್ ದಾಳಿಯಲ್ಲಿ 12 ಜನರು ಸತ್ತಿದ್ದಾರೆ.

ಕದನ ವಿರಾಮಕ್ಕೆ ನೀಡಲಾದ ಎಲ್ಲ ಕರೆಗಳನ್ನು ಇಸ್ರೇಲ್ ತಿರಸ್ಕರಿಸಿದೆ. "ಉದ್ದೇಶ ಸಾಧನೆ ಆಗುವವರೆಗೆ' ದಾಳಿಗಳನ್ನು ಮುಂದುವರಿಸುವುದಾಗಿ ಘೋಷಿಸಿದೆ. ಅಮೆರಿಕದ ದೃಢ ಬೆಂಬಲವಿರುವುದರಿಂದ ಇಸ್ರೇಲ್ ಈ ಕ್ರಿಮಿನಲ್ ನೀತಿಗಳು ಮತ್ತು ದಾಳಿಗಳನ್ನು ಮುಂದುವರಿಸಬಹುದು. ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದಾಗ, ಜೆರುಸಲೇಮನ್ನು ಇಸ್ರೇಲ್ ರಾಜಧಾನಿ ಎಂದು ಅಮೆರಿಕ ಮಾನ್ಯ ಮಾಡಿತ್ತು. ಜೆರುಸಲೇಮ್ ಒಂದು ಆಕ್ರಮಿತ ಪ್ರದೇಶ ಎಂದು ವಿಶ್ವ ಸಂಸ್ಥೆ ಗುರುತಿಸಿದೆ. ಆಕ್ರಮಿತ ಪ್ರದೇಶಗಳಲ್ಲಿನ ಕಾನೂನುಬಾಹಿರ ಯೆಹೂದಿ ವಸಾಹತುಗಳು (ಸೆಟ್ಲ್‌ಮೆಂಟ್) ಕಾನೂನುಬದ್ಧ ಎಂದೂ ಟ್ರಂಪ್ ಘೋಷಿಸಿದ್ದರು.

ಇಸ್ರೇಲ್ ಆಡಳಿತಕ್ಕೆ ಬೆಂಬಲ ನೀಡುವ ಅಮೆರಿಕದ ಮೂಲ ನೀತಿಯಿಂದ ಹೊಸ ಅಧ್ಯಕ್ಷ ಜೋ ಬೈಡೆನ್ ವಿಮುಖವಾಗಿಲ್ಲ. ಪ್ರಸಕ್ತ ಸಂಘರ್ಷ ಸ್ಫೋಟಗೊಳ್ಳುವ ಕೆಲವೇ ದಿನಗಳ ಮುಂಚೆ, ಇಸ್ರೇಲ್‌ಗೆ 735 ಮಿಲಿಯ ಡಾಲರ್ ಮೌಲ್ಯದ ಕರಾರುವಾಕ್ಕಾಗಿ ಹೊಡೆಯಬಹುದಾದ ಆಯುಧಗಳನ್ನು ಮಾರಾಟ ಮಾಡುವ ಯೋಜನೆಗೆ ಬೈಡೆನ್ ಆಡಳಿತ ಅನುಮೋದನೆ ನೀಡಿದೆ. ಅದೇ ರೀತಿಯ ಶಸ್ತ್ರಾಸ್ತ್ರಗಳನ್ನು ಈಗ ಗಾಜಾದಲ್ಲಿ ಬಳಸಲಾಗುತ್ತಿದೆ. ಬಿಕ್ಕಟ್ಟಿನ ಬಗ್ಗೆ ಒಂದು ಹೇಳಿಕೆ ನೀಡಲೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಅಮೆರಿಕ ಅವಕಾಶ ನೀಡಿಲ್ಲ. ಮೇ 17ರಂದು ಕದನ ವಿರಾಮಕ್ಕೆ ಬೈಡೆನ್ ಕರೆ ನೀಡಿರುವುದಷ್ಟೆ ಇತ್ತೀಚಿನ ವಿದ್ಯಮಾನವಾಗಿದೆ. ಸಂಘರ್ಷ ಕೊನೆಗೊಳ್ಳುವುದಕ್ಕೂ ಮುನ್ನ ಗಾಜಾದಲ್ಲಿ ತನ್ನ ಆಕ್ರಮಣಾತ್ಮಕ ಯೋಜನೆಯನ್ನು ಕಾರ್ಯಗತಗೊಳಿಸಲು ಇಸ್ರೇಲ್‌ಗೆ ಕಾಲಾವಕಾಶ ಒದಗಿಸುವುದೇ ಅಮೆರಿಕದ ಈ ತಂತ್ರದ ಹಿಂದಿನ ಉದ್ದೇಶವಾಗಿದೆ.

ಜೋರ್ಡಾನ್, ಯುಎಇ ಮತ್ತು ಸೌದಿ ಅರೇಬಿಯಾದಂಥ ಅಮೆರಿಕದೊಂದಿಗೆ ನಿಕಟ ಬಾಂಧವ್ಯ ಹೊಂದಿರುವ ಅರಬ್ ದೇಶಗಳು ಪ್ಯಾಲೆಸ್ತೀನಿ ಉದ್ದೇಶವನ್ನು ಯಾವತ್ತೋ ಕೈ ಬಿಟ್ಟಿವೆ. ಕೇವಲ ಬಾಯುಪಚಾರದ ಸಹಾನುಭೂತಿ ವ್ಯಕ್ತಪಡಿಸುತ್ತಿವೆ. ಇಂಥದ್ದೊಂದು ಕಠಿಣ ಸನ್ನಿವೇಶದಲ್ಲಿ ಪ್ಯಾಲೆಸ್ತೀನಿಯರು ಸೆಟೆದು ನಿಂತು ಪ್ರತಿಭಟಿಸುತ್ತಿದ್ದಾರೆ. ಶೇಖ್ ಜರ್‍ರಾಹ್ ನಿವಾಸಿಗಳಿಗೆ ಬೆಂಬಲವಾಗಿ ಹಾಗೂ ಅಲ್-ಅಕ್ಸಾ ಮಸೀದಿ ಮೇಲಿನ ದಾಳಿ ನಂತರ, ಇಸ್ರೇಲ್ ಒಳಗಿನ ಪ್ಯಾಲೆಸ್ತೀನಿ ನಾಗರಿಕರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟಿಸುತ್ತಿರುವುದು ಈ ಬಾರಿಯ ವಿಶೇಷವಾಗಿದೆ.

ಅಕ್ಕಾ, ಲಿಡ್ಡಾ, ರಾಮಲೆ, ಹೈಫಾ ಮತ್ತಿತರ ನಗರ-ಪಟ್ಟಣಗಳಲ್ಲಿ ಪ್ಯಾಲೆಸ್ತೀನಿ ಯುವಜನರು ಬೀದಿಗಿಳಿದಿದ್ದಾರೆ. ಅವರ ಮೇಲೆ ಯೆಹೂದಿ ಗ್ಯಾಂಗ್‌ಗಳು ಮತ್ತು ಪೊಲೀಸರು ವ್ಯಾಪಕ ಹಿಂಸಾಚಾರ ನಡೆಸಿದ್ದಾರೆ. ಕೋಮು ಸಂಘರ್ಷಗಳು ಭುಗಿಲೆದ್ದಿದ್ದು ಅವುಗಳ ನಿಯಂತ್ರಣಕ್ಕೆ ಕೆಲವು ನಗರಗಳಲ್ಲಿ ಇಸ್ರೇಲಿ ಸೇನೆಯನ್ನೂ ಕರೆಸಬೇಕಾಯಿತು. ಅರಬ್ ನಾಗರಿಕರನ್ನು ದ್ವಿತೀಯ ದರ್ಜೆ ಪ್ರಜೆಗಳಾಗಿ ಕಾಣುತ್ತಿರುವ ಯೆಹೂದಿ ಜನಾಂಗದ್ವೇಷಿ ಆಡಳಿತದಲ್ಲಿನ ಆಂತರಿಕ ವೈರುಧ್ಯಗಳು ಸ್ಫೋಟಗೊಳ್ಳುತ್ತಿವೆ.

ಹಿಂದೆಲ್ಲಾ ಗಾಜಾದ ಮೇಲೆ ದಾಳಿಯಾದಾಗ ಇಸ್ರೇಲ್‌ನಲ್ಲಿನ ಪ್ಯಾಲೆಸ್ತೀನಿ ಪ್ರಜೆಗಳು ಯಾವುದೇ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿರಲಿಲ್ಲ. ಆದರೆ ಈಗ ಎಲ್ಲ ಪ್ರದೇಶಗಳಲ್ಲಿ ಪ್ಯಾಲೆಸ್ತೀನಿ ರಾಷ್ಟ್ರೀಯ ಪ್ರತಿರೋಧದ ಭಾಗವಾಗಿದ್ದಾರೆ. ಪಶ್ಚಿಮ ದಂಡೆಯಲ್ಲಿ ಸಾರ್ವತ್ರಿಕ ಮುಷ್ಕರ ನಡೆದಿದ್ದು ಡಜನ್‌ಗೂ ಹೆಚ್ಚು ಪ್ಯಾಲೆಸ್ತೀನಿಯರು ಇಸ್ರೇಲಿ ಪಡೆಗಳ ಗುಂಡಿಗೆ ಬಲಿಯಾಗಿದ್ದಾರೆ.

ಬಲಪಂಥೀಯ ನೆತನ್ಯಾಹು ಸರ್ಕಾರದೊಂದಿಗೆ ನಿಕಟ ಬಾಂಧವ್ಯ ಬೆಳೆಸಿಕೊಂಡಿರುವ ನರೇಂದ್ರ ಮೋದಿ ಸರ್ಕಾರ, ಪ್ರಸಕ್ತ ಸಂಘರ್ಷದ ವೇಳೆ ಅಮೆರಿಕದ ಧೋರಣೆಯನ್ನೇ ಅನುಸರಿಸುತ್ತಿದೆ. ಇಸ್ರೇಲ್‌ನೊಂದಿಗೆ ವ್ಯಾಪಕ ಭದ್ರತಾ ಮತ್ತು ಮಿಲಿಟರಿ ಸಂಬಂಧ ಇರುವುದರಿಂದ ನರೇಂದ್ರ ಮೋದಿ ಪ್ಯಾಲೆಸ್ತೀನ್ ವಿಚಾರದಲ್ಲಿ ಭಾರತದ ಹಿಂದಿನ ನೀತಿಯಿಂದ ಹಿಂದೆ ಸರಿಯುತ್ತಿದ್ದಾರೆ. ಅದು ಮೇ 16ರಂದು ನಡೆದ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಗಾಜಾದಲ್ಲಿ ಪರಿಸ್ಥಿತಿ ತಿಳಿಗೊಳ್ಳಬೇಕೆಂದು ಕರೆ ನೀಡಿದೆಯೇ ಹೊರತು ಕದನ ವಿರಾಮಕ್ಕೆ ಕರೆ ನೀಡಿಲ್ಲ. ಗಾಜಾದಿಂದ ಇಸ್ರೇಲ್ ಮೇಲೆ ನಡೆದ ರಾಕೆಟ್ ದಾಳಿಗಳನ್ನು ಖಂಡಿಸುತ್ತಲೇ ಅದು ಇಸ್ರೇಲಿ ಆಕ್ರಮಣವನ್ನು 'ಪ್ರತೀಕಾರದ ದಾಳಿ' ಎಂದು ಬಣ್ಣಿಸಿದೆ. ಪ್ಯಾಲೆಸ್ತೀನಿ ಧ್ಯೇಯೋದ್ದೇಶ ಮತ್ತು ದ್ವಿ-ರಾಷ್ಟ್ರ ಪರಿಹಾರಕ್ಕೆ ಅಸ್ಪಷ್ಟ ಮಾತುಗಳಲ್ಲಿ ಬೆಂಬಲ ಸೂಚಿಸಿದೆ. ಆದರೆ ಪೂರ್ವ ಜೆರುಸಲೇಮ್‌ಅನ್ನು ಪ್ಯಾಲೆಸ್ತೀನ್‌ನ ರಾಜಧಾನಿ ಎಂದು ಕರೆ ನೀಡಿಲ್ಲ. ಮೋದಿ ಸರ್ಕಾರ 2017ರಲ್ಲೇ ಇದನ್ನು ಕೈ ಬಿಟ್ಟಿತ್ತು.

ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಂತಲ್ಲದೆ ಭಾರತದ ಇತರ ಎಲ್ಲ ಪ್ರಜಾಸತ್ತಾತ್ಮಕ ರಾಜಕೀಯ ಶಕ್ತಿಗಳು ಪ್ಯಾಲೆಸ್ತೀನ್‌ನ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡುತ್ತಾ ಬಂದಿವೆ. ಇದು ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಪರಂಪರೆಯಾಗಿದೆ. ಪ್ಯಾಲೆಸ್ತೀನಿ ಜನರೊಂದಿಗೆ ಭಾರತದ ಜನತೆಯ ಸೌಹಾರ್ದ ವ್ಯಕ್ತಪಡಿಸಲು ಇದು ಸಕಾಲವಾಗಿದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಜನರು ಬೀದಿಗಿಳಿದು ಬೆಂಬಲ ಸೂಚಿಸುತ್ತಿದ್ದಾರೆ. ಕೋವಿಡ್-19ರ ಭೀಕರ ಅಲೆಯ ಕಾರಣದಿಂದ ಬೀದಿಗಿಳಿದು ಭಾರತೀಯರ ಸೌಹಾರ್ದತೆ ದಾಖಲಿಸಲು ಸಾಧ್ಯವಾಗುತ್ತಿಲ್ಲ. ಆದರೆ ಬೇರೆಲ್ಲ ವಿಧಾನಗಳಿಂದ ನಮ್ಮ ಬೆಂಬಲವನ್ನು ದಾಖಲಿಸಲು ಸಾಧ್ಯವಾಗಬೇಕು.

ಸ್ವಯಂ-ನಿರ್ಣಯಕ್ಕಾಗಿ ಏಳು ದಶಕಗಳಿಂದ ನಡೆಯುತಿರುವ ಪ್ಯಾಲೆಸ್ತೀನಿಯರ ಹೋರಾಟವು ಜಗತ್ತಿನಲ್ಲೇ ಅತಿ ದೀರ್ಘ ಕಾಲದಿಂದ ನಡೆಯುತ್ತಿರುವ ರಾಷ್ಟ್ರೀಯ ವಿಮೋಚನಾ ಹೋರಾಟವಾಗಿದೆ. 1967ರ ಪೂರ್ವದ ಇಸ್ರೇಲ್ ಗಡಿಗಳನ್ನು ಹೊಂದಿರುವ ಪ್ರದೇಶಗಳೊಂದಿಗೆ ಸ್ವತಂತ್ರ ಪ್ಯಾಲೆಸ್ತೀನಿ ಪ್ರಭುತ್ವ ಸ್ಥಾಪನೆಯಾಗುವವರೆಗೂ ಈ ಹೋರಾಟ ಕೊನೆಗೊಳ್ಳದು.

ಅನು: ವಿಶ್ವ

ಕೋವಿಡ್–19 ಎರಡನೆಯ ಅಲೆ–ಹಲವು ಪ್ರಶ್ನೆಗಳು ಭಾಗ 2



ಕೋವಿಡ್ ನ ಎರಡನೆಯ ಅಲೆ ದೇಶದಲ್ಲಿ ಹಾಹಾಕಾರ ಎಬ್ಬಿಸಿದ್ದು, ಇದರಿಂದ ಭಯಭೀತರಾದ ಜನರಲ್ಲಿ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಈ ಪ್ರಶ್ನೆಗಳಿಗೆ ದೀರ್ಘ ಕಾಲ ಕರ್ನಾಟಕದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸದ ಅಪಾರ ಅನುಭವವಿರುವ ಹಿರಿಯ ವೈದ್ಯರಾದ ಡಾ.ಕೆ. ಸುಶೀಲಾ ಈ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಭಾಗ–1 ರಲ್ಲಿ 7 ಪ್ರಶ್ನೆಗಳಿಗೆ ಉತ್ತರ ಪ್ರಕಟಿಸಲಾಗಿತ್ತು. ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ ಭಾಗ–2ರಲ್ಲಿ ಉಳಿದ ಪ್ರಶ್ನೆಗಳಿಗೆ ಉತ್ತರವಿದೆ.

7. ಕೊವಿದ್ ಚಿಕಿತ್ಸೆಯಲ್ಲಿ ರೆಮೆಡೆಸ್ವಿರ್ ಪರಿಣಾಮಕಾರಿಯೇ? ಕೊವಿದ್ ರೋಗಪರೀಕ್ಷೆಯಲ್ಲಿ ಸಿ.ಟಿ. ಸ್ಕ್ಯಾನ್ ನ ಪಾತ್ರವೇನು?ಈ ಕುರಿತು ಇರುವ ವಿವಾದವೇನು?

(ಕಳೆದ ಸಂಚಿಕೆಯಲ್ಲಿ ಈ ಪ್ರಶ್ನೆಗೆ ಉತ್ತರ ಭಾಗಶಃ ಪ್ರಕಟವಾಗಿತ್ತು. ಅದನ್ನು ಪೂರ್ಣಗೊಳಿಸಲು ಮತ್ತೆ ಪ್ರಕಟಿಸಲಾಗಿದೆ.: ಸಂ)

ಕೋವಿಡ್ ಕೆ–19 ರೋಗದ ಹೆಸರಿನೊಂದಿಗೆ ಅತ್ಯಂತ ಹೆಚ್ಚು ಕೇಳಿ ಬರುವ ಸಿ.ಟಿ. ಸ್ಕ್ಯಾನ್ ಹಾಗೂ ರೆಮ್‌ಡೆಸಿವಿರ್. ತಜ್ಞರ ಅಭಿಪ್ರಾಯದಂತೆ ಹಲವು ಪ್ರಾರಂಭಿಕ ಹಂತದಲ್ಲಿರುವ ಕೋವಿಡ್–19 ರ ರೋಗಿಗಳನ್ನು ಶ್ವಾಸಕೋಸದ ಸಿ.ಟಿ. ಸ್ಕ್ಯಾನ್‌ಗೆ ಒಳಪಡಿಸಿದಾಗ, ಶ್ವಾಸಕೋಶದಲ್ಲಿ ಈ ರೋಗಕ್ಕೆ ಸಂಬಂಧಿಸಿದ ಕಲೆಗಳು ಕಾಣಿಸಿಕೊಂಡಿದ್ದವು. ಆದರೆ ಇಂತಹ ರೋಗಿಗಳು ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲದೆ ಸಂಪೂರ್ಣ ಗುಣಮುಖರಾಗಿದ್ದರು. ಹಾಗಾಗಿ ಕೋವಿಡ್ ಇದೆ ಎಂದು ಪತ್ತೆಯಾದೊಡನೆ ಸಿ.ಟಿ. ಸ್ಕ್ಯಾನ್ ಮಾಡುವುದು ಸರಿಯಲ್ಲ.

1) ಇದರಿಂದ ಶರೀರ, ಅತೀ ಹೆಚ್ಚಿನ ಪ್ರಮಾಣದಲ್ಲಿ ಅಪಾಯಕರವಾದ ರೇಡಿಯೆಷನ್‌ಗೆ ಒಳಗಾಗುತ್ತದೆ.
2) ಇದು ದುಬಾರಿ.
3) ಚಿಕ್ಕ ಪುಟ್ಟ ಊರುಗಳಲ್ಲಿ ಇದು ಲಭ್ಯವಿಲ್ಲ.

ಸೋಂಕು ಕಾಣಿಸಿದ 5–6 ದಿನಗಳಲ್ಲಿ, ಉಸಿರಾಟದ ತೊಂದರೆ ಕಾನಿಸಿಕೊಂಡರೆ ರೋಗಿಯನ್ನು ಈ ಸ್ಕ್ಯಾನ್‌ಗೆ ಒಳಪಡುವುದು ಉತ್ತಮ. ಎಕ್ಸ್–ರೇ– ಇದು ಸಿ.ಟಿ. ಸ್ಕ್ಯಾನ್‌ನಷ್ಟು ನಿಖರವಾಗಿ ಅಲ್ಲದಿದ್ದರೂ ಶ್ವಾಸಕೋಶಗಳಲ್ಲಿನ ಸೋಂಕು ಪತ್ತೆ ಹಚ್ಚುವಲ್ಲಿ ಸಹಕಾರಿ.

1) ಇಲ್ಲಿ ದೇಹಕ್ಕೆ ಸಿಗುವ ರೇಡಿಯೇಷನ್ ಪ್ರಮಾಣ ಸಿ.ಟಿ. ಸ್ಕ್ಯಾನ್‌ಗಿಂತ ಬಹಳ ಕಡಿಮೆ.
2) ಬಹಳ ಅಗ್ಗ.
3) ಚಿಕ್ಕ ಪುಟ್ಟ ಪ್ರದೇಶಗಳಲ್ಲೂ ಈ ಸೌಲಭ್ಯ ಲಭ್ಯ.

ಇಂದು ಜನರು ಕೋವಿಡ್ ಕಾಯಿಲೆಗೆ ರಾಮಬಾಣವೆಂದು ಭಾವಿಸುವ ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟವಾಗುತ್ತಿರುವ ರೆಮ್‌ಡೆಸಿವಿರ್, ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಹಲವು ತಜ್ಞರ ಪ್ರಕಾರ ಹೆಚ್ಚಿನ ಪ್ರಯೋಜನಕಾರಿಯಲ್ಲಿ. ಇದು ವೈರಸ್‌ಗಳ ನಾಸಕ ಔಷಧವಾದರೂ ಸಾರ್ಸ್–ಕೋವ್–2 ವೈರಸ್‌ಗಳ ಸಾರದಲ್ಲಿ ಹೆಚ್ಚು ಸಫಲವಾಗಿಲ್ಲ. ಇದರ ಉಪಯೋಗದಿಂದ ಏನಾದರು ಪ್ರಯೋಜನವಿದ್ದರೆ ಅದು ಈ ವೈರಸ್ಸ್ ರೋಗಿಗಳ ದೇಹದಲ್ಲಿ ಶ್ರೀಘ್ರಾವಧಿಯಲ್ಲಿ ವಂಶಾಭಿವೃದ್ಧಿಗೊಳ್ಳುವ ಪ್ರಥಮ ಹಂತ ಹಾಗೂ ದ್ವೀತಿಯ ಹಂತದಲ್ಲಿ. ಪ್ರಾರಂಭದಲ್ಲಿ ರೋಗಿಯ ದೇಹದಿಂದ ಸಾಮಾನ್ಯವಾಗಿ ಸಾಧಾರಣಾ 10 ದಿನಗಳಲ್ಲಿ ಈ ವೈರಸ್‌ಗಳು ಮಯಾವಾಗುವುದರಿಂದ ಕಾಯಿಲೆಯ 10 ದಿನಗಳಲ್ಲಿ ಈ ವೈರಸ್‌ಗಳು ಮಾಯವಾಗುವುದರಿಂದ ಕಾಯಿಲೆಯ ಮುಂದಿನ ಹಂತಗಳಲ್ಲಿ ಇದರ ಬಳಕೆ ಅಪ್ರಯೋಜಕ. ಹಾಗೂ ಈ ಔಷಧ ಕಿಡ್ನಿ ಹಾಗೂ ಲಿವರ್‌ಗಳ ಮೇಲೆ ತೀಕ್ಷ್ಣ ಅಡ್ಡಪರಿಣಾಮ ಬೀರುವ ಸಾಧ್ಯತೆ ಇದೆ. ಮುಂದಿನ




ಹಂತಗಳಲ್ಲಿ ದೇಹದಲ್ಲಿ ಕಂಡುಬರುವ ತೀವ್ರತರ ಗುಣಲಕ್ಷಣಗಳಿಗೆ ವೈರಾಣುಗಳು ಕಾರಣವಲ್ಲ. ಬದಲು ಅದಾಗಲೇ ಇವುಗಳಿಂದ ಘಾಸಿಗೊಳಗಾದ ಪ್ರಮುಖ ಅಂಗಗಳ ನಿಷ್ಕ್ರಿಯತೆ ಹಾಗೂ ಈ ವೈರಸ್‌ಗಳನ್ನು ನಾಶಪಡಿಸಲು ದೇಹದ ಪ್ರಬಲ ರಕ್ಷಣಾ ವ್ಯೂಹ ತಯಾರಿಸಿದ ರಾಸಾಯನಿಕಗಳಿಂದ ದೇಹದ ಮೇಲಾಗುವ ದುಷ್ಪರಿಣಾಮ.

8. ಕೊವಿದ್ ಚಿಕಿತ್ಸೆಯಲ್ಲಿ ಪ್ಲಾಸ್ಮಾ ಚಿಕಿತ್ಸೆ ಮತ್ತು ಡಿ.ಆರ್.ಡಿ.ಒ ಪ್ರಯೋಗ ಶಾಲೆಯಲ್ಲಿ ಹೊಸದಾಗಿ ತಯಾರಿಸಲಾಗಿರುವ '2 ಡಿಲಾ' ಗಳ ಪಾತ್ರವೇನು?

ಹಲವು ತಜ್ಞರ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ಲಾಸ್ಮಾ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ ಅಲ್ಲ. ಇದರ ಅಲ್ಪ ಸ್ವಲ್ಪ ಪ್ರಯೋಜನ ಏನಾದರೂ ಇದ್ದರೆ, ಕಾಯಿಲೆಯ ಮೊದಲ ಹಂತದಲ್ಲಿ ವೈರಾಣು ವೃದ್ಧಿಗೊಳ್ಳುವಾಗ ಮಾತ್ರ. ಇತ್ತೀಚೆಗೆ ಪ್ಲಾಸ್ಮಾ ಚಿಕಿತ್ಸೆ ಕೈಬಿಡಲು ಐ.ಸಿ.ಎಂ.ಆರ್ ಮಾರ್ಗದರ್ಶಿ ಸೂತ್ರಗಳಲ್ಲಿ ಹೇಳಿದೆ.

ಈ ಕೋವಿಡ್–19 ರ ಇನ್ನೊಂದು ಅತೀ ಅಪಾಯಕಾರೀ ಗುಣವೆಂದರೆ ರಕ್ತ ಹೆಪ್ಪುಗಟ್ಟುವಿಕೆ. ಆದರೆ ಇದನ್ನು ತಡೆಗಟ್ಟಲು ಬೇಕಾದ ಔಷಧ ಕೇವಲ ವೈದ್ಯರ ಸಲಹೆಯಂತೆ ಅವರ ಮೇಲುಸ್ತುವಾರಿಯಲ್ಲಿ ಉಪಯೋಗಿಸತಕ್ಕದ್ದು.

ಭಾರತದ ಔಷಧಗಳ ಗುಣಮಟ್ಟ ನಿಯಂತ್ರಣ ಪ್ರಾಧಿಕಾರ ಮೇ 8 ನೇ ತಾರೀಖು, ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿ.ಆರ್.ಡಿ.ಒ) ತಯಾರಿಸಿದ '2 ಡಿಲಾ' (2 ಡಿಒಕ್ಸಿ ಡಿ ಗ್ಲೂಕೋಸ್) ಎನ್ನುವ ಔಷಧವನ್ನು ಕೋವಿಡ್–19 ರ ಚಿಕಿತ್ಸೆಯಲ್ಲಿ ತುರ್ತು ಸಂದರ್ಭಗಳಲ್ಲಿ ಬಳಸಲು ಅನುಮತಿ ನೀಡಿದೆ. ಇದರಿಂದ ಚಿಕಿತ್ಸೆ ಪ್ರಾರಂಭಿಸಿದ ಮೂರು ದಿನಗಳಲ್ಲಿ ರೋಗಿಯಲ್ಲಿ ಒಕ್ಸಿಜನ್‌ನ ಬಳಕೆಯಲ್ಲಿ ಪ್ರತಿಶತ 42 ರಿಂದ 43 ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ ಎಂದೂ, ರೋಗಿಯ ದೇಹದಲ್ಲಿ ರೋಗಾಣುಗಳು ಶೀಘ್ರವಾಗಿ ನಾಶವಾಗುವುದೆಂದೂ ತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಇದರ ಪರಿಣಾಮಕಾರಿತನದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಸಾಧ್ಯ.



ಈ ಕಾಲದಲ್ಲಿ ಜನರ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡ ಹಲವರು ಕೋವಿಡ್ ಬಾರದಂತಹ, ಬಂದರೆ ಧಿಡೀರನೆ ಗುಣಪಡಿಸುವಂತಹ ಔಷಧಗಳು ತಮ್ಮಲ್ಲಿದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇವರ ಬಗ್ಗೆ ಇವರ ಔಷಧಗಳ ಬಗ್ಗೆ ಜಾಗೃತಿಮೂಡಿಸುವುದು ಅವಶ್ಯವಿದೆ.

9. ಕೊವಿದ್ ನಿಂದ ಬಳಲಿ ಗುಣಮುಖರಾದವರಿಗೆ ಮುಂದೆ ಬೇರೆ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆಯೆ?

ಕೋವಿಡ್–19 ಕಾಯಿಲೆ ಸೋಂಕಿತರಲ್ಲಿ ಯಾವುದೇ ಗುಣಲಕ್ಷಣಉಳ್ಳವರು, ಸೋಂಕಿನಿಂದ ಭಾಧಿತರಾದವರೂ 8–10 ದಿನಗಳಲ್ಲಿ ವೈರಸ್ ನಾಶವಾಗಿ ಯಾವುದೇ ಅಪಾಯಕ್ಕೊಳಗಾಗದೇ ಹೆಚ್ಚಾಗಿ ಪೂರ್ಣವಾಗಿ ಗುಣಮುಖರಾಗುತ್ತಾರೆ. ಆದರೆ ಎಲ್ಲೋ ಕೆಲವರಲ್ಲಿ ಅದಾಗಲೇ ಘಾಸಿಗೊಂಡ ದೇಹದ ಪ್ರಮುಖ ಅಂಗಗಳ ನಿಷ್ಕ್ರಿಯತೆ ರೋಗಿಯ ಜೀವಕ್ಕೆ ಮುಂದೆ ಅಪಾಯ ಒಡ್ಡಬಹುದು.

ಆದರೆ ಹೀಗೆ ಗುಣವಾದವರಲ್ಲೂ ಕೆಲವರನ್ನು ತಿಂಗಳಿಗಿಂತಲೂ ಅಧಿಕ ಸಮಯ ಅತಿ ತೀವ್ರ ಕೆಮ್ಮು ಬಾಧಿಸಬಹುದು. ಇನ್ನು ಯಾವುದೇ ಸಮಸ್ಯೆಗಳಿಲ್ಲದವರೂ ಒಮ್ಮೆಲೇ ಕಿಡ್ನಿ, ಹೃದಯ, ಮಿದುಳು, ಲಿವರ್ ಮೊದಲಾದ ದೇಹದ ಪ್ರಮುಖ ಅಂಗಗಳ ಬಾಧೆಗೊಳಗಾಗಬಹುದು. ಧಿಡೀರನೆ ಮರಣವನ್ನು ಹೊಂದಬಹುದು.

ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡ ಹಲವರಲ್ಲಿ ಕಾಣಿಸಿಕೊಳ್ಳುತತಿರುವ ಕಪ್ಪು ಶಿಲೀಂದ್ರ (ಬ್ಲ್ಯಾಕ್ ಫಂಗಸ್ ಅಥವಾ ಮ್ಯುಕೊರ್ ಮೈಕೊಸಿಸ್) ಎನ್ನುವ ಬಹಳ ವಿರಳದಾದ ಸೋಂಕಿನ ಚಿಕಿತ್ಸೆ ವೈದ್ಯರಿಗೆ ಸವಾಲಾಗಿ ನಿಂತಿದೆ. ದೇಹದ ರೋಗ ರಕ್ಷಣಾ ವ್ಯವಸ್ಥೆ ದುರ್ಬಲವಾಗಿರುವ ಸಿಹಿಮೂತ್ರ, ಮೊದಲಾದ ರೋಗದಿಂದ ಬಳಲುವವರಲ್ಲಿ ಹಾಗೂ ಯಾವುದೇ ರೋಗದ ಚಿಕಿತ್ಸೆಗಾಗಿ ರೋಗ ರಕ್ಷಣಾ ವ್ಯೂಹವನ್ನು ದುರ್ಬಲಗೊಳಿಸುವ ಚಿಕಿತ್ಸೆ ಪಡೆಯುವ ರೋಗಿಗಳಲ್ಲಿ ಈ ಫಂಗಸ್ ಸೋಂಕು ಹೆಚ್ಚಾಗಿ ಕಂಡುಬರುತ್ತಿದೆ.

ಮೂಗಿನಲ್ಲಿ ಉಸಿರಾಟದ ತೊಂದರೆ, ಮುಖದ ಒಂದು ಭಾಗ ಊದಿಕೊಂಡು, ಮರಗಟ್ಟಿ, ನೋವಿನಿಂದ ಕೂಡಿರುವುದು, ಮೂಗಿನಿಂದ ಕಪ್ಪು ಅಥವಾ ರಕ್ತಮಿಶ್ರಿತ ಸ್ರಾವವಾಗುವುದು, ಹಲ್ಲು ಅಲುಗಾಡುವುದು ಹಾಗೂ ನೋವು, ದೃಷ್ಟಿ ಮಸಕಾಗುವುದು ಹಾಗೂ ವಸ್ತುಗಳೆಲ್ಲಾ ಎರಡಾಗಿ ಕಾಣುವುದು, ಕಣ್ಣುನೋವು, ಜ್ವರ, ಎದೆ ನೋವು, ಶ್ವಾಸಕೋಶದ ತೊಂದರೆಗಳಲ್ಲಿ ಹೆಚ್ಚಳವಾಗುವುದು, ರಕ್ತ ಹೆಪ್ಪುಗಟ್ಟುವುದು ಇದರ ಗುಣ ಲಕ್ಷಣಗಳು, ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯದಿದ್ದರೆ ಇದು ಸಾವಿಗೂ ಕಾರಣವಾಗಬಹುದು.

10. ವ್ಯಾಕ್ಸೀನ್ ಕೋವಿದ್ ಮಹಾಸೋಂಕನ್ನು ಪೂರ್ಣವಾಗಿ ನಿವಾರಿಸಲು ಇರುವ ಏಕೈಕ ಪರಿಹಾರ ಎಂಬುದು ನಿಜವೇ? ವ್ಯಾಕ್ಸೀನ್ ಎಲ್ಲರೂ ಹಾಕಿಸಿಕೊಳ್ಳಬೇಕೆ? ಯಾರು ಹಾಕಿಸಿಕೊಳ್ಳಬಾರದು?

ಕೊವಿಡ್ ಬಾರದಂತೆ ತಡೆಗಟ್ಟುವಲ್ಲಿ ಈಗ ನಮ್ಮ ದೇಶದಲ್ಲಿ ದೊರೆಯುವ ಲಸಿಕೆಯು, ಕೊವಿಡ್ ಬಾರದಂತೆ ತಡೆಗಟ್ಟುವಲ್ಲಿ ಶೇ. 70 ರಿಂದ 80 ಪರಿಣಾಮಕಾರಿ ಶಕ್ತಿಯನ್ನು ಹೊಂದಿದೆ. ಅಂದರೆ 2 ಲಸಿಕೆಯನ್ನು ಪಡೆದ ನಂತರವೂ ಪ್ರತಿ ನೂರು ಜನರಲ್ಲಿ 20 ರಿಂದ 30 ಜನರಿಗೆ ಈ ಕಾಯಿಲೆ ಬರುವ ಸಂಭವವಿದೆ. ಆದರೆ ಹೀಗೆ ಬಂದವರಲ್ಲಿ ಸಹ ಇದು ಅಲ್ಪವೂ ಮಧ್ಯಮ ತೀವ್ರತೆಯ ಕಾಯಿಲೆಯನ್ನು ಉಂಟು ಮಾಡಬಹುದು. ಆದರೆ ಲಸಿಕೆ ಪಡೆದವರಲ್ಲಿ ಅತೀ ತೀವ್ರಕಾಯಿಲೆ ಹಾಗೂ ಮರಣದ ಪ್ರಮಾಣ ಗಣನೀಯವಾಗಿ ಕಡಿತಗೊಳ್ಳುವುದು ಕಂಡು ಬಂದಿದೆ. ಹಾಗಾಗಿ 2 ಲಸಿಕೆಯನ್ನು ಪಡೆದವರೂ ಕೂಡಾ 'ಕೋವಿಡ್–19 ತಡೆಗಟ್ಟುವ ನಿಯಮ'ಗಳಾದ ಮಾಸ್ಕ್ ಧಾರಣೆ, ದೈಹಿಕ ಅಂತರ ಕಾಪಾಡುವಿಕೆ ಮತ್ತು ಪದೇ ಪದೇ ಸಾಬೂನಿನೊಂದಿಗೆ ಕೈ ತೊಳೆಯುವುದನ್ನು ಕಡ್ಡಾಯವಾಗಿ ಮುಂದುವರಿಸುವುದು ಅಗತ್ಯ. ಯಾವುದೇ ಸೋಂಕು ಕಾಯಿಲೆ ಒಂದು ಸಮಾಜದಲ್ಲಿ ಒಬ್ಬರಿಂದೊಬ್ಬರಿಗೆ ಹರಡುವ ಸರಪಳಿಯ ಕೊಂಡಿ ತುಂಡಾಗಿ ಹತೋಟಿಗೆ ಬರಬೇಕಾದರೆ ಅಲ್ಲಿನ ಪ್ರತಿಶತ 60 ರಿಂದ 70 ಜನರ ದೇಹದಲ್ಲಿ ಆ ಸೋಂಕಿನ ರೋಗ ನಿರೋಧಕ ಶಕ್ತಿ ಇರುವುದು ಅವಶ್ಯಕ.

ಕೊವಿಡ್ ಲಸಿಕೆಯ ಎರಡೂ ಡೋಸುಗಳನ್ನು ಪಡೆದಾಗ ಉತ್ಪತ್ತಿಯಾಗುವ ರೋಗ ನಿರೋಧಕ ಶಕ್ತಿ ಇಂದಿನ ಅಂದಾಜಿನಂತೆ ದೇಹದಲ್ಲಿ ಉಳಿಯುವುದು ಒಂದರಿಂದ ಒಂದುವರೆ ವರ್ಷ. ಆದರೆ ಈ ಕಾಲದಲ್ಲಿ ನಾವು ನಮ್ಮ ದೇಶದ 80 ರಿಂದ 100 ಕೋಟಿ ಜನರಿಗೆ 2 ಡೋಸುಗಳ ಲಸಿಕೆಯನ್ನು ಅಂದರೆ ಒಟ್ಟು 160 ರಿಂದ 200 ಕೋಟಿ ಡೋಸು ಲಸಿಕೆ ನೀಡಲು ಸಾಧ್ಯವಾದರೆ ಹಾಗೂ ಜನರು ಕ್ರಮಬದ್ಧವಾಗಿ 'ಕೊವಿಡ್ ತಡೆಗಟ್ಟುವ ನಿಯಮ ಪಾಲಿಸಿದರೆ ಇದು ಸಾಧ್ಯ'. ಆದರೆ ನಾಲ್ಕು ತಿಂಗಳಲ್ಲಿ ನಮ್ಮ ದೇಶದಲ್ಲಿ ಬರೇ (18) ಹದಿನೆಂಟು ಕೋಟಿ ಲಸಿಕೆ ನೀಡಲು ಸಾಧ್ಯವಾಗಿದೆ. ಈಗಾಗಲೇ ಲಸಿಕೆಯ ತೀವ್ರ ಕೊರತೆ ಕಾಡುತ್ತಿದೆ. ಹಾಗೂ ಈ ಸೋಂಕು

ಪುಟ 12 ಕ್ಕೆ



ಸರ್ಕಾರ ಕತ್ತಲಲ್ಲಿ ತಡಕಾಡುತ್ತಿರುವಾಗ



ನ್ಯಾಯಾಲಯಗಳು ನೆರವು ನೀಡುತ್ತಿವೆ



ಕೋವಿಡ್-19ರ ಎರಡನೇ ಮಾರಣಾಂತಿಕ ಅಲೆಯ ಸಮಯದಲ್ಲಿ ಕನಿಷ್ಟವೆಂದರೂ 14 ಹೈಕೋರ್ಟ್‌ಗಳು ಸ್ಫೋಟಗೊಳ್ಳುತ್ತಿರುವ ಅವ್ಯವಸ್ಥೆಯ ನಡುವೆ ಒಂದು ಮಟ್ಟಿನ ವ್ಯವಸ್ಥೆಯನ್ನು ತರುವ ಪ್ರಯತ್ನದಲ್ಲಿ ಸರಕಾರಗಳು ಮತ್ತು ಪ್ರಾಧಿಕಾರಗಳನ್ನು ತರಾಟೆಗೆ ತಗೊಂಡಿವೆ, ಅವುಗಳ ಕಟು ವಿಮರ್ಶೆಗಳನ್ನು ಮಾಡಿವೆ. ಸುಪ್ರೀಂ ಕೋರ್ಟ್ ಇತ್ತೀಚಿನ ವರೆಗೂ ಸ್ಪಂದಿಸಲು ಸ್ವಲ್ಪ ಹಿಂಜರಿದಂತೆ, ವಿಳಂಬ ತೋರುವಂತೆ ಕಂಡು ಬಂದರೂ, ಈಗ ಅದು ಕೂಡ ಕಳೆದ ಕೆಲವು ವಾರಗಳಿಂದ –ಮುಖ್ಯ ನ್ಯಾಯಾಧೀಶರಾಗಿದ್ದ ಬೋಬ್ಡೆ ರವರ ನಿವೃತ್ತಿಯ ನಂತರ ಎಂದು ಕೆಲವರು ಹೇಳುತ್ತಿದ್ದಾರೆ– ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಸ್ಪಷ್ಟ ಹಿಡಿತ ಹೊಂದಲು ಪ್ರಾರಂಭಿಸಿರುವಂತೆ ಕಾಣುತ್ತದೆ. ಮೋದಿ ಸರಕಾರ ಇನ್ನೂ ತಡಕಾಡುತ್ತಿರುವುದರಿಂದ, ಮುಂದಿನ ದಿನಗಳಲ್ಲಿ ನ್ಯಾಯಾಂಗವು ತನ್ನ ಪಾತ್ರವನ್ನು ಇನ್ನಷ್ಟು ನಿರ್ಣಾಯಕ ರೀತಿಯಲ್ಲಿ ಮುಂದುವರೆಸುತ್ತದೆ ಎಂದು ಆಶಿಸಬೇಕಾಗಿದೆ.

ಸವೇರಾ, ಪೀಪಲ್ಸ್ ಡೆಮಾಕ್ರಸಿ ಅನುವಾದ: ಶ್ರ್ರ.ಶಂ.ನಾ.

* ನೀವು ಜನರನ್ನು ಸಾವಿನ ದವಡೆಗೆ ದೂಡುತ್ತಿದ್ದೀರಿ.
* ನೀವೊಂದು ನೆಲದ ವಾಸ್ತವತೆಯ ಸ್ಪರ್ಶವೇ ಇಲ್ಲದ, ಸುಂದರವೆನಿಸುವ ಚಿತ್ರವನ್ನು ಕೊಡುತ್ತಿದ್ದೀರಿ.
* ಪ್ರಾಯಶಃ ನಿಮ್ಮ ಮೇಲೆ ಕೊಲೆಯ ಆಪಾದನೆ ಹೊರಿಸಬೇಕಾಗುತ್ತದೆ.
* ಕಳೆದ 10-15 ತಿಂಗಳುಗಳಿಂದ ಏನು ಮಾಡುತ್ತಿದ್ದೀರಿ?
* ನೀವೇನು ಮಂಗಳ ಗ್ರಹದ ಮೇಲೆ ವಾಸಿಸುತ್ತಿದ್ದೀರಾ?

ಇವೆಲ್ಲಾ ಭಾರತದ ವಿವಿಧ ಹೈಕೋರ್ಟ್‌ಗಳು ಕಳೆದ ಹಲವು ವಾರಗಳಲ್ಲಿ ಸರ್ಕಾರಗಳು ಮತ್ತು ಇತರ ಪ್ರಾಧಿಕಾರಗಳ ಮೇಲೆ ಮಾಡಿರುವ ಟಿಪ್ಪಣಿಗಳು. ಏಪ್ರಿಲ್ 1, 2021 ರಿಂದ ಸೋಂಕು ದೃಢಪಟ್ಟವರ ಸಂಖ್ಯೆ 1 ಕೋಟಿಯನ್ನು, ಮತ್ತು 86,000 ಕ್ಕೂ ಅಧಿಕ ಸಾವುಗಳನ್ನು ಕಂಡಿರುವ ಕೋವಿಡ್-19 ರ ಎರಡನೇ ಮಾರಣಾಂತಿಕ ಅಲೆಯ ಸಮಯದಲ್ಲಿ ಕನಿಷ್ಟವೆಂದರೂ 14 ಹೈಕೋರ್ಟ್‌ಗಳು ಇವುಗಳ ನಿರ್ವಹಣೆಯಲ್ಲಿ ಸಕ್ರಿಯವಾಗಿವೆ. ಮೇಲೆ ಹೇಳಿರುವ ಟಿಪ್ಪಣಿಗಳು, ಈ ನ್ಯಾಯಾಲಯಗಳು ಸರಕಾರಗಳು ಮತ್ತು ಪ್ರಾಧಿಕಾರಗಳೊಂದಿಗೆ ಸ್ಫೋಟಗೊಳ್ಳುತ್ತಿರುವ ಅವ್ಯವಸ್ಥೆಯ ನಡುವೆ ಒಂದು ಮಟ್ಟಿನ ವ್ಯವಸ್ಥೆಯನ್ನು ತರುವ ಪ್ರಯತ್ನದಲ್ಲಿ ನೀಡಿರುವ ಹಲವು ನಿರ್ದೇಶನಗಳು, ಅಭಿಪ್ರಾಯಗಳ ಭಾಗ

ದೇಶದ ಹಲವು ಹೈಕೋರ್ಟ್‌ಗಳು ಏನು ಹೇಳಿವೆ ಎನ್ನುವುದರ ಸ್ಥೂಲ ಸಾರಾಂಶವನ್ನು ಕೊಡುವ ಮುನ್ನ ಬಹಳ ಸ್ಪಷ್ಟವಾಗಿ ಹೊರ ಹೊಮ್ಮಿರುವ ಕೆಲವು ಅಂಶಗಳನ್ನು ಗಮನಿಸುವುದು ಸೂಕ್ತ. ಮೊದಲನೆಯದಾಗಿ, ಕೋವಿಡ್‌ನ ಈ ಎರಡನೇ ದಾಳಿಯನ್ನು ಎದುರಿಸಲು ದೇಶವನ್ನು ಸಿದ್ಧಗೊಳಿಸುವಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಭಾರೀ ವಿಫಲತೆಯಿಂದಾಗಿ ನ್ಯಾಯಾಂಗ ವಿವಿಧ ಹಂತಗಳಲ್ಲಿ ಇದರಲ್ಲಿ ಮಧ್ಯಪ್ರವೇಶಿಸಬೇಕಾಗಿ ಬಂದಿದೆ. ದೇಶಿ ಮತ್ತು ವಿದೇಶಿ ವಿಜ್ಞಾನಿಗಳು ಎರಡನೇ ಅಲೆ ಬಗ್ಗೆ ಮತ್ತೆ-ಮತ್ತೆ ಮುನ್ನೆಚ್ಚರಿಕೆ ನೀಡಿದ್ದರು. ಆದರೆ ಕೇಂದ್ರದಲ್ಲಿ ಮೋದಿ ಹಾಗೂ ರಾಜ್ಯಗಳಲ್ಲಿ ಸರಕಾರ ನಡೆಸುವ ಅವರ ಸಹಯೋಗಿಗಳು ತಮ್ಮದೇ ಅಬ್ಬರದ ಮಾತುಗಳು ಮತ್ತು ಪ್ರಚಾರ ಯಂತ್ರದ ಯಶಸ್ಸಿನ ಅಮಲಿನಲ್ಲಿ ಮುಳುಗಿದ್ದಂತೆ ಕಾಣುತ್ತದೆ. ಜನವರಿಯಲ್ಲಿ ದಾವೋಸ್‌ನಲ್ಲಿ ಮಾತನಾಡುತ್ತಾ ಪ್ರಧಾನ ಮಂತ್ರಿ ಮೋದಿಯವರು ಭಾರತವು ಇಡೀ ವಿಶ್ವಕ್ಕೆ ದಾರಿ ತೋರಿಸಿದೆ ಎಂದು ಕೊಚ್ಚಿಕೊಂಡಿದ್ದರು. ಆರೋಗ್ಯ ಮಂತ್ರಿ ಹರ್ಷವರ್ಧನ್‌ರವರು ಈ ಸಾಂಕ್ರಾಮಿಕದ ಕೊನೆಯ ಆಟ ಮುಗಿದಿದೆ ಎಂದಿದ್ದರು. ಹಲವು ಮುಖ್ಯ ಮಂತ್ರಿಗಳು ಮತ್ತು ಪ್ರಮುಖರು ಇನ್ನು ಮಾಸ್ಕುಗಳ ಅಗತ್ಯವಿಲ್ಲ, ಗಂಗಾ ನದಿ ಈ ವೈರಾಣುವನ್ನು ಕೊಚ್ಚಿ ಕೊಂಡು ಹೋಗುತ್ತದೆ ಇತ್ಯಾದಿ ಹೇಳಿಕೆಗಳನ್ನು ನೀಡಿದ್ದರು. ಹೀಗಾಗಿ ಮುನ್ಸೂಚನೆಯಂತೆ ಎರಡನೇ ಅಲೆ ಭಾರತಕ್ಕೆ ಅಪ್ಪಳಿಸಿದಾಗ ಅದಾಗಲೇ ಜರ್ಜರಿತವಾಗಿದ್ದ ಆರೋಗ್ಯ ವ್ಯವಸ್ಥೆ ಬಿರುಕು ಬಿಟ್ಟಿತು. ಪೂರೈಕೆಯ ಚಾನೆಲ್‌ಗಳು ಒತ್ತಡಕ್ಕೊಳಗಾದವು, ಆಕ್ಸಿಜನ್ ಮತ್ತು ಜೀವರಕ್ಷಕ ಔಷಧಿಗಳು ಕಾಣೆಯಾದವು, ಆರೋಗ್ಯ ಸಿಬ್ಬಂದಿಗಳು ಮಾನವ ಮಿತಿಗಳನ್ನೂ ಮೀರಿ ಕೆಲಸ ಮಾಡಬೇಕಾಯಿತು–ಪರಿಣಾಮವೆಂದರೆ ಜನರು ಸಾವಿರ-ಸಾವಿರ ಸಂಖ್ಯೆಗಳಲ್ಲಿ ಸಾಯಲಾರಂಭಿಸಿದರು. ಇಂತಹ ಹತಾಶೆಯ ಸಮಯದಲ್ಲಿ ಹಲವು ಜನರು ಸುಪ್ರೀಂ ಕೋರ್ಟ್ ಮತ್ತು ಹಲವು ಹೈಕೋರ್ಟ್‌ಗಳಿಗೆ ಸಹಾಯಕ್ಕೆ ಮೊರೆ ಹೋದರು– ಕೆಲವರು ಕೇವಲ ಐ.ಸಿ.ಯು. ನಲ್ಲಿ ಒಂದು ಹಾಸಿಗೆ ಕೇಳಿದರು, ಕೆಲವರು ಜೀವ ರಕ್ಷಕ ಔಷಧಿಗಳು ಸಾಮಾನ್ಯ ದರದಲ್ಲಿ ಸಿಗುವಂತಾಗಬೇಕು ಎಂದು ಕೇಳಿದರು. ಇನ್ನು ಕೆಲವರು ಸರ್ಕಾರದ ತಪ್ಪುಗಳನ್ನು ಸರಿಪಡಿಸಲು ಮಧ್ಯಪ್ರವೇಶಿಸುವಂತೆ ಕೇಳಿದರು.

ಎರಡನೆಯದಾಗಿ, ಹಿಂದೆಂದೂ ಕೇಳರಿಯದ ಇಂತಹ ಒಂದು ಅನಾಹುತಕ್ಕೆ ಹೈಕೋರ್ಟ್‌ಗಳೇ ಸುಪ್ರೀಂ ಕೋರ್ಟ್‌ಗಿಂತಲೂ ಹೆಚ್ಚು ಸಕ್ರಿಯವಾಗಿ ಸ್ಪಂದಿಸಿದವು ಎಂದು ಹೇಳದಿರಲು ಸಾಧ್ಯವಿಲ್ಲ. ಹೈಕೋರ್ಟ್‌ಗಳು ವ್ಯವಸ್ಥೆಯನ್ನು ಗಮನಿಸುತ್ತಿದ್ದವು ಮತ್ತು ಮುಂದೇನು ಎಂದೂ ನೋಡುತ್ತಿದ್ದವು. ಅವು ಕಾರ್ಯಾಂಗದಿಂದ ಹೊಣೆಗಾರಿಕೆ ಬಯಸುತ್ತಿದ್ದವು ಮತ್ತು ಹಾಗೆಯೇ ನರಳುತ್ತಿದ್ದ ಜನತೆಗೆ ತ್ವರಿತ ಪರಿಹಾರ ಸಿಗಬೇಕಾಗಿದೆ ಎಂದು ಬಯಸಿದವು. ಎಲ್ಲವೂ ಸುಸೂತ್ರವಾಗಿ ನಡೆಯಿತು ಎಂದೇನಿಲ್ಲ, ಆದರೂ ಒಟ್ಟಾರೆಯಾಗಿ ಈ ನಿಟ್ಟಿನಲ್ಲಿ ಪ್ರಯತ್ನ ನಡೆಯಿತು, ತೀವ್ರ ಘಾಸಿಗೊಂಡಿದ್ದ ಜನತೆಗೆ ಸ್ವಲವಾದರೂ ನೆರವು ನೀಡಿತು.

ಮೂರನೆಯದಾಗಿ, ಸುಪ್ರೀಂ ಕೋರ್ಟ್ ಸ್ಪಂದಿಸಲು ಸ್ವಲ್ಪ ಹಿಂಜರಿದಂತೆ, ವಿಳಂಬ ತೋರುವಂತೆ ಕಾಣಿಸಿತು. ಅದು ಎಪ್ರಿಲ್ 22, 2021 ರ ವೇಳೆಗಷ್ಟೇ ಕೋವಿಡ್ ಬಿಕ್ಕಟ್ಟಿನ ಕುರಿತ ವಿಚಾರಣೆಗಳನ್ನು ಕೈಗೆತ್ತಿಕೊಂಡಿತು; ಆಮ್ಲಜನಕ, ಅಗತ್ಯ ಔಷಧಿಗಳು, ಲಸಿಕೆ ಮತ್ತು ಲಾಕ್‌ಡೌನ್ ಘೋಷಿಸಲು ರಾಜ್ಯಗಳಿಗಿರುವ ಅಧಿಕಾರ, ಈ ನಾಲ್ಕು ವಿಷಯಗಳಲ್ಲಿ ಮಧ್ಯಪ್ರವೇಶವನ್ನು ಕೇಳಿತು. ಕಳೆದ ವರ್ಷದಲ್ಲಿ ಕೇಂದ್ರ ಸರ್ಕಾರವು ಒಂದು ರಾಷ್ಟ್ರೀಯ ಯೋಜನೆ ಈಗಾಗಲೇ ಜಾರಿಯಲ್ಲಿದೆ ಎಂದು ಹೇಳಿದ್ದ ಜಾರಿಕೆಯ ವಾದವನ್ನು ಒಪ್ಪಿದ್ದ ಸುಪ್ರೀಂ ಕೋರ್ಟ್ ತಾನೇ ಈಗ ಒಂದು "ರಾಷ್ಟ್ರೀಯ ಯೋಜನೆ"ಗೆ ಕರೆ ನೀಡಿದೆ. ಕಳೆದ ವರ್ಷದಲ್ಲಿ ಕೇಂದ್ರ ಸರ್ಕಾರವು ದೇಶದಲ್ಲಿ ಯಾವುದೇ ವಲಸೆ ಬಿಕ್ಕಟ್ಟು ಇಲ್ಲ ಎಂದು ಹೇಳಿದ್ದ ಸುಳ್ಳು ಹೇಳಿಕೆಗಳಿಗೆ ಪೂರಕವಾಗಿ ಸುಪ್ರೀಂ ಕೋರ್ಟ್ ವರ್ತಿಸಿತ್ತು ಮತ್ತು ನಂತರ ವಾಸ್ತವತೆಯು ವಿಶ್ವದೆಲ್ಲೆಡೆ ಪ್ರಚಾರಗೊಂಡಾಗಿನಿಂದ ಮಿತವಾಗಿ ಪ್ರತಿಕ್ರಿಯಿಸುತ್ತ ಬಂತು. ಕಳೆದ ಕೆಲವು ವಾರಗಳಿಂದ ಮಾತ್ರ – ಮುಖ್ಯ ನ್ಯಾಯಾಧೀಶರಾಗಿದ್ದ ಬೋಬ್ಡೆ ರವರ ನಿವೃತ್ತಿಯ ನಂತರ ಎಂದು ಕೆಲವರು ಹೇಳುತ್ತಿದ್ದಾರೆ– ಸುಪ್ರೀಂ ಕೋರ್ಟ್ ಭಾರತದ ಚರಿತ್ರೆಯ ಅತ್ಯಂತ ದುರಂತ ಅಧ್ಯಾಯಗಳಲ್ಲಿ ಒಂದು ಎಂದು ಹೇಳಬಹುದಾದ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಸ್ಪಷ್ಟ ಹಿಡಿತ ಹೊಂದಲು ಪ್ರಾರಂಭಿಸಿದೆ. ಆಕ್ಸಿಜನ್ ಪೂರೈಕೆ ಕುರಿತಂತೆ ಒಂದು 'ಕಾರ್ಯಪಡೆ' ರಚಿಸಬೇಕು, ಯಾವುದೇ ರೋಗಿಗೆ ಆಸ್ಪತ್ರೆಗಳಲ್ಲಿ ದಾಖಲಾತಿ ನಿರಾಕರಿಸಬಾರದು ಮತ್ತು ಉತ್ತರ ಪ್ರದೇಶದಲ್ಲಿದಂತೆ ಸಹಾಯ ಕೇಳುವವರಿಗೆ ಪೊಲೀಸರು ಅಥವಾ ಆಡಳಿತವು ಹಿಂಸಿಸಬಾರದು ದೂರು ದಾಖಲಿಸಬಾರದು ಎಂಬ ಹಲವು ಸೂಚನೆಗಳನ್ನು ಸುಪ್ರೀಂ ಕೋರ್ಟ್ ನೀಡಿದೆ.



ಈ ನಡುವೆ ಹಲವು ಹೈಕೋರ್ಟ್‌ಗಳು ಕಳೆದ ಕೆಲವು ತಿಂಗಳುಗಳಿಂದ ಮಾಡುತ್ತಿದ್ದಂತೆ ವಿವಿಧ ರಾಜ್ಯಗಳಲ್ಲಿ ರೂಪುಗೊಳ್ಳುತ್ತಿರುವ ಸರ್ಕಾರದ ನೀತಿಗಳನ್ನು ವೀಕ್ಷಿಸುತ್ತಿವೆ. ಕೇಂದ್ರ ಸರ್ಕಾರ ಮತ್ತು ಇತರ ಪ್ರಾಧಿಕಾರಿಗಳ ಕುರಿತಾಗಿಯೂ ಇವು ತಮ್ಮ ಅಭಿಪ್ರಾಯ ನೀಡುತ್ತಿವೆ. ಈ ಎಲ್ಲವುಗಳ ಸಾರಾಂಶ ಕೆಳಕಂಡಂತಿದೆ.



ಸುಪ್ರಿಂ ಕೋರ್ಟಿನಿಂದ ಆಕ್ಸಿಜನ್ ಪೂರೈಕೆ ಕುರಿತಂತೆ ಒಂದು 'ಕಾರ್ಯಪಡೆ' ರಚನೆ

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಗುಜರಾತ್:

ನ್ಯಾಯಾಲಯದ ಮಧ್ಯಪ್ರವೇಶದ ಆರಂಭದ ನಿದರ್ಶನವಾಗಿ ಎಪ್ರಿಲ್ 11 ರಂದು ಗುಜರಾತ್ ಹೈಕೋರ್ಟ್ ಗುಜರಾತ್ ರಾಜ್ಯದ "ಹೌಹಾರುವಂತೆ ಮಾಡುವ ಕತೆಗಳು, ದುರದೃಷ್ಟಕರ ಹಾಗೂ ಊಹಾತೀತ ಕಷ್ಟಗಳು, ಮೂಲಭೂತ ಸೌಕರ್ಯಗಳ ಉಹಾತೀತ ಕೆಟ್ಟ ಸ್ಥಿತಿ, ಪರೀಕ್ಷೆ, ಹಾಸಿಗೆ, ಐಸಿಯು ಗಳ ನಿಭಾಯಿಸಲಾಗದ ಕೊರತೆಯಷ್ಟೇ ಅಲ್ಲದೇ ಆಕ್ಸಿಜನ್ ಪೂರೈಕೆ ಅಗತ್ಯ, ಔಷಧಿಗಳಾದ ರೆಮೆಡಿಸಿವರ್ ಇತ್ಯಾದಿಗಳ ಕೊರತೆ" ಎಲ್ಲದರ ಬಗ್ಗೆ ಟಿಪ್ಪಣಿ ಮಾಡಿತ್ತು. ಇದಕ್ಕೆ ಮುನ್ನ ಕೊರೊನಾ ವೈರಸ್ ಪ್ರಸರಣೆ ಮುರಿಯಲು ಅದು ರಾಜ್ಯ ಸರ್ಕಾರಕ್ಕೆ ಲಾಕ್‌ಡೌನ್ ಘೋಷಿಸುವ ಬಗ್ಗೆ ಗಮನಹರಿಸಲು ಹೇಳಿತ್ತು

ಕೋವಿಡ್ ಬಿಕ್ಕಟ್ಟಿಗೆ ಸರ್ಕಾರದ ಸ್ಪಂದನೆ ಕುರಿತ ನ್ಯಾಯಾಲಯದ ನಿಗಾವನ್ನು ಮುಂದುವರೆಸುತ್ತಾ, ನ್ಯಾಯಮೂರ್ತಿ ಕಾರಿಯ, "ರಾಜ್ಯದ ಅಫಿಡವಿಟ್ ವಾಸ್ತವದ ಸ್ಥಿತಿಗೆ ಸಂಬಂಧಪಟ್ಟ ಒಂದು ಸುಂದರವೆನಿಸುವ ಚಿತ್ರಣ ನೀಡುತ್ತಿದೆ. ಅದು ನೆಲಮಟ್ಟದ ವಾಸ್ತವತೆಯನ್ನು ಮುಟ್ಟುವುದಿಲ್ಲ. ನಾವು ದಂತದ ಗೋಪುರಗಳ ಮೇಲೆ ಕೂರುವ ಹಾಗಿಲ್ಲ. ವೈರಸ್ ಕೊಂಡಿ ಮುರಿಯಲು ಸರ್ಕಾರ ಕ್ರಮ ತೆಗೆದುಕೊಳ್ಳಲೇಬೇಕು" ಎಂದು ಎಪ್ರಿಲ್ 27 ರಂದು ಹೇಳಿದರು.

ಮುಖ್ಯ ನ್ಯಾಯಧೀಶರಾದ ವಿಕ್ರಮ್ ನಾಥ್ ರವರು, "ಯಾವುದೇ ರೋಗಿಯೂ ಸಹ ಚಿಕಿತ್ಸೆಯಿಂದ ವಂಚಿತರಾಗುವುದಿಲ್ಲ ಎಂಬ ಭರವಸೆಯನ್ನು ರಾಜ್ಯ ಸರ್ಕಾರ ನೀಡಲೇಬೇಕು........", ಎಂದು ಹೇಳಿದರು.

ಮದ್ರಾಸ್:

ಏಪ್ರಿಲ್ 26 ರಂದು ಮದ್ರಾಸ್ ಹೈಕೋರ್ಟ್, ತಮಿಳುನಾಡು ಅಸೆಂಬ್ಲಿ ಚುನಾವಣಾ ಪೂರ್ವದಲ್ಲಿ ಅಗತ್ಯ ಮುನ್ನೆಚರಿಕೆ ಕ್ರಮಗಳಾದ ಮಾಸ್ಕ್‌ಗಳು, ಭೌತಿಕ ಅಂತರ ಮತ್ತು ಸ್ಯಾನಿಟೈಸರ್‌ಗಳನ್ನು ಚುನಾವಣಾ ರ‍್ಯಾಲಿಗಳಲ್ಲಿ ಇರುವಂತೆ ನೋಡಿಕೊಳ್ಳಲಿಲ್ಲ ಎಂದು ಭಾರತದ ಚುನಾವಣಾ ಆಯೋಗವನ್ನು ತೀವ್ರವಾಗಿ ಟೀಕಿಸಿತು. "ಚುನಾವಣಾ ಆಯೋಗವೇ ಕೋವಿಡ್-19 ರ ಎರಡನೇ ಅಲೆಗೆ ಏಕೈಕ ಕಾರಣ" ಎಂದು ಹೇಳಿದ ಹೈಕೋರ್ಟ್, 'ಚುನಾವಣಾ

ಪುಟ 10 ಕ್ಕೆ

ಸರ್ಕಾರ ಕತ್ತಲಲ್ಲಿ ತಡಕಾಡುತ್ತಿರುವಾಗ ನ್ಯಾಯಾಲಯಗಳು ನೆರವು ನೀಡುತ್ತಿವೆ

ಪುಟ 9 ರಿಂದ

ಅಧಿಕಾರಿಗಳ ಮೇಲೆ ಪ್ರಾಯಶಃ ಕೊಲೆ ಆಪಾದನೆ ಹೊರಿಸಬೇಕಾಗುತ್ತದೆ" ಎಂದು ಹೇಳಿತು. ಸುಪ್ರೀಂ ಕೋರ್ಟ್‌ಗೆ ಧಾವಿಸಿದ ಚುನಾವಣಾ ಆಯೋಗವು ಈ ಹೇಳಿಕೆಗಳನ್ನು ತೆಗೆದುಹಾಕಬೇಕು ಎಂದು ಕೇಳಿದ್ದಷ್ಟೇ ಅಲ್ಲದೆ ಕೋರ್ಟ್‌ಗಳು ನೀಡುವ ಮೌಖಿಕ ಹೇಳಿಕೆಗಳನ್ನು ವರದಿ ಮಾಡದಂತೆ ಮಾಧ್ಯಮಗಳಿಗೆ ನಿರ್ಬಂಧ ಹೇರಬೇಕು ಎಂದೂ ಸಹ ಕೇಳಿತು. ಆದರೆ ಈ ಮನವಿಗಳನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್, ಮದ್ರಾಸ್ ಹೈಕೋರ್ಟ್‌ನ ಹೇಳಿಕೆಗಳು 'ಕಟು'ವಾಗಿದ್ದರೂ, ಅವು ಎಚ್ಚರಿಕೆಯ ಗಂಟೆಗಳಾಗಿವೆ ಎಂದು ಹೇಳಿತು. ಚುನಾವಣಾ ಆಯೋಗವು ಇತ್ತೀಚೆಗೆ ನಡೆದ ನಾಲ್ಕು ರಾಜ್ಯ ವಿಧಾನಸಭೆ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆಗಳನ್ನು ನಡೆಸಿದ ವಿಧಾನಗಳು, ವೇಳಾಪಟ್ಟಿಗಳೂ ಒಳಗೊಂಡಂತೆ, ತೀವ್ರ ಟೀಕೆಗೊಳಗಾಗಿದೆ ಎನ್ನುವುದನ್ನು ನೆನಪಿಸಿಕೊಳ್ಳಬಹುದು. ಹಲವು ಜಾಗಗಳಲ್ಲಿ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಎದ್ದು ಕಾಣುವಂತೆ ಉಲ್ಲಂಘಿಸಲಾಯಿತು. ಪ್ರಮುಖವಾಗಿ ಅಸಾನ್ಸೋಲ್‌ನಲ್ಲಿ ಸ್ವತಃ ಪ್ರಧಾನ ಮಂತ್ರಿಗಳೇ ತಮ್ಮ ಚುನಾವಣಾ ರ‍್ಯಾಲಿಗೆ ಬೃಹತ್ ಸಂಖ್ಯೆಯಲ್ಲಿ ಜನಸ್ತೋಮ ಬಂದಿದೆ ಎಂದು ಶ್ಲಾಘಿಸಿದರು.

ಕೆಲವು ದಿನಗಳ ನಂತರ, ಏಪ್ರಿಲ್ 30 ರಂದು ಒಂದು ಸ್ವಯಂಪ್ರೇರಣೆಯ ಅರ್ಜಿಯನ್ನು, ಕೈಗೆತ್ತಿಕೊಂಡ ಮದ್ರಾಸ್ ಹೈಕೋರ್ಟ್, ಉಲ್ಬಣಗೊಂಡ ಸಾಂಕ್ರಾಮಿಕಕ್ಕೆ ಮೋದಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು ಮತ್ತು "ನೀವು ಕಳೆದ 10–15 ತಿಂಗಳುಗಳಿಂದ ಏನು ಮಾಡುತ್ತಿದ್ದೀರಿ?" ಎಂದು ಪ್ರಶ್ನಿಸಿತು.

ಮುಂದುವರೆದು "ಒಂದು ಸಾಂಕ್ರಾಮಿಕವನ್ನು ಎದುರಿಸುವಾಗ ತಾತ್ಕಾಲಿಕತೆ ಎಂಬುದು ಇರಬಾರದು ಕೇಂದ್ರವು ತಜ್ಞರ ಸಲಹೆ ಪಡೆದು ಒಂದು ಯೋಜನಾಬದ್ಧ ವಿಧಾನದಲ್ಲಿ ವರ್ತಿಸಬೇಕಿತ್ತು... ... ಸುಮಾರು ಒಂದು ವರ್ಷದ ಲಾಕ್‌ಡೌನ್ ನಂತರವೂ ನಾವು ಈಗಿರುವ ಪರಿಸ್ಥಿತಿಯನ್ನು ನೋಡಿ.. .." ಎಂದು ಅದು ಹೇಳಿತು.

ಅಲಹಾಬಾದ್:

ಉತ್ತರ ಪ್ರದೇಶ ರಾಜ್ಯದಲ್ಲಿ ಕೋವಿಡ್–19 ಕೇಸ್‌ಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಕ್ನೋ, ಕಾನ್ಪುರ್, ವಾರಣಾಸಿ, ಅಲಹಬಾದ್ ಮತ್ತು ಗೋರಖ್‌ಪುರ್ ನಗರಗಳಲ್ಲಿ ಲಾಕ್‌ಡೌನ್ ವಿಧಿಸುವಂತೆ ಅಲಹಾಬಾದ್ ಹೈಕೋರ್ಟ್ ಏಪ್ರಿಲ್ 19 ರಂದು ಬಿಜೆಪಿ ನೇತೃತ್ವದ ಉತ್ತರ ಪ್ರದೇಶ ಸರ್ಕಾರಕ್ಕೆ ಹೇಳಿತು. "ಅಗತ್ಯವಿದ್ದ ಔಷಧೀಯ ನೆರವಿನ ಕೊರತೆಯಿಂದ ಬೃಹತ್ ಪ್ರಮಾಣದಲ್ಲಿ ಈ ಸಾಂಕ್ರಾಮಿಕಕ್ಕೆ ಜನರು ಬಲಿಯಾಗಿ ಮಡಿದರೆ, ಒಂದು ಸುದೀರ್ಘ ವರ್ಷದ ಅನುಭವ ಮತ್ತು ತಿಳುವಳಿಕೆಯ ಹೊರತಾಗಿಯೂ ಈ ಸಾಂಕ್ರಾಮಿಕ ಎದುರಿಸಲು ವಿಫಲವಾದ ಸರ್ಕಾರಗಳೇ ಇದಕ್ಕೆ ಹೊಣೆಯಾಗುತ್ತವೆ" ಎಂದು ಹರಿತವಾಗಿ ಸರ್ಕಾರವನ್ನು ಟೀಕಿಸಿತು.

ರಾಜ್ಯದಲ್ಲಿ ನಡೆಯುತ್ತಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕ್ರಿಯೆಗಳನ್ನು ಉಲ್ಲೇಖಿಸುತ್ತಾ, ನ್ಯಾಯಾಲಯವು "ನಮ್ಮ ಬಳಿ ಚುನಾವಣೆಗಳನ್ನು ನಡೆಸಲು ಹಣ ಇದೆ, ಆದರೆ ಸಾರ್ವಜನಿಕ ಆರೋಗ್ಯಕ್ಕೆ ಬಳಸಲು ಹಣವಿಲ್ಲ ಎಂದು ಎಲ್ಲರೂ ನಮ್ಮನ್ನು ನೋಡಿ ಗೇಲಿ ಮಾಡುತ್ತಾರೆ" ಎಂದು ಉದ್ವೇಗದಿಂದ ಹೇಳಿತು.

ಮುಂದುವರೆದು, "ಎರಡನೇ ಅಲೆಯ ಪ್ರಮಾಣದ ಅರಿವಿದ್ದರೂ ಸರ್ಕಾರವು ಮೊದಲೇ ಯೋಜನೆ ಮಾಡದಿರುವುದು ನಾಚಿಕೆಗೇಡು" ಎಂದೂ ಹೇಳಿತು.

ಮರುದಿನ, ಉತ್ತರ ಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿ ಈ ಆದೇಶದ ವಿರುದ್ಧ ತಡೆಯಾಜ್ಞೆ ಕೋರಿತು. ಮುಖ್ಯ ನ್ಯಾಯಾಧೀಶರಾದ ಬೋಬ್ಡೆ ನೇತೃತ್ವದ ಪೀಠ ಈ ಮನವಿಯನ್ನು ಪುರಸ್ಕರಿಸಿತು.

ಸ್ಥಳೀಯ ಸಂಸ್ಥೆಗಳ ಚುನಾವಣಾ ಕೆಲಸಗಳಲ್ಲಿ ಪಾಲ್ಗೊಂಡಿದ್ದ ಶಾಲಾ ಶಿಕ್ಷಕರಲ್ಲಿ 135 ಶಿಕ್ಷಕರು ಕೋವಿಡ್‌ನಿಂದಾಗಿ ಜೀವ ತೆತ್ತರು ಎಂದು ಮಾಧ್ಯಮಗಳಲ್ಲಿ ವರದಿಯಾದುದರ ಆಧಾರದ ಮೇಲೆ ಅಲಹಾಬಾದ್ ಹೈಕೋರ್ಟ್ ಏಪ್ರಿಲ್ 27 ರಂದು ರಾಜ್ಯ ಚುನಾವಣಾ ಆಯೋಗಕ್ಕೆ ನೋಟೀಸು ಕಳಿಸಿತು. ನಾಲ್ಕು ಹಂತದ ಈ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗುವ ವೇಳೆಗೆ ಸಾವಿಗೀಡಾದ ಶಿಕ್ಷಕರ ಸಂಖ್ಯೆ 800 ಮೀರಿತು ಎಂದು ನಂತರ ಶಿಕ್ಷಕರ ಸಂಘಟನೆ ಆರೋಪಿಸಿತು.

ಕೇರಳ:

ಕೇರಳ ರಾಜ್ಯ ಸರ್ಕಾರವು ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ವೆಚ್ಚಕ್ಕೆ ಮಿತಿ ಇಡುವಂತೆ ನೀಡಿದ ಆದೇಶವನ್ನು ಕೇರಳ ಹೈಕೋರ್ಟ್ ಮೇ 10 ರಂದು 'ಅದ್ಭುತ' ಎಂದು ಶ್ಲಾಘಿಸಿತು. ಕೇರಳದಲ್ಲಿ ಖಾಸಗಿ ಆಸ್ಪತ್ರೆಗಳು ದುಬಾರಿ ದರ ವಿಧಿಸುತ್ತಿವೆ ಎಂದು ದೂರಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಅನುಸರಿಸಿ ಇದು ಬಂದಿತ್ತು. ಖಾಸಗಿ ಆಸ್ಪತ್ರೆಗಳ ಹಾಸಿಗೆಗಳನ್ನು ವಹಿಸಿಕೊಳ್ಳಬೇಕು ಎಂಬ ಹೈಕೋರ್ಟಿನ ಸೂಚನೆಯನ್ನು ಅನುಸರಿಸಿ ಎಲ್.ಡಿ.ಎಫ್. ಸರ್ಕಾರವು ಪಟ್ಟಿಯಲ್ಲಿ ಇಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಸಹ ಶೇ. 50 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲು ಇಟ್ಟಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಈಗಾಗಲೇ ಶೇ. 50 ಹಾಸಿಗೆಗಳನ್ನು ಮೀಸಲಿಡಲಾಗಿದೆ.

ಉತ್ತರಾಖಂಡ:

ಏಪ್ರಿಲ್ 29 ರಂದು ಎಷ್ಟು ಸಾಧ್ಯವೋ ಅಷ್ಟು ಜನರ ಜೀವ ಉಳಿಸುವ ಸಲುವಾಗಿ ಔಷಧಿಗಳ ಲಭ್ಯತೆ ಮತ್ತಿತರ ಅಂಶಗಳ ಕುರಿತು ಹಲವು ಸೂಚನೆಗಳನ್ನು ನೀಡಿದ್ದ ಉತ್ತರಾಖಂಡ್ ಹೈಕೋರ್ಟ್, ಮೇ 10 ರಂದು, "ಜನವರಿ 2021 ರಲ್ಲಿ ವಿಜ್ಞಾನಿ ಸಮುದಾಯವು ಕೋವಿಡ್–19 ರ ಎರಡನೇ ಅಲೆಯ ಬಗ್ಗೆ ಎಚ್ಚರಿಕೆಯನ್ನು ನೀಡಿದ್ದರೂ, ರಾಜ್ಯ ಸರ್ಕಾರವು ಇದಕ್ಕೆ ಲಕ್ಷ್ಯ ಕೊಡಲಿಲ್ಲ" ಎಂದು ರಾಜ್ಯ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು. ಮುಂದುವರೆದು, "ದುರದೃಷ್ಟವಶಾತ್, ಆದ ಕೆಲವು ಪ್ರಮಾದಗಳಿಂದಾಗಿ, ತೋರಿದ ಕೆಲವು ನಿರ್ಲಕ್ಷ್ಯದಿಂದಾಗಿ ಕೋವಿಡ್–19 ಸಾಂಕ್ರಾಮಿಕವು ರಾಜ್ಯ ಮತ್ತು ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಹರಡುವಂತಾಯಿತು" ಎಂದು ಅದು ಹೇಳಿತು.

ರಾಜ್ಯ ಸರ್ಕಾರವು ತನ್ನ ಅಫಿಡವಿಟ್‌ನಲ್ಲಿ ಆಸ್ಪತ್ರೆಯ ಹಾಸಿಗೆಗಳು, ಆಕ್ಸಿಜನ್ ಪೂರೈಕೆ ಮತ್ತು ಔಷಧ ಲಭ್ಯತೆಗಳ ಬಗ್ಗೆ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶಗಳನ್ನು "ಬಹಳ ಬುದ್ಧಿವಂತಿಕೆ"ಯಿಂದ ಮೊಟಕುಗೊಳಿಸಲು ಪ್ರಯತ್ನಿಸಿತು ಎಂದು ಕೋರ್ಟ್ ಟಿಪ್ಪಣಿ ಮಾಡಿತು.

ಪಾಟ್ನಾ:

ಪಾಟ್ನಾ ಹೈಕೋರ್ಟ್ ರಚಿಸಿದ್ದ ಮೂರು ಸದಸ್ಯರ ಸಮಿತಿಯು ಪಾಟ್ನಾದ ಮೂರು ದೊಡ್ಡ ಆಸ್ಪತ್ರೆಗಳಲ್ಲಿ 1000 ಹಾಸಿಗೆಗಳು ಆಕ್ಸಿಜನ್ ಪೂರೈಕೆ ಇಲ್ಲದಿರುವುದರಿಂದಾಗಿ ಖಾಲಿ ಇವೆ ಎಂದು ವರದಿ ನೀಡಿದ ನಂತರ ಏಪ್ರಿಲ್ 29 ರಂದು ರಾಜ್ಯ ಸರ್ಕಾರದ ಕಾರ್ಯಯೋಜನೆ "ತಪ್ಪು" ಎಂದು ಹೇಳಿತು ಮತ್ತು ಆಕ್ಸಿಜನ್ ಕೊರತೆ ಕುರಿತಂತೆ ತಿಳಿಸಲು ಒಂದು ಜನಗಳಿಗೆ ಒಂದು ಇ–ಮೇಲ್ ಗುರುತು ನೀಡಿತು. ಮೇಲ್ಕಾಣಿಸಿದ ಸಮಿತಿಯು ಆರೋಗ್ಯ ಸಹಾಯಕರ ಕೊರತೆಯೂ ಬಿಹಾರ ರಾಜ್ಯದಲ್ಲಿದೆ ಎಂದು ತಿಳಿಸಿತ್ತು. ಸಿಎಜಿ ವರದಿಯೊಂದರಲ್ಲೂ ಪ್ರಸ್ತಾಪಿಸಿದ್ದಂತೆ, ಆರೋಗ್ಯ ಸಿಬ್ಬಂದಿಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಕೋರ್ಟ್ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ದೆಹಲಿ:

ಹಲವಾರು ವಾರಗಳಿಂದ ದೆಹಲಿಯಲ್ಲಿನ ಸ್ಫೋಟಕ ಮತ್ತು ದಯನೀಯ ಕೋವಿಡ್ ಪರಿಸ್ಥಿತಿ ಕುರಿತಂತೆ ದೆಹಲಿ ಹೈಕೋರ್ಟ್ ದೂರುಗಳನ್ನು ಕೇಳುತ್ತಲೇ ಇದೆ. ಏಪ್ರಿಲ್ 24 ರಂದು ಈ ಸಾಂಕ್ರಾಮಿಕವನ್ನು "ಸುನಾಮಿ" ಎಂದು ಹೇಳಿದ ಹೈಕೋರ್ಟ್ ಮುಂಬರುವ ಶಿಖರ ಸ್ಥಿತಿಯನ್ನು ಎದುರಿಸಲು ಮೂಲಭೂತ ಸೌಕರ್ಯಗಳು, ಆಸ್ಪತ್ರೆಗಳು ವೈದ್ಯಕೀಯ ಸಿಬ್ಬಂದಿ, ಔಷಧಿಗಳು, ಲಸಿಕೆಗಳು ಮತ್ತು ಆಕ್ಸಿಜನ್ ಕುರಿತಂತೆ ಆ ದಿನಕ್ಕೆ ಆಗಿರುವ ಸಿದ್ಧತೆಗಳ ಬಗ್ಗೆ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತು. ಆಸ್ಪತ್ರೆಗಳಿಗೆ ಆಕ್ಸಿಜನ್ ಪೂರೈಸಲು ಯಾರೇ ಅಡ್ಡಿ ಮಾಡಿದರೂ ಅವರನ್ನು ನೇಣಿಗೇರಿಸುತ್ತೇವೆ ಎಂದು ಕೋರ್ಟ್ ಎಚ್ಚರಿಸಿತು. ಅಂತೆಯೇ ದೆಹಲಿ ಸರ್ಕಾರವೂ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿರಬೇಕು ಎಂದಿತು. ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಏಕೆ ಅವು ಕೇಳಿದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ದ್ರವ ಆಕ್ಸಿಜನ್ ನೀಡಲಾಯಿತು, ಆದರೆ ದೆಹಲಿಗೆ ಅಗತ್ಯವಿದ್ದ ಪ್ರಮಾಣಕ್ಕಿಂತ ಅತೀ ಕಡಿಮೆ ಪೂರೈಕೆ ಏಕೆ ಆಯಿತು ಎಂದು ಕೋರ್ಟ್ ಏಪ್ರಿಲ್ 27 ರಂದು ಪ್ರಶ್ನೆ ಮಾಡಿತು.

ಬಾಂಬೆ:

ಕೋವಿಡ್–19 ಕ್ಕೆ ಸಿಲುಕಿ ಮೃತರಾದವರ ಅಂತ್ಯಕ್ರಿಯೆ ನಡೆಸಲು ಇರುವ ತೊಡಕಿನ ದಾಖಲಾತಿ ಪ್ರಕ್ರಿಯೆಗಳು, ವೈರಾಣು ನಿಯಂತ್ರಣ ಔಷಧಿಯ ವ್ಯಾಪಕ ಕಾಳಸಂತೆ ವ್ಯಾಪಾರ, ರೆಮಿಡಿಸಿವರ್, ಆಕ್ಸಿಜನ್ ಪೂರೈಕೆ ಇತ್ಯಾದಿ ವಿಷಯಗಳ ಕುರಿತಂತೆ ಬಂದಿದ್ದ ಅಂಶಗಳನ್ನು ಕೈಗೆತ್ತಿಕೊಂಡ ಬಾಂಬೆ ಹೈಕೋರ್ಟ್‌ನ ಮೂರು ಪೀಠಗಳು ಮುಂಬೈ, ಔರಂಗಬಾದ್ ಮತ್ತು ನಾಗ್ಪುರ್ ನಲ್ಲಿ ಇರುವ ಮಹಾರಾಷ್ಟ್ರದ ಕೋವಿಡ್ ಪಿಡುಗಿನ ನಿರ್ವಹಣೆ ಕುರಿತಂತೆ ಸೂಚನೆಗಳನ್ನು ನೀಡಿದವು.

ಕಲ್ಕತ್ತಾ:

ಪ. ಬಂಗಾಳ ಸುದೀರ್ಘ ಅವಧಿಯ 8 ಹಂತಗಳ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳುವಂತೆ ಕಲ್ಕತ್ತಾ ಹೈಕೋರ್ಟ್ ಏಪ್ರಿಲ್ 20 ರಿಂದ ಹಲವು ದಿನಗಳು ನಿರಂತರ ಆದೇಶಗಳನ್ನು ಭಾರತ ಚುನಾವಣಾ ಆಯೋಗ ಮತ್ತು ರಾಜ್ಯ ಹಾಗೂ ಜಿಲ್ಲಾ ಸರ್ಕಾರಿ ಅಧಿಕಾರಿಗಳಿಗೆ ನೀಡಿತು.

ಏಪ್ರಿಲ್ 22 ರಂದು ಅದು ಚುನಾವಣಾ ಅಧಿಕಾರಿಗಳನ್ನು ಕೇವಲ ಸುತ್ತೋಲೆ ಹೊರಡಿಸಿ ಅದರ ಜಾರಿಯನ್ನು ನೋಡಿಕೊಳ್ಳುತ್ತಿಲ್ಲ ಎಂದು ಟೀಕಿಸಿತು.

ತೃಣಮೂಲ ಕಾಂಗ್ರೆಸ್ ನೇತೃತ್ವದ ನೂತನ ಸರ್ಕಾರ ರಚನೆಯಾದ ನಂತರ, ಮೇ 10 ರಂದು ರಾಜ್ಯ ಸರ್ಕಾರಕ್ಕೆ ಈಗಿರುವ ಪರಿಸ್ಥಿತಿ ಮತ್ತು ಸೌಲಭ್ಯಗಳು, ಔಷಧಿಗಳು, ಮೂಲಭೂತ ಸೌಕರ್ಯಗಳು ಮತ್ತು ಲಸಿಕೆ ಯೋಜನೆ ಕುರಿತಂತೆ ವಿವರವಾದ ವರದಿ ನೀಡಲು ಹೇಳಿದೆ.

ಮಧ್ಯಪ್ರದೇಶ:

ಏಪ್ರಿಲ್ 20 ರಂದು ಮಧ್ಯಪ್ರದೇಶ ಹೈಕೋರ್ಟ್ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಸೂಚನೆಗಳ ಪಟ್ಟಿ ನೀಡಿ ನಾಗರಿಕರಿಗೆ ಜೀವ ರಕ್ಷಕ ಔಷಧಿಗಳು ಮತ್ತು ವೈದ್ಯಕೀಯ ಆಕ್ಸಿಜನ್ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಹೇಳಿತು. ಹಾಗೆಯೇ ರೆಮಿಡಿಸಿವಿರ್ ನ ಉತ್ಪಾದನೆ ಜಾಸ್ತಿ ಮಾಡುವಂತೆ ಅಥವಾ ಅದನ್ನು ಆಮದು ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿತು.

ರಾಜ್ಯ ಸರ್ಕಾರಕ್ಕೆ ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸುವಂತೆ ಕೋರ್ಟ್ ಸೂಚಿಸಿತು ಮತ್ತು ಪರೀಕ್ಷೆ ವರದಿಗಳು "ಸ್ಯಾಂಪಲ್ ಪಡೆದ 36 ಘಂಟೆಗಳೊಳಗೆ ವರದಿ ನೀಡುವಂತೆ" ನೋಡಿಕೊಳ್ಳಬೇಕು ಎಂದಿತು. ರಾಜ್ಯದಲ್ಲಿ ಉಲ್ಬಣಗೊಂಡ ಸಾಂಕ್ರಾಮಿಕಕ್ಕೆ ಸಂಬಂಧಿಸಿದ ಔಷಧಿಗಳ ಕೊರತೆ, ಕಾಳಸಂತೆ ಮಾರಾಟ ಮತ್ತಿತರ ವಿಷಯಗಳ ಕುರಿತು ಹಾಕಿದ ಐದು ಅರ್ಜಿಗಳ ಆಧಾರದಲ್ಲಿ ಈ ಸೂಚನೆಗಳನ್ನು ನೀಡಲಾಗಿತ್ತು. ಜೈಲುಗಳಲ್ಲಿ ತುಂಬಿ ತುಳುಕುತ್ತಿದ್ದ ಕೈದಿಗಳಿಂದಾಗಿ ಕೋವಿಡ್ ಪ್ರಸರಣ ಹೆಚ್ಚುವ ಅಪಾಯದ ಹಿನ್ನೆಲೆಯಲ್ಲಿ, ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ನಿರ್ದೇಶನಗಳ ಆಧಾರದಲ್ಲಿ, ರಾಜ್ಯ ಜೈಲುಗಳಲ್ಲಿ ಈ ಸ್ಥಿತಿಯನ್ನು ನಿವಾರಿಸಬೇಕು ಎಂದು ಹೈಕೋರ್ಟ್ ಮೇ 11 ರಂದು ಆದೇಶಿಸಿತು.



ಚುನಾವಣ ಆಯೋಗ–ಮದ್ರಾಸ್ ಹೈಕೋರ್ಟಿನಿಂದಲೂ ತರಾಟೆ–ಸುಪ್ರಿಂ ಕೋರ್ಟಿನಿಂದಲೂ ಟಿಪ್ಪಣಿ
ವ್ಯಂಗ್ಯಚಿತ್ರ: ಆರ್. ಪ್ರಸಾದ್

ರಾಜಸ್ಥಾನ:

ವಕೀಲರ ಸಂಘವು ಕೋವಿಡ್ ರೋಗಿಗಳು ಮತ್ತು ಸೌಕರ್ಯಗಳ ಕೊರತೆಯ ಬಗ್ಗೆ ಸಲ್ಲಿಸಿದ ಪತ್ರವನ್ನು ಕೈಗೆತ್ತಿಕೊಂಡ ರಾಜಸ್ಥಾನ ಹೈಕೋರ್ಟ್ ಪ್ರಮುಖ ವಕೀಲರ ಒಂದು ರಾಜ್ಯ ಮಟ್ಟದ ಮತ್ತು ಹಲವು ಜಿಲ್ಲಾ ಮಟ್ಟದ ಸಮಿತಿಗಳನ್ನು ಈ ಕೂಡಲೇ ರಚಿಸಿ ಜನಸಾಮಾನ್ಯರ ಕಷ್ಟಗಳನ್ನು ನಿವಾರಿಸುವಂತೆ ಏಪ್ರಿಲ್ 30 ರಂದು ಆದೇಶಿಸಿತು. ಈ ಎಲ್ಲಾ ಸಮಿತಿಗಳು ಹಗಲು–ರಾತ್ರಿ ಕೆಲಸ ಮಾಡುವ ಸೇವಾಕೇಂದ್ರ ಸ್ಥಾಪಿಸಬೇಕು ಮತ್ತು ಅರಿವು ಮಂಡಿಸುವ ಕ್ರಮ ಕೈಗೊಳ್ಳಬೇಕು ಎಂದು ಹೇಳಿತು.

ತೆಲಂಗಾಣ:

ಗ್ರೇಟರ್ ವಾರಂಗಲ್ ಮತ್ತು ಖಮ್ಮಮ್ ನ ಮುನಿಸಿಪಲ್ ಕಾರ್ಪೋರೇಷನ್‌ಗಳು ಮತ್ತು ಐದು ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸಿದ್ದಕ್ಕೆ ತೆಲಂಗಾಣ ಹೈಕೋರ್ಟ್ ರಾಜ್ಯ ಚುನಾವಣಾ ಆಯೋಗವನ್ನು ಒಂದು ಪ್ರಸಿದ್ಧ ಕವನವಾದ "Charge of the Light Brigade" ಅನ್ನು ಉಲ್ಲೇಖಿಸಿ ಕಟುವಾಗಿ ಟೀಕಿಸಿತು. ಈ ಸಮಯದಲ್ಲಿ ಚುನಾವಣೆ ನಡೆಸುವುದು ಎಂದರೆ ಜನರನ್ನು (ಮತ್ತು ಚುನಾವಣಾ ಕರ್ತವ್ಯದಲ್ಲಿ ಇರುವ ನೌಕರರನ್ನು) "ಸಾವಿನ ದವಡೆಗೆ ನೂಕಿದಂತೆ" ಎಂದು ಟೆನಿಸನ್ ನ ಕವನದಲ್ಲಿ ವರ್ಣಿಸಿದ್ದನ್ನು ಕೋರ್ಟ್ ಹೇಳಿತು.

ರಾಜ್ಯ ಚುನಾವಣಾ ಆಯುಕ್ತರು ಚುನಾವಣೆಗಳು ಕೆಲವೇ ಕೆಲವು ಪ್ರದೇಶಗಳಲ್ಲಿ ಮಾತ್ರ ನಡೆಯುತ್ತಿವೆ ಎಂದು ವಾದಿಸಲು ಹೋದಾಗ ಕೋರ್ಟ್ "ಇಡೀ ವಿಶ್ವ–ಕೇವಲ ದೇಶ ಮತ್ತು ರಾಜ್ಯವಲ್ಲ ಫೆಬ್ರವರಿ 2021 ರಿಂದ ಒಂದು ಸಮರ ರೀತಿಯ ಪರಿಸ್ಥಿತಿ ನಡೆಯುತ್ತಿದೆ ಎಂದು ತಿಳಿದಿದೆ. ರಾಜ್ಯ ಚುನಾವಣಾ ಆಯೋಗವು ಈ ಗ್ರಹಕ್ಕೆ ಸೇರಿಲ್ಲವೇ? ನೀವೇನಾದರೂ ಮಂಗಳ ಗ್ರಹದಲ್ಲಿದ್ದೀರಾ?" ಎಂದು ಟಿಪ್ಪಣಿ ಮಾಡಿತು.

ಕರ್ನಾಟಕ:

ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ ಮತ್ತು ಔಷಧಿಗಳ ಕಾಳಸಂತೆ ಮಾರಾಟಗಳ ಕುರಿತು ಬಂದ ಪತ್ರಕ್ಕೆ ಸ್ಪಂದಿಸುತ್ತಾ ಏಪ್ರಿಲ್ 28 ರಂದು ಕರ್ನಾಟಕ ಹೈಕೋರ್ಟ್, ಪರಿಸ್ಥಿತಿ "ದಿಗಿಲು ಹುಟ್ಟಿಸುವಂತಿದೆ" ಎಂದಿತು ಮತ್ತು ಮುನಿಸಿಪಲ್ ಅಧಿಕಾರಿಗಳನ್ನು ಟೀಕಿಸಿತು. ಹಾಗೆಯೇ ವಿಶೇಷ ಚೇತನರಿಗೆ ಆದ್ಯತೆ ಆಧಾರದಲ್ಲಿ ಲಸಿಕೆ ನೀಡಬೇಕು ಎಂದು ಆದೇಶಿಸಿತು.

ಈ ಸಾಂಕ್ರಾಮಿಕವು ಭಾರತವನ್ನು ಈಗಲೂ ಹಾಳುಗೆಡವುತ್ತಿದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹರಡುತ್ತಿರುವಂತೆ ಕಾಣುತ್ತಿದೆ. ಇವು ಸಾಮಾನ್ಯವಾಗಿ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಕಾಣುವುದಿಲ್ಲ. ಬೇಸರದ ಸಂಗತಿಯೆಂದರೆ, ಕೇಂದ್ರ ಸರ್ಕಾರವು ಒಂದು ತ್ವರಿತವಾದ ಮತ್ತು ಸಮಗ್ರ ಸ್ಪಂದನೆಯನ್ನು ವಿಕಾಸಗೊಳಿಸಲು ಇನ್ನೂ ತಡಕಾಡುತ್ತಿದೆ ಮತ್ತು ಎಡವುತ್ತಿದೆ. ಅತ್ಯಂತ ನಗಣ್ಯ ಆರ್ಥಿಕ ನೆರವನ್ನು ರಾಜ್ಯಗಳಿಗೆ ನೀಡುವ ಮೂಲಕ ಮತ್ತು ಸುಲಿಗೆಕೋರ ಉತ್ಪಾದಕರಿಂದ ಲಸಿಕೆಯನ್ನು ರಾಜ್ಯಗಳೇ ತಾವೇ ಖರೀದಿಸಬೇಕು ಎಂದು ಒತ್ತಾಯಿಸುವ ಮೂಲಕ ಕೇಂದ್ರ ಸರ್ಕಾರವು ಈ ಯುದ್ಧವನ್ನು ಮುಂದೊಯ್ಯುವ ರಾಜ್ಯ ಸರ್ಕಾರಗಳ ಸಾಮರ್ಥ್ಯವನ್ನು ನಿರ್ಬಂಧಿಸಿದಂತೆಯೇ ಆಗಿದೆ.

ಹೀಗಾಗಿ ನ್ಯಾಯಾಂಗವು ಮುಂದಿನ ದಿನಗಳಲ್ಲಿ ತನ್ನ ಪಾತ್ರವನ್ನು ಮುಂದುವರೆಸುವ ಸಾಧ್ಯತೆ ಇದೆ–ಇನ್ನಷ್ಟು ನಿರ್ಣಾಯಕ ರೀತಿಯಲ್ಲಿ ಇದನ್ನು ಮಾಡುತ್ತದೆ ಎಂದು ಆಶಿಸೋಣ.

ಕಾರ್ಮಿಕ ವರ್ಗದ ಹೋರಾಟಗಳ ಹೊಸ ನೀಲನೋಟ 1977-1984

ಜನತಾ ಪಕ್ಷದ ಆಳ್ವಿಕೆಯಲ್ಲಿ ಕಾರ್ಮಿಕ ವರ್ಗ



ಜನತಾ ಸರ್ಕಾರವು ಮಾರ್ಚ್ 1977 ರಲ್ಲಿ ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿ ಜನಸಮೂಹದ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿತ್ತು ಕಾರ್ಮಿಕರಿಗೆ ನ್ಯಾಯ, ಸಮಾನತೆ ಮತ್ತು ನ್ಯಾಯಯುತ ಒಪ್ಪಂದದ ಭರವಸೆ ನೀಡಿತ್ತು. ಆದರೆ ಶೀಘ್ರದಲ್ಲೇ ಈ ಭರವಸೆಗಳು ಮೋಸಗೊಳಿಸುವವೆಂದು ಸಾಬೀತಾಯಿತು.. ಶೀಘ್ರವಾಗಿ ಒಂದರ ಹಿಂದೊಂದು ಬಂದ **ಭೂತಲಿಂಗಂ ಸಮಿತಿಯ ವರದಿ, ಕೈಗಾರಿಕಾ ಸಂಬಂಧಗಳ ಮಸೂದೆ. ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳ ಮಸೂದೆ** ಇತ್ಯಾದಿಗಳ ಗಳಂತಹ ಕಾರ್ಮಿಕ ವಿರೋಧಿ ಕ್ರಮಗಳ ಮೂಲಕ, ಜನತಾ ಪಕ್ಷದ ಸರ್ಕಾರವು ತನ್ನ ಬಂಡವಾಳಶಾಹಿ ಪರ ಮತ್ತು ಕಾರ್ಮಿಕ ವಿರೋಧಿ ವರ್ಗಸ್ವರೂಪವನ್ನು ದೃಢ ಪಡಿಸಿತು. ಆದರೆ ಸರಕಾರದ ದಬ್ಬಾಳಿಕೆಗಳ ಹೊರತಾಗಿಯೂ ಹಲವಾರು ಹೋರಾಟಗಳು ನಡೆದವು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ್

ಮಾರ್ಚ್ 1977 ರ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಗಾಂಧಿ ಮತ್ತು ಅವರ ಕಾಂಗ್ರೆಸ್ ಸೋಲಿನೊಂದಿಗೆ ಜನತಾ ಪಕ್ಷವು ಮೊರಾರ್ಜಿ ದೇಸಾಯಿ ಅವರು ಪ್ರಧಾನ ಮಂತ್ರಿಯಾಗಿ ಸರ್ಕಾರವನ್ನು ರಚಿಸಿತು. ಈ ಹೊಸ ಸರ್ಕಾರವು ಸರ್ವಾಧಿಕಾರಶಾಹೀ ರಚನೆಯನ್ನು ಸಂಪೂರ್ಣವಾಗಿ ಕೆಡವಲು ಮತ್ತು ಜನರ ಪ್ರಜಾಪ್ರಭುತ್ವ ಮತ್ತು ಮೂಲಭೂತ ಹಕ್ಕುಗಳನ್ನು ಪುನಃಸ್ಥಾಪಿಸಲು ವಾಗ್ದಾನ ಮಾಡಿತು. ಸಿಪಿಐ (ಎಂ) ಮತ್ತು ಎಲ್ಲ ಎಡಪಂಥೀಯರು ಈ ಸರ್ಕಾರಕ್ಕೆ ಬೆಂಬಲ ನೀಡುವುದಾಗಿ ವಾಗ್ದಾನ ಮಾಡಿದರು. ಆಂತರಿಕ ತುರ್ತು ಪರಿಸ್ಥಿತಿಯನ್ನು ತೆಗೆದು ಹಾಕಲಾಯಿತು ಮತ್ತು ಕಳೆದುಹೋದ ಪ್ರಜಾಪ್ರಭುತ್ವ, ಟ್ರೇಡ್ ಯೂನಿಯನ್ ಮತ್ತು ನಾಗರಿಕ ಹಕ್ಕುಗಳನ್ನು ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಿಂದಕ್ಕೆ ಕೊಡಲಾಯಿತು. ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಜನತಾ ಪಕ್ಷದ ಸರ್ಕಾರವು ಜೂನ್ 1977 ರಲ್ಲಿ ರಾಜ್ಯ ಅಸೆಂಬ್ಲಿಗಳಿಗೆ ಚುನಾವಣೆ ನಡೆಸಲು ಆದೇಶಿಸಿತು. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ (ಇಂದಿರಾ) ಸೋಲಿಸಲ್ಪಟ್ಟಿತು. ಪಶ್ಚಿಮ ಬಂಗಾಳದಲ್ಲಿ ಸಿಪಿಐ (ಎಂ) ನೇತೃತ್ವದ ಎಡರಂಗವು ಚುನಾವಣೆಯಲ್ಲಿ ಗೆದ್ದು ಜ್ಯೋತಿ ಬಸು ಅವರು ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸಿತು. ಪಶ್ಚಿಮ ಬಂಗಾಳ ಒಂದರಲ್ಲೇ, ಎಡಪಂಥೀಯ ಸರ್ಕಾರವು ರಾಜ್ಯ ನೌಕರರ ಚಳವಳಿಯ ಕಲಮು 311 (2) ಸಿ ಅಡಿಯಲ್ಲಿ ವಜಾಮಾಡಿದ್ದ 29 ನಾಯಕರನ್ನು ಪುನಃ ನೇಮಕ ಮಾಡಿತು. ವಜಾಗೊಳಿಸಿದ ಮತ್ತು ಬಲವಂತವಾಗಿ ನಿವೃತ್ತಿಮಾಡಿದ ಇತರ ಉದ್ಯೋಗಿಗಳನ್ನು ಸಹ ಮತ್ತೆ ಸೇವೆಯಲ್ಲಿ ಸೇರಿಸಲಾಯಿತು.

ಹೊಸ ಪರಿಸ್ಥಿತಿಯಲ್ಲಿ, ಕಾರ್ಮಿಕರು ಮತ್ತು ನೌಕರರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮತ್ತು ಹೊಸ ಕೇಂದ್ರ ಸರ್ಕಾರದ ಮುಂದೆ ಇಡಬೇಕಾದ ಬೇಡಿಕೆಗಳ ಪಟ್ಟಿಯನ್ನು ರೂಪಿಸಲು ವೇತನ–ಸ್ತಂಭನ ವಿರುದ್ಧ ಮತ್ತು ಸಾರ್ವತ್ರಿಕ ಬೇಡಿಕೆಗಳ ಮೇಲೆ ರಾಷ್ಟ್ರೀಯ ಸಮಾವೇಶವನ್ನು ಸೆಪ್ಟೆಂಬರ್ 18, 1977 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಸಲಾಯಿತು. ಆರು ಕೇಂದ್ರ ಕಾರ್ಮಿಕ ಸಂಘಗಳು–ಸಿಐಟಿಯು, ಎಐಟಿಯುಸಿ, ಎಚ್‌ಎಂಎಸ್, ಯುಟಿಯುಸಿ, ಟಿಯುಸಿಸಿ ಮತ್ತು ಯುಟಿಯುಸಿ (ಲೆನಿನ್ ಸರಣಿ), ಹಲವಾರು ಸ್ವತಂತ್ರ ರಾಷ್ಟ್ರೀಯ ಒಕ್ಕೂಟಗಳು ಸಮಾವೇಶದಲ್ಲಿ ಭಾಗವಹಿಸಿದವು. ಸಮಾವೇಶವು ಪ್ರಸ್ತುತ ಬೆಳವಣಿಗೆಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ಒಳಗೊಂಡ ನೀತಿ ಹೇಳಿಕೆಯನ್ನು ಅಂಗೀಕರಿಸಿತು ಮತ್ತು ಕಾರ್ಮಿಕ ವರ್ಗಕ್ಕೆ ನೀಡಿದ ಆಶ್ವಾಸನೆಗಳನ್ನು ಜಾರಿಗೆ ತರಲು ಸರ್ಕಾರವನ್ನು ಒತ್ತಾಯಿಸಿತು. ಈ ಬೇಡಿಕೆಗಳ ಸುತ್ತ ಕಾರ್ಮಿಕ ವರ್ಗವನ್ನು ಸಜ್ಜುಗೊಳಿಸಲು ದೇಶಾದ್ಯಂತ 1977 ರ ಅಕ್ಟೋಬರ್ 24 ರಿಂದ 30 ರವರೆಗೆ ಜಂಟಿ ರ್‍ಯಾಲಿಗಳನ್ನು ನಡೆಸಲಾಯಿತು

ಜನತಾ ಸರ್ಕಾರದ ನೀತಿಗೆ
ಕಾರ್ಮಿಕ ವಿರೋಧಿ ತಿರುವು

ಜನತಾ ಸರ್ಕಾರವು ಮಾರ್ಚ್ 1977 ರಲ್ಲಿ ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿ ಜನಸಮೂಹದ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದಿತ್ತು ಕಾರ್ಮಿಕರಿಗೆ ನ್ಯಾಯ, ಸಮಾನತೆ ಮತ್ತು ನ್ಯಾಯಯುತ ಒಪ್ಪಂದದ ಭರವಸೆ ನೀಡಿತ್ತು. ಆದರೆ ಶೀಘ್ರದಲ್ಲೇ ಈ ಭರವಸೆಗಳು ಮೋಸಗೊಳಿಸುವವೆಂದು ಸಾಬೀತಾಯಿತು.. ಶೀಘ್ರವಾಗಿ ಒಂದರ ಹಿಂದೊಂದು ಬಂದ **ಭೂತಲಿಂಗಂ ಸಮಿತಿಯ ವರದಿ, ಕೈಗಾರಿಕಾ ಸಂಬಂಧಗಳ ಮಸೂದೆ. ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳ ಮಸೂದೆ** ಇತ್ಯಾದಿಗಳ ಗಳಂತಹ ಕಾರ್ಮಿಕ ವಿರೋಧಿ ಕ್ರಮಗಳ ಮೂಲಕ, ಜನತಾ ಪಕ್ಷದ ಸರ್ಕಾರವು ತನ್ನ ಬಂಡವಾಳಶಾಹಿ ಪರ ಮತ್ತು ಕಾರ್ಮಿಕ ವಿರೋಧಿ ವರ್ಗಸ್ವರೂಪವನ್ನು ದೃಢ ಪಡಿಸಿತು.

ಜನತಾ ಪಕ್ಷ ಅಧಿಕಾರ ವಹಿಸಿಕೊಂಡ ಆರು ತಿಂಗಳೊಳಗೆ, 'ವೇತನ, ಆದಾಯ ಮತ್ತು ಬೆಲೆ ನೀತಿಯ ಬಗ್ಗೆ ಸಮಗ್ರ ಅಧ್ಯಯನ'ಕ್ಕೆ, ಸರ್ಕಾರವು ಅಕ್ಟೋಬರ್ 13, 1977 ರಂದು ಅಧ್ಯಯನ ಗುಂಪನ್ನು ನೇಮಿಸಿತು, ಎಸ್.ಭೂತಲಿಂಗಂ ಅದರ ಅಧ್ಯಕ್ಷರಾಗಿದ್ದರು.

ಅಧ್ಯಯನ ಗುಂಪು ತನ್ನ ವರದಿಯನ್ನು ಮೇ 1978 ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಕಾರ್ಮಿಕ ವರ್ಗದ ಚಳವಳಿಯ ಪ್ರಮುಖ ವಿಷಯಗಳಾದ ಕನಿಷ್ಠ ವೇತನ, ಬೋನಸ್, ಸಂಘಟಿತ ವಲಯದಲ್ಲಿ ಮತ್ತು ಗ್ರಾಮೀಣ ವಲಯದಲ್ಲಿ ವೇತನದ ವಿಷಯಕ್ಕೆ ಸಂಬಂಧಿಸಿದಂತೆ, ವ್ಯತ್ಯಾಸಗಳು, ತುಟ್ಟಿಭತ್ಯೆ ಇತ್ಯಾದಿಗಳ ಮೇಲೆ ಅಧ್ಯಯನ ಗುಂಪಿನ ಶಿಫಾರಸುಗಳು ಈ ಕ್ಷೇತ್ರಗಳಲ್ಲಿನ ಎಲ್ಲಾ ಹಿಂದಿನ ಸಮಿತಿಗಳು ಮತ್ತು ಆಯೋಗಗಳ ವರದಿಗಳು ಮತ್ತು ಶಿಫಾರಸುಗಳ ಎಲ್ಲಾ ಪರಿಕಲ್ಪನಾ ಪ್ರಗತಿಯನ್ನು ಕೆಡವಲು ಪ್ರಯತ್ನಿಸಿದವು ಮತ್ತು ಈ ಎಲ್ಲಾ ಪರಿಕಲ್ಪನೆಗಳನ್ನು ಸಂಪೂರ್ಣವಾಗಿ ಪ್ರತಿಗಾಮಿ ನಿರ್ಧಾರಗಳಾಗಿ ಪರಿವರ್ತಿಸುವ ಪ್ರಯತ್ನಗಳನ್ನು ಮಾಡಿದವು.

ಕನಿಷ್ಠ ವೇತನದ ವಿಷಯದಲ್ಲಿ, ಇದು ವಿಶೇಷವಾಗಿ 1957 ರ 15 ನೇ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಅಗತ್ಯ ಆಧಾರಿತ ಆಹಾರಸೇವನೆ, ವಸತಿ, ಬಟ್ಟೆ ಮತ್ತು ವೈದ್ಯಕೀಯ ಅವಶ್ಯಕತೆ ಹೊಂದಿರುವ ಮೂರು ಘಟಕ ಕುಟುಂಬಕ್ಕೆ ನಿಗದಿಪಡಿಸಲಾದ ರೂ. 125/ ಕನಿಷ್ಠ ವೇತನದ ಸರ್ವಾನುಮತದ ಶಿಫಾರಸುಗಳನ್ನು ನಿರಾಕರಿಸಿತು.

ಕಾರ್ಮಿಕ ವರ್ಗದ ಚಳವಳಿಯ ಮತ್ತೊಂದು ಪ್ರಮುಖ ವಿಷಯವಾದ ಬೋನಸ್ ವಿಷಯದಲ್ಲಿ, ಗುಂಪು ಮತ್ತೆ ಹಿಂದಿನ ಎಲ್ಲಾ ಪರಿಕಲ್ಪನಾ ಮುನ್ನಡೆಗೆ ವಿರುದ್ಧವಾಗಿ ಮತ್ತು ಕಾರ್ಮಿಕ ವರ್ಗವು ಈಗಾಗಲೇ ಗಳಿಸಿರುವ ಸೌಲಭ್ಯಗಳನ್ನು ನಿರಾಕರಿಸಲು ಪ್ರಯತ್ನಿಸಿತು.

ಕಾರ್ಮಿಕರು ಮತ್ತು ನೌಕರರ ವೇತನ–ಪ್ಯಾಕೆಟ್‌ನ ಮತ್ತೊಂದು ಪ್ರಮುಖ ಅಂಶವಾದ ಅಂದರೆ ತುಟ್ಟಿಭತ್ಯೆಯ ಸಂದರ್ಭದಲ್ಲಿ, ಅಧ್ಯಯನ ಗುಂಪಿನ ಶಿಫಾರಸುಗಳು ಮತ್ತಷ್ಟು ಪ್ರತಿಗಾಮಿಯಾಗಿದ್ದವು.

ವಾಸ್ತವವಾಗಿ, ದೇಶದಲ್ಲಿ ತುಟ್ಟಿಭತ್ಯೆಗಳ ಎರಡು ವ್ಯವಸ್ಥೆಗಳು ಚಾಲ್ತಿಯಲ್ಲಿದ್ದವು– ಒಂದು ಕೇಂದ್ರ ವೇತನ ಆಯೋಗವು ರೂಪಿಸಿದ್ದು ಮತ್ತು ಇನ್ನೊಂದು ಕೈಗಾರಿಕಾ ತುಟ್ಟಿಭತ್ಯೆ. ಮೊದಲಿನದು ಹೆಚ್ಚು ಪ್ರಂಯೋಜನಕಾರಿಯಾಗಿರುವುದರಿಂದ ಅದು ಪೂರ್ಣ ತಟಸ್ಥೀಕರಣದ ತತ್ವವನ್ನು ಕನಿಷ್ಠ ಕೆಳಮಟ್ಟದಲ್ಲಿ ಆಧರಿಸಿರುವುದರಿಂದ, ಕೈಗಾರಿಕಾ ಕಾರ್ಮಿಕರು ಸಹ ಆ ವ್ಯವಸ್ಥೆಯನ್ನು ಜಾರಿಗೆ ತರಲು ಒತ್ತಾಯಿಸುತ್ತಿದ್ದರು. ಆದರೆ ಎರಡರ ನಡುವೆ, ಅಧ್ಯಯನ ಗುಂಪು ಕೈಗಾರಿಕಾ ಕಾರ್ಮಿಕರು ವಿರೋಧಿಸುತ್ತಿದ್ದ ಎರಡನೆಯದಕ್ಕೆ ಆದ್ಯತೆ ನೀಡಿತು.

1978 ರಲ್ಲಿ ಸಂಸತ್ತಿನ ಶರತ್ಕಾಲದ ಅಧಿವೇಶನದಲ್ಲಿ ಜನತಾ ಸರ್ಕಾರವು ಕುಖ್ಯಾತ 'ಕೈಗಾರಿಕಾ ಸಂಬಂಧ ಮಸೂದೆ' ಯನ್ನು ಪರಿಚಯಿಸಿತು. ಮಸೂದೆಯ ಕೆಲವು ವಿನಾಶಕಾರಿ ನಿಬಂಧನೆಗಳು ಮುಷ್ಕರಗಳನ್ನು ಕಾನೂನುಬಾಹಿರಗೊಳಿಸುವ ಮತ್ತು ತಮ್ಮ ಸಂಘವನ್ನು ಆಯ್ಕೆ ಮಾಡುವ ಕಾರ್ಮಿಕರ ಹಕ್ಕು ಮತ್ತು ಸಾಮೂಹಿಕ ಚೌಕಾಶಿಗಾಗಿನ ಕಾರ್ಮಿಕರ ಹಕ್ಕಿನಲ್ಲಿ ಅಧಿಕೃತ ಹಸ್ತಕ್ಷೇಪ ಮಾಡಲು ಅವಕಾಶ ನೀಡುವಂತಿದ್ದವು..

ಬಹಳಷ್ಟು ಕೈಗಾರಿಕಾ ಚಟುವಟಿಕೆಗಳು ಮತ್ತು ಸೇವೆಗಳನ್ನು 'ಅಗತ್ಯ ಸೇವೆಗಳು' ಎಂದು ಘೋಷಿಸಲಾಯಿತು ಮತ್ತು ಆ ಕ್ಷೇತ್ರಗಳಲ್ಲಿ ಮುಷ್ಕರಗಳನ್ನು ನಿಷೇಧಿಸಲಾಯಿತು. ಇದಲ್ಲದೆ, ಮಸೂದೆಯಲ್ಲಿ ಮುಷ್ಕರವನ್ನು ನಿಷೇಧಿಸಬಹುದಾದ 'ಅಗತ್ಯ ಸೇವೆಗಳ' ಹೊಸ ಕೈಗಾರಿಕೆಗಳ ಪಟ್ಟಿಗೆ ಸೇರಿಸಲು ಸರ್ಕಾರಕ್ಕೆ ಅಧಿಕಾರ ನೀಡುವ ಅವಕಾಶವಿತ್ತು. ಸಂಯೋಜಿತ ಮತ್ತು ತೀವ್ರ ವಿರೋಧದಿಮದಾಗಿ ಅಂತಿಮವಾಗಿ ಅದನ್ನು ಸರಕಾರ ಆಯ್ಕೆ ಸಮಿತಿಗೆ ಕಳಿಸಲೇ ಬೇಕಾಯಿತು.

ಏತನ್ಮಧ್ಯೆ, ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಬ್ಯಾಂಕಿಂಗ್, ವಿಮೆ ಮತ್ತು ಇತರ ಸಾರ್ವಜನಿಕ ವಲಯದ ನೌಕರರ ಸ್ವತಂತ್ರ ರಾಷ್ಟ್ರೀಯ ಒಕ್ಕೂಟಗಳು 19 ನವೆಂಬರ್ 1978 ರಂದು ನವದೆಹಲಿಯಲ್ಲಿ ಬೃಹತ್ ಟ್ರೇಡ್ ಯೂನಿಯನ್ ಸಮಾವೇಶವನ್ನು ಆಯೋಜಿಸಿದವು. ಮರುದಿನ 20 ನವೆಂಬರ್ 1978 ರಂದು 'ಸಂಸತ್ತಿಗೆ ನಡಿಗೆ' ಕಾರ್ಯಕ್ರಮ ನಡೆಯಿತು. ಈ ನಡಿಗೆಯಲ್ಲಿ ಸುಮಾರು ಒಂದೂವರೆ ಲಕ್ಷ ಕಾರ್ಮಿಕರು ಮತ್ತು ನೌಕರರು ಸೇರಿಕೊಂಡರು, ಇದು ಬೋಟ್ ಕ್ಲಬ್ ಲಾನ್‌ನಲ್ಲಿ ನಡೆದ ದೊಡ್ಡ ಬಹಿರಂಗ ಸಭೆಯಲ್ಲಿ ಸಮಾರೋಪಗೊಂಡಿತು. ಎಲ್ಲಾ ವಲಯದ ಕಾರ್ಮಿಕರು ಮತ್ತು ನೌಕರರನ್ನು ಮಸೂದೆಯನ್ನು ಒಗ್ಗಟ್ಟಿನಿಂದ ವಿರೋಧಿಸುವಂತೆ ಕರೆ ನೀಡಲಾಯಿತು. ಜನತಾ ಸರ್ಕಾರ ಕುಸಿದಾಗ ಮಸೂದೆ ಅಂತಿಮವಾಗಿ ರದ್ದಾಗಿ ಹೋಯಿತು.

ಆದರೆ ಮೊರಾರ್ಜಿ ದೇಸಾಯಿ ಸರ್ಕಾರವು ಕುಸಿಯುವ ಮೊದಲು ಮತ್ತೊಂದು ಕುಖ್ಯಾತ ಮಸೂದೆ, 1978 ರ ಮಸೂದೆ ಸಂಖ್ಯೆ 141, 'ಆಸ್ಪತ್ರೆ ಮತ್ತು ಶೈಕ್ಷಣಿಕ ಸಂಸ್ಥೆಗಳು (ನೌಕರರ ಸೇವೆಯ ಷರತ್ತುಗಳು ಮತ್ತು ಉದ್ಯೋಗ ವಿವಾದಗಳ ಇತ್ಯರ್ಥ) ಮಸೂದೆ, 1978 ನ್ನು, ಸಂಸತ್ತಿನಲ್ಲಿ ಮಂಡಿಸಿತು.

ನರ್ಸಿಂಗ್ ಹೋಮ್ಸ್ ಮತ್ತು ಔಷಧಾಲಯಗಳು ಮತ್ತು ವಿಶ್ವವಿದ್ಯಾಲಯ, ಕಾಲೇಜು ಅಥವಾ ಯಾವುದೇ ವೈಜ್ಞಾನಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳನ್ನು ಒಳಗೊಂಡ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಯಾವುದೇ ಆಸ್ಪತ್ರೆಯಲ್ಲಿ ಮುಷ್ಕರವಷ್ಟೇ ಅಲ್ಲ, ಯಾವುದೇ ರೀತಿಯ ಕಾನೂನುಬದ್ಧ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಮಸೂದೆ ಸಂಪೂರ್ಣವಾಗಿ ನಿಷೇಧಿಸಿತ್ತು.

ದಬ್ಬಾಳಿಕೆಯ ಹೊರತಾಗಿಯೂ
ಹಲವಾರು ಹೋರಾಟಗಳು

ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘ 1974 ರಿಂದ ತಮ್ಮ ಬೇಡಿಕೆಗಳ ಚಾರ್ಟರ್ ಇತ್ಯರ್ಥಕ್ಕಾಗಿ ಆಂದೋಲನ ನಡೆಸುತ್ತಿತ್ತು. 21 ಮೇ 1979 ರಿಂದ ನೌಕರರು ತಮ್ಮ 'ನಿಯಮದಷ್ಟೇ–ಕೆಲಸ' ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ ಆಂದೋಲನವು ಮತ್ತಷ್ಟು ತೀವ್ರಗೊಂಡಿತು. ಇಡೀ ಬ್ಯಾಂಕಿಂಗ್ ಕೈಗಾರಿಕೆ ಮತ್ತು ರಿಸರ್ವ್ ಬ್ಯಾಂಕ್‌ಗೆ ಜೂನ್ 30, 1979 ಅರ್ಧವಾರ್ಷಿಕ ಲೆಕ್ಕಪತ್ರಗಳನ್ನು ಪೂರ್ತಿಗೊಳಿಸಲು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯಲ್ಲಿ, ವಿವಾದಗಳ ದ್ವಿಪಕ್ಷೀಯ ಇತ್ಯರ್ಥದ ಅತ್ಯುತ್ತಮ ಹಾದಿಯನ್ನು ತಪ್ಪಿಸಿ, ಸರ್ಕಾರ ವಿವಾದವನ್ನು ತೀರ್ಪಿಗಾಗಿ 18 ಜೂನ್ 1979 ರಂದು ನ್ಯಾಯಾಧಿಕರಣಕ್ಕೆ ಉಲ್ಲೇಖಿಸಿದ್ದು 18 ಜೂನ್ 1979 ರಂದು 18,000 ಆರ್‌ಬಿಐ ನೌಕರರು ವಾಕ್–ಔಟ್ ರೂಪದಲ್ಲಿ ಆಂದೋಲನವನ್ನು ಇನ್ನಷ್ಟು ತೀವ್ರಗೊಳಿಸಲು ಕಾರಣವಾಯಿತು. ಮುಂಬೈ ಕಚೇರಿಯ ನಾಲ್ಕು ಉದ್ಯೋಗಿಗಳನ್ನು ಅಮಾನತುಗೊಳಿಸಲಾಯಿತು. ಪೊಲೀಸರು ವಿವಿಧ ಕೇಂದ್ರಗಳಲ್ಲಿ ನೌಕರರ ಮೇಲೆ ದಬ್ಬಾಳಿಕೆಗೆ ಇಳಿದರು. ಜೈಪುರದಲ್ಲಿ ಆಂದೋಲನ ನಡೆಸುತ್ತಿದ್ದ ನೌಕರರ ಮೇಲೆ ಲಾಠಿ ಪ್ರಹಾರ ಮತ್ತು 7 ಯೂನಿಯನ್ ಕಾರ್ಯಕರ್ತರನ್ನು ಬಂಧಿಸಲಾಯಿತು. ಮುಂಬೈ ಮತ್ತು ದೆಹಲಿಯಲ್ಲಿ 17 ಕಾರ್ಯಕರ್ತರನ್ನು ಬಂಧಿಸಲಾಯಿತು.. ಕಲ್ಕತ್ತಾದಲ್ಲಿ, ಎಡಪಂಥೀಯ ಸರ್ಕಾರ ಅಸ್ತಿತ್ವದಲ್ಲಿದ್ದ ಕಾರಣ, ಆಂದೋಲನ ನಡೆಸುತ್ತಿದ್ದ ನೌಕರರ ವಿರುದ್ಧ ಯಾವುದೇ ಪೊಲೀಸ್ ಕ್ರಮಗಳಿರಲಿಲ್ಲ.

ಜುಲೈ 5, 1979 ರಂದು ಭಾರತ ಸರ್ಕಾರವು ರಿಸರ್ವ್ ಬ್ಯಾಂಕ್‌ನಲ್ಲಿ ಮುಷ್ಕರವನ್ನು ನಿಷೇಧಿಸುವ ಸುಗ್ರೀವಾಜ್ಞೆಯನ್ನು ಹೊರಡಿಸುವ ಮೂಲಕ ನೌಕರರ ಮೇಲೆ ಭಾರೀ ಪ್ರಮಾಣದ ದಾಳಿಗೆ ಇಳಿಯಿತು.

ಇತರ ವಲಯಗಳಲ್ಲಿನ ಕಾರ್ಮಿಕರು ಮತ್ತು ನೌಕರರು ವಿವಿಧ ಕೇಂದ್ರಗಳಲ್ಲಿ ಸೌಹಾರ್ದ ಪ್ರದರ್ಶನವನ್ನು ನಡೆಸಿದರು. ಪಶ್ಚಿಮ ಬಂಗಾಳದಲ್ಲಿ ವಾಣಿಜ್ಯ ಬ್ಯಾಂಕುಗಳು, ಎಲ್‌ಐಸಿ, ಜಿಐಸಿ ಮತ್ತು ವಾಣಿಜ್ಯ ಸಂಸ್ಥೆಗಳ ನೌಕರರು ಜುಲೈ 20, 1979 ರಂದು ಒಂದು ಗಂಟೆ ಸೌಹಾರ್ದ ಮುಷ್ಕರವನ್ನು ಆಚರಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಸಹ ಪ್ರದರ್ಶನಗಳನ್ನು ನಡೆಸಿದರು. ಅಂತಿಮವಾಗಿ, ಆಡಳಿತ ವರ್ಗವು ಮಾತುಕತೆಗೆ ಒಪ್ಪಿಕೊಂಡ ನಂತರ ಆರ್‌ಬಿಐ ನೌಕರರ ಸಂಘವು 1979 ರ ಆಗಸ್ಟ್ 4 ರಂದು ಆಂದೋಲನವನ್ನು ರದ್ದುಗೊಳಿಸಿತು. ಜನತಾ ಪಕ್ಷದ ಸರ್ಕಾರದ ಸರ್ವಾಧಿಕಾರಶಾಹಿ ಮತ್ತು ಕಾರ್ಮಿಕ–ವಿರೋಧಿ ಸ್ವಭಾವವು ಹೆಚ್ಚು ಹೆಚ್ಚು ಬಹಿರಂಗವಾಯಿತು.

1979 ರ ಜುಲೈ 19 ಮತ್ತು 20 ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಉದ್ಯಮಗಳಲ್ಲಿನ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮಾವೇಶವು ಸಾರ್ವಜನಿಕ ವಲಯದ ನೌಕರರ ಒಗ್ಗಟ್ಟಿನ ಹೋರಾಟವನ್ನು ಹೆಚ್ಚಿಸುವಲ್ಲಿ ಮಹತ್ವದ ಆರಂಭವಾಯಿತು. ಸಮಾವೇಶವು 14 ಸೆಪ್ಟೆಂಬರ್ 1979 ರಂದು ಒಂದು ದಿನದ ದೇಶವ್ಯಾಪಿ ಸಾಂಕೇತಿಕ ಮುಷ್ಕರಕ್ಕೆ ನಿರ್ಧರಿಸಿತು,

ಈ ಅವಧಿಯ ಮತ್ತೊಂದು ಮಹತ್ವದ ಹೋರಾಟವೆಂದರೆ ಅಖಿಲ ಭಾರತ ಇಎಸ್‌ಐಸಿ ನೌಕರರ ಫೆಡರೇಶನ್ ಕರೆಯ ಮೇರೆಗೆ ನೌಕರರ ರಾಜ್ಯ ವಿಮಾ ನಿಗಮಗಳ 10.000 ನೌಕರರು ಪ್ರಾರಂಭಿಸಿದ ಅನಿರ್ದಿಷ್ಟ ಮುಷ್ಕರ. ಮುಷ್ಕರ 3 ಜುಲೈ 1979 ರಂದು ಪ್ರಾರಂಭವಾಯಿತು ಮತ್ತು ಕೇಂದ್ರ ಕಾರ್ಮಿಕ ಸಚಿವರೊಂದಿಗೆ ಜುಲೈ 21 ರಂದು ಮಾತುಕತೆ ನಡೆಸಲಾದ ನಂತರ ಹಿಂದೆಗೆದುಕೊಳ್ಳಲಾಯಿತು.

ವಿಮಾ ನೌಕರರು ಸಹ ಈ ಅವಧಿಯಲ್ಲಿ ಸಮರಶೀಲ ಹೋರಾಟವನ್ನು ಪ್ರಾರಂಭಿಸಿದರು. ಅಖಿಲ ಭಾರತ ವಿಮಾ ನೌಕರರ ಸಂಘ ಮತ್ತು ಇತರ ನಾಲ್ಕು ಸಂಘಗಳು ಕರೆ ನೀಡಿದಂತೆ ಎಲ್.ಐ. ಸಿ.ಯ 45.000 ನೌಕರರು ತಮ್ಮ ಬೇಡಿಕೆಗಳ ಚಾರ್ಟರ್ ಇತ್ಯರ್ಥಕ್ಕಾಗಿ ಜುಲೈ 12, 1979 ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಜಂಟಿಯಾಗಿ ಆಚರಿಸಿದರು. ಈ ಮುಷ್ಕರಕ್ಕೆ ಮುಂಚಿತವಾಗಿ ಮಾರ್ಚ್ 27 ಮತ್ತು ಮೇ 4, 1979ರಂದು ಎರಡು

ಪುಟ 14 ನೋಡಿ

“ನಾವು ಪ್ಯಾಲೆಸ್ಟೈನ್ ಜೊತೆಗಿದ್ದೇವೆ. ಅವರ ತಾಯ್ನಾಡನ್ನು ಪಡೆಯುವ, ಮನೆಗೆ ಮರಳುವ ಮತ್ತು ಅತಿಕ್ರಮಣಕ್ಕೆ ಪ್ರತಿರೋಧವೊಡ್ಡುವ ಹಕ್ಕನ್ನು ಬೆಂಬಲಿಸುತ್ತೇವೆ.”

ಇಸ್ರೇಲ್ ಪ್ಯಾಲೆಸ್ಟೈನ್ ಮೇಲೆ ನಡೆಸುತ್ತಿರುವ ದಾಳಿಯನ್ನು ಉಗ್ರವಾಗಿ ಖಂಡಿಸಿ, ಪ್ರಸಿದ್ಧ ಇತಿಹಾಸಕಾರರು, ಬರಹಗಾರರು, ಪ್ರಗತಿಪರರು ಮಾನವ ಹಕ್ಕು ಹೋರಾಟಗಾರರು ಹೇಳಿಕೆ ನೀಡಿದ್ದಾರೆ. ಅವರಲ್ಲಿ ಪ್ರಮುಖರಾದವರು, ಐಜಾಜ್ ಅಹ್ಮದ್, ಅರುಂಧತಿ ರಾಯ್, ಗೀತಾ ಹರಿಹರನ್, ಮೊಹಮ್ಮದ್ ಯೂಸುಫ್ ತರಿಗಾಮಿ, ನಸೀರುದ್ದೀನ್ ಷಾ, ನಯನತಾರಾ ಸಹಗಲ್, ಪ್ರಭಾತ್ ಪಟ್ನಾಯಕ್, ರತ್ನ ಪಾಠಕ್ ಷಾ, ಸುಭಾಶಿನಿ ಅಲಿ, ಸುಧನ್ವ ದೇಶಪಾಂಡೆ, ಮತ್ತು ವಿಜಯ್ ಪ್ರಶಾದ್. ಅವರು ಪ್ಯಾಲೆಸ್ಟೀನ್ ಜನರ ‘ತಾಯ್ನಾಡಿನ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟದ ಜೊತೆ ನಾವಿದ್ದೇವೆ’ ಎಂದಿದ್ದಾರೆ.

ಇಸ್ರೇಲ್ 1948 ರಿಂದ ಪ್ಯಾಲೆಸ್ಟೀನಿಯರ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು, ಅವರು ಒಂದು ತಾಯ್ನಾಡನ್ನು ಪಡೆಯುವ ಸಾಧ್ಯತೆಯನ್ನು ಅಳಿಸಿ ಹಾಕಲು ಪ್ರಯತ್ನಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ, ಸಿರಿಯನ್ ವಿದ್ವಾಂಸ ಕಾನ್ಸ್ಟಾಂಟೈನ್ ಜುರಾಯಕ್ ಆ ವರ್ಷ, “ಮಾನಾ ಅಲ್–ನಕ್ಬಾ” (ದುರಂತದ ಅರ್ಥ) ಎಂಬ ಪುಸ್ತಕವನ್ನು ಪ್ರಕಟಿಸಿದರು. ’ದುರಂತ’ (ನಕ್ಬಾ)ಎಂದರೆ ಪ್ಯಾಲೆಸ್ಟೀನಿಯರನ್ನು ತಮ್ಮ ಮನೆಗಳಿಂದ ಹೊರಹಾಕುವುದು, ಅಂದಿನಿಂದ ಇಸ್ರೇಲ್ನೊಳಗಿನ ಪ್ಯಾಲೆಸ್ಟೀನಿಯರನ್ನು ವರ್ಣಭೇದ ಪರಿಸ್ಥಿತಿಗೆ ಒಳಪಡಿಸಲಾಯಿತು. ಪೂರ್ವ ಜೆರುಸಲೆಮ್, ಗಾಜಾ ಮತ್ತು ಪಶ್ಚಿಮ ದಂಡೆಯಲ್ಲಿ ವಾಸಿಸುವ ಪ್ಯಾಲೆಸ್ಟೀನಿಯರನ್ನು ಉದ್ಯೋಗಕ್ಕೆ ವಾಪಸ್ಸಾಗುವ ಹಕ್ಕನ್ನು ನಿರಾಕರಣೆ ಮಾಡಿತು. ಏಪ್ರಿಲ್ 2021 ರ ಕೊನೆಯಲ್ಲಿ, – ನ್ಯೂಯಾರ್ಕ್ ನ ಮಾನವ ಹಕ್ಕುಗಳ ವೀಕ್ಷಣೆ (ಹ್ಯೂಮನ್ ರೈಟ್ಸ್ ವಾಚ್) “ಎ ಥ್ರೆಶೋಲ್ಡ್ ಕ್ರಾಸ್ಡ್" (ಒಂದು ಮಿತಿಯನ್ನು ದಾಟಲಾಗಿದೆ) ಎಂಬ ಸ್ಪಷ್ಟ ತಲೆಬರಹದೊಂದಿಗೆ, ಇಸ್ರೇಲಿ ಅಧಿಕಾರಿಗಳು ಮತ್ತು (ಪ್ಯಾಲೇಸ್ಟಿನಿಯರಿಗೆ) ವರ್ಣಭೇದ ನೀತಿ ಮತ್ತು ಕಿರುಕುಳದ ಅಪರಾಧಗಳ ಕುರಿತಂತೆ ಪ್ರಮುಖ ವರದಿಯನ್ನು ಪ್ರಕಟಿಸಿತು.

ಮೇ ಆರಂಭದಲ್ಲಿ, ಇಸ್ರೇಲ್ ಪ್ಯಾಲೇಸ್ಟಿನಿಯರ ಕುಟುಂಬಗಳನ್ನು ಶೇಖ್ ಜರಾ (ಜೆರುಸಲೆಮ್) ನಲ್ಲಿರುವ ತಮ್ಮ ಮನೆಗಳಿಂದ ಅಕ್ರಮವಾಗಿ ಹೊರಹಾಕಲು ಪ್ರಯತ್ನಿಸಿತು. ಲೆಬನಾನಿನ ಕಾದಂಬರಿಕಾರ ಎಲಿಯಾಸ್ ಖೌರಿ ಹೇಳುವಂತೆ ಈ ಹೊರಹಾಕುವಿಕೆ ‘ನಿರಂತರ ದುರಂತ’”ದ ಭಾಗವಾಗಿದೆ. ಬೇರೆ ಕಡೆಗಳಿಂದ ಹೊರ ಹಾಕಲ್ಪಟ್ಟು ಜೆರುಸೆಲಂ ನ ಈ ಭಾಗದಲ್ಲಿ ನೆಲೆಸಿದ್ದ ಪ್ಯಾಲೆಸ್ಟೀನಿಯರನ್ನು, ಅಲ್ಲಿಂದಲೂ ಮತ್ತೆ ಹೊರಹಾಕಲ್ಪಟ್ಟರು.

ಪ್ಯಾಲೆಸ್ಟೀನಿಯನ್ ಕುಟುಂಬಗಳು ಮತ್ತು ಅವರ ನೆರೆಹೊರೆಯವರು ಹೊರಹೋಗಲು ನಿರಾಕರಿಸಿದರು. ಏಕೆಂದರೆ, ಅವರು ಅದನ್ನು ವಿರೋಧಿಸುವ ಹಕ್ಕನ್ನು ಹೊಂದಿದ್ದರು. ಅವರು ನೆಲೆಸಿದ್ದ ಭೂಮಿಯನ್ನು ವಿಶ್ವಸಂಸ್ಥೆಯು ಆಕ್ರಮಿತ ಪ್ಯಾಲೇಸ್ಟಿನಿಯನ್ ಪ್ರದೇಶ (ಒಪಿಟಿ) ಎಂದು ಪರಿಗಣಿಸಿದೆ. ಆಕ್ರಮಣಕಾರ ಇಸ್ರೇಲ್ ಆ ಪ್ರದೇಶದ ಆಢಳಿತ ಮಾತ್ರ ನಡೆಸಬಹುದು. ಅಲ್ಲಿನ ನೆಲೆಸುವಿಕೆಯಲ್ಲಿ ಯಾವುದೇ ಬದಲಾವಣೆ ಮಾಡುವಂತಿಲ್ಲ. ಅಲ್ಲಿಂದಲೂ ಹೊರ ಹಾಕುವುದನ್ನು ಪ್ಯಾಲೆಸ್ಟೀನಿಯರು ವಿರೋಧಿಸಿದಾಗ, ಅವರು ಝಿಯಾನಿಸ್ಟ್(ಯಹೂದಿ) ಮತ್ತು ಇಸ್ರೇಲಿ ಗಡಿ ಪೊಲೀಸರಿಂದ ಕಠಿಣ ಹಿಂಸಾಚಾರವನ್ನು ಎದುರಿಸಬೇಕಾಯಿತು. ಪ್ಯಾಲೆಸ್ಟೀನಿಯರನ್ನು ಅವಮಾನಿಸುವ ನೀತಿಯ ಭಾಗವಾಗಿ, ಗಡಿ ಪೋಲಿಸರು ಏಪ್ರಿಲ್ 13 ರಂದು, ರಂಜಾನ್ ಪ್ರಾಥನೆ ಮಾಡುವಾಗ ಏಕಾಏಕಿ ಅಲ್–ಅಕ್ಸಾ ಮಸೀದಿಯ ಒಳಗೆ ಪ್ರವೇಶಿಸಿ ಕ್ರೂರವಾಗಿ ಹಿಂಸಾಚಾರವೆಸಗಿದರು.

ಇಸ್ರೇಲ್ ಮತ್ತು ಝಿಯಾನಿಸ್ಟರು ಈ ಹಿಂಸಾಚಾರ ವನ್ನು ನಿಲ್ಲಿಸದಿದ್ದರೆ, ರಾಕೆಟುಗಳ ದಾಳಿ ಎದುರಿಸಬೇಕಾಗುತ್ತದೆ ಎಂದು ಒಪಿಟಿಯ ಭಾಗವಾದ ಗಾಜಾದ ಪ್ಯಾಲೆಸ್ಟೀನಿಯರು ಎಚ್ಚರಿಸಿದ್ದರು. ಇಸ್ರೇಲಿನ ಪೋಲಿಸರು ದಾಳಿಯನ್ನು ನಿಲ್ಲಿಸದ ಕಾರಣ, ಗಾಜಾದ ಪ್ಯಾಲೆಸ್ಟೀನಿಯನ್ನರು ಇಸ್ರೇಲ್ ಮೇಲೆ ರಾಕೆಟ್ ಹಾರಿಸಿದರು. ಆ ಮೇಲೆ ನಡೆದ ದೌರ್ಜನ್ಯಗಳನ್ನು ರಾಕೆಟ್ ದಾಳಿಗಳು ಆರಂಭಿಸಲಿಲ್ಲ ಅಥವಾ ನಿರ್ಧರಿಸಲಿಲ್ಲ. ಕಾನೂನುಬಾಹಿರ ಅತಿಕ್ರಮಣಕ್ಕೆ ಪ್ರತಿರೋಧ ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಕಾನೂನುಬದ್ಧ. ಇಂತಹ ಕಾನೂನುಬದ್ಧ ಪ್ರತಿರೋಧಧ ಭಾಗವಾಗಿ ರಾಕೆಟುಗಳನ್ನು ಇಸ್ರೇಲ್ ನತ್ತ ಹಾರಿಸಿತು.

ಇಷ್ಟಕ್ಕೆ, ಇಸ್ರೇಲ್ ತೀವ್ರ ಬಲದಿಂದ ನಾಗರಿಕ ವಾಸದ ಗುರಿಗಳ ಮೇಲೆ ಭೂ ದಾಳಿ ಮತ್ತು ವಾಯು ದಾಳಿ ನಡೆಸಿ ಪ್ರತೀಕಾರ ತೀರಿಸಿಕೊಂಡಿತು. ಮಕ್ಕಳು ಮತ್ತು ಮಹಿಳೆಯರನ್ನು ಈ ದಾಳಿಯಲ್ಲಿ ಕೊಂದಿತು. ನಾಗರಿಕರು ವಾಸಿಸುವ ಕಟ್ಟಡಗಳ ಮೇಲೆ ದಾಳಿ ಮಾಡಿತು ಮತ್ತು ಮಾಧ್ಯಮ ಕಟ್ಟಡದ ಮೇಲೆ ಬಾಂಬ್ ಸ್ಫೋಟಿಸಿತು. 2006 ರಿಂದ ವಿಶ್ವದ ಅತಿದೊಡ್ಡ ಯಾತನಾ ಶಿಬಿರಗಳಲ್ಲಿ ಒಂದಾದ ಗಾಜಾದ ಮೇಲೆ ನಿರಂತರ ಬಾಂಬ್ ದಾಳಿ ನಡೆಸುತ್ತಿರುವುದು ಇಸ್ರೇಲಿನ ಒಪಿಟಿಯ ನಿರ್ವಹಣೆಯ ಪ್ರತೀಕವಾಗಿದೆ.

ಕದನ ವಿರಾಮ ನಿರ್ಣಯಕ್ಕೆ ಅಮೆರಿಕ ಸರ್ಕಾರ ನಿರಾಕರಿಸಿದ್ದರಿಂದ ವಿಶ್ವಸಂಸ್ಥೆ ಮೌನವಾಗಿದೆ. ಪ್ಯಾಲೆಸ್ಟೀನಿಯರನ್ನು ರಕ್ಷಿಸಲು ಯಾವುದೇ ಅರಬ್ ರಾಷ್ಟ್ರವು ತನ್ನ ಮಿಲಿಟರಿ ಬಲವನ್ನು ಬಳಸಲು ಸಿದ್ಧವಿಲ್ಲ; ಉದಾಹರಣೆಗೆ, ಈಜಿಪ್ಟ್ ವಾಯುಪಡೆಯು ಗಾಜಾದ ಮೇಲೆ ‘ಹಾರಾಟವಿಲ್ಲದ ವಲಯ’ ಎಂದು ಘೋಷಿಸಿ ಇಸ್ರೇಲ್ ದಾಳಿಯನ್ನು ತಡೆಯಬಹುದಿತ್ತು. ಜೋರ್ಡಾನ್ ಮತ್ತು ಲೆಬನಾನ್ನಲ್ಲಿ ದೇಶಭ್ರಷ್ಟರಾಗಿ ನೆಲೆಸಿರುವ ಪ್ಯಾಲೆಸ್ಟೀನಿಯನ್ನರು, ತಮ್ಮ ತಾಯ್ನಾಡಿನಿಂದ ವಿಭಜಿಸುವ ದ್ವಾರಗಳ ಮೂಲಕ, ಬೇಲಿಗಳ ತಳ್ಳಿ, ಮನೆಗೆ ಹೋಗಲು ಉತ್ಸುಕರಾಗಿದ್ದರು.

ಈ ಭಯಾನಕ ಇಸ್ರೇಲಿ ದಾಳಿಯು ಹಾಮಾಸ್ ರಾಕೆಟ್ ದಾಳಿಯಿಂದ ಆರಂಭವಾಯಿತು ಎಂದು ವಿವರಿಸುವ ಪ್ರಯತ್ನವನ್ನು, ಈ ವಿದ್ಯಮಾನದ ಸನ್ನಿವೇಶ ಗೊತ್ತಿಲ್ಲದಿರುವವರು ಅಥವಾ ಮರೆಮಾಚುವವರು, ಪ್ಯಾಲೆಸ್ಟೀನರ ಪ್ರತಿರೋಧದ ಮತ್ತು ಘನತೆಯಿಂದ ಬಾಳುವ ಹಕ್ಕನ್ನು ನಿರಾಕರಿಸುವವರು ಮಾತ್ರ ಮಾಡಲು ಸಾಧ್ಯ. ನಾವು ಪ್ಯಾಲೆಸ್ಟೀನಿಯರೊಂದಿಗೆ ಕೈ ಜೋಡಿಸುತ್ತೇವೆ. ಅವರ ತಾಯ್ನಾಡನ್ನು ಪಡೆಯುವ, ಮನೆಗೆ ಮರಳುವ ಮತ್ತು ಅತಿಕ್ರಮಣಕ್ಕೆ ಪ್ರತಿರೋಧವೊಡ್ಡುವ ಹಕ್ಕನ್ನು ಬೆಂಬಲಿಸುತ್ತೇವೆ. ಪ್ಯಾಲೆಸ್ಟೀನಿಯನ್ನರ ಮೇಲಿನ ಭೀಕರ ಹಿಂಸಾಚಾರದ ಬಗ್ಗೆ ನಮ್ಮ ಪ್ರತಿಕ್ರಿಯೆಯು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯ 1514 (1960) ಕ್ಕೆ ಅನುಸಾರವಾಗಿ ರೂಪಿಸಲ್ಪಟ್ಟಿದೆ. “ವಿಮೋಚನೆಯ ಪ್ರಕ್ರಿಯೆ’ಯನ್ನು ತಡೆಯಲಾಗದು ಮತ್ತು ಹಿಂದಕ್ಕೆ ಒಯ್ಯಲಾಗುವುದಿಲ್ಲ. .. .. ಗಂಭೀರ ಬಿಕ್ಕಟ್ಟುಗಳನ್ನು ತಪ್ಪಿಸಲು, ವಸಾಹತುಶಾಹಿಗೆ ಮತ್ತು ಅದರೊಂದಿಗೆ ಹಾಸುಹೊಕ್ಕಾಗಿರುವ ಪ್ರತ್ಯೇಕತೆ ಮತ್ತು ತಾರತಮ್ಯದ ಎಲ್ಲಾ ಆಚರಣೆಗಳಿಗೆ ಒಂದು ಅಂತ್ಯವನ್ನು ಕಾಣಿಸಬೇಕು.”

ಕೋವಿಡ್–19 ಎರಡನೆಯ ಅಲೆ–ಹಲವು ಪ್ರಶ್ನೆಗಳು ಭಾಗ 2....

ಪುಟ 8 ರಿಂದ

ಯಾವುದೇ ಒಂದು ದೇಶದಲ್ಲಿ ಉಲ್ಬಣಗೊಂಡರೂ ಪ್ರಪಂಚದ ಉಳಿದ ದೇಶಗಳಿಗೆ ಅಪಾಯ ಕಟ್ಟಿಟ್ಟ ಬುತ್ತಿ. ಮುಂದಿನ ದಿನಗಳಲ್ಲಿ ಉದ್ಭವವಾಗುವ ರೂಪಾಂತರಿಗಳು ಈಗಿರುವ ಲಸಿಕೆಗಳಿಗೆ ಪ್ರತಿರೋಧ ಬೆಳೆಸಲು ಸಾಧ್ಯ. ಆಗ ಅವುಗಳನ್ನು ಮಣಿಸಿದ ಹೊಸ ಲಸಿಕೆಯ ಉತ್ಪಾದನೆ ಅಗತ್ಯ.

ಕೋವಿಡ್–19 ಪ್ರಪಂಚದಿಂದ ಪೂರ್ಣವಾಗಿ ನಿರ್ಮೂಲನ ಮಾಡುವುದುಕಷ್ಟ. ಆದರೆ ಇದನ್ನು ಹತೋಟಿಯಲ್ಲಿ ಇಡಲು ಸಾಧ್ಯ. ಇದಕ್ಕಾಗಿ ಜನರ ಹೊಸದರಲ್ಲಿನ ರೋಗ ನಿರೋಧಕ ಶಕ್ತಿ ಕೆಳಗಿಳಿದಾಗ ಅದನ್ನು ಮೇಲಕ್ಕೆತ್ತಲು ನಿರ್ದಿಷ್ಟ ಕಾಲಕ್ಕೊಮ್ಮೆ ಲಸಿಕೆಯನ್ನು ನೀಡುವುದು ಅಗತ್ಯ. ಇದನ್ನು ಬೂಸ್ಟರ್ ಲಸಿಕೆ ಎನ್ನುತ್ತಾರೆ.

18 ವರ್ಷದೊಳಗಿನ ಮಕ್ಕಳಲ್ಲಿ, ಗರ್ಭಿಣಿ ಸ್ತ್ರೀಯರಲ್ಲಿ ಹಾಗೂ ಹಾಲೂಡಿಸುವ ತಾಯಂದಿರಲ್ಲಿ ಈ ಲಸಿಕೆಯ ಗುಣಾವರ್ಗಗಳನ್ನು ತಿಳಿದುಕೊಳ್ಳಲು ಪ್ರಯೋಗ ನಡೆದಿಲ್ಲ. ಕೆಲವು ದೇಶಗಳಲ್ಲಿ 12 ರಿಂದ 18 ವರ್ಷಗಳ ತನಕದವರಿಗೆ ಲಸಿಕೆ ನೀಡಲು ಪ್ರಾರಂಭಿಸಿದ್ದಾರೆ. ಗರ್ಭಧಾರಣೆಯ ಮೂರನೇ ಹಂತದಲ್ಲಿರುವ ಗರ್ಭಿಣಿಯರಿಗೆ ಹಾಗೂ ಎದೆ ಹಾಲೂಡಿಸುವ ತಾಯಂದಿರಿಗೆ ಕೊಡಬಹುದು ಎಂದು ಅಭಿಪ್ರಾಯ ಕೆಲವು ತಜ್ಞರಿಂದ ಬರುತ್ತಿದೆ. ಆದರೆ ನಮ್ಮ ದೇಶದಲ್ಲಿ ಇದುವರೆಗೆ ಅನುಮತಿ ದೊರೆತಿಲ್ಲ.

11. ಎರಡನೇ ಅಲೆಯನ್ನು ಸರಿಯಾದ ದೂರದರ್ಶಿ ಯೋಜನೆ ಮತ್ತು ಅದರ ಜಾರಿಯಿಂದ ತಡೆಯುವುದು ಸಾಧ್ಯವಿತ್ತೇ?

ಎರಡನೆಯ ಅಲೆಯನ್ನು ಸಂಪೂರ್ಣವಾಗಿ ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿತ್ತೋ ಇಲ್ಲವೋ ಎರಡನೇ ಅಲೆ ಬಂದಾಗಿದೆ. ಆದರೆ ಎರಡನೆಯ ಅಲೆಯ ಸೋಂಕು ಜನರಲ್ಲಿ, ಸಮಾಜದಲ್ಲಿ ಹಾಗೂ ದೇಶದಲ್ಲಿ ಇಂತಹ ಸಂಕಷ್ಟ ಹರಡುವುದನ್ನು ತಡೆಗಟ್ಟಲು ಸಾಧ್ಯವಿತ್ತು.

ಮೊದಲ ಅಲೆ ಮುಗಿಯುತ್ತಿದ್ದಂತೆ, ಆ ಅಲೆಗೆ ಕಾರಣವಾದ ವೈರಾಣು ತನ್ನೊಂದಿಗೆ, ತನ್ನ ಮೂಲದ ಪೀಳಿಗೆಯ ರೂಪಾಂತರಿಗಳೊಂದಿಗೆ ಇನ್ನೂ ಉಗ್ರವಾದ 2ನೇ ಅಲೆಯನ್ನು ಸಾಧಾರಣ 2021 ರ ಮಾರ್ಚ್ ಎಪ್ರಿಲ್‌ನಂತೆ ಸೃಷ್ಟಿಸಬಹುದೆನ್ನುವ ಮುನ್ಸೂಚನೆ ಹಲವು ತಜ್ಞರಿಂದ ದೊರಕಿತ್ತು.

ಆದರೆ ಎಲ್ಲರ ನಿರೀಕ್ಷೆಗೂ ಮೀರಿ ಮೊದಲ ಅಲೆ ಅತ್ಯಂತ ಹೆಚ್ಚು ಜನಸಂಖ್ಯೆ ಹಾಗೂ ಸಾಂದ್ರತೆ ಇರುವ ನಮ್ಮ ದೇಶದಲ್ಲಿ ಇತರ ಕೆಲವು ದೇಶಗಳಿಗಿಂತ ಕಡಿಮೆ ಮಟ್ಟದಲ್ಲಿ ಸಾವುನೋವುಗಳನ್ನುಂಟು ಮಾಡಿತ್ತು. ಆಗ, ನಮ್ಮ ಘನ ಸರ್ಕಾರದ ನೇತೃತ್ವ ಹಾಗೂ ಭಾರತಾಂಬೆಯ ಕೃಪೆಯಿಂದ ನಾವು ಕೋವಿಡ್–19 ರ ದಾಳಿಯನ್ನು ಹಿಮ್ಮೆಟ್ಟಿಸಿದೆನೆಂದು ದೇಶ ವಿದೇಶಗಳಲ್ಲಿ ಸಾರಲಾಯಿತು. ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡೆವು. ಹಾಗಾಗಿ ತಜ್ಞರ ಸಲಹೆಯನ್ನು ಕಡೆಗಣಿಸಲಾಯಿತು. ದೈವದ ಕೃಪೆ ಪಡೆಯುವ ಸಲುವಾಗಿ ಹಲವು ಲಕ್ಷ ಜನ ಒಮ್ಮೆಗೆ ಒಂದೆಡೆ ಸೇರುವ ‘ಕುಂಭ ಮೇಳ’ಗಳನ್ನು ಒಂದು ವರ್ಷ ಮುಂಚಿತವಾಗಿ ನೆರವೇರಿಸಲು ಅನುಮತಿ ನೀಡಲಾಯಿತು. ಹಲವು ರಾಜ್ಯಗಳಲ್ಲಿ ದೀರ್ಘಾವಧಿ ಕಾಲ ನಡೆಯುವಂತೆ ಚುನಾವಣೆಗಳನ್ನು ಘೋಷಿಸಲಾಯಿತು. ಎಪ್ರಿಲ್ ತಿಂಗಳ ಪ್ರಾರಂಭದಲ್ಲೇ 2ನೇ ಅಲೆ ಶುರುವಾಗಿತ್ತು. ಆದರೆ ಸಭೆ, ಸಮಾರಂಭ, ಜಾತ್ರೆ ಹಾಗೂ ಚುನಾವಣಾ ಪ್ರಚಾರಗಳ ಸಭೆಗಳಲ್ಲಿ ಕೋವಿಡ್ ತಡೆಗಟ್ಟುವ ನಿಯಮಗಳನ್ನು ಸಂಪೂರ್ಣ ಉಲ್ಲಂಘಿಸುತ್ತಾ ರಾಜಕಾರಣಿಗಳು ಹಾಗೂ ಜನರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದರು. ಕೋವಿಡ್ ಅಲೆ ಒಂದೇ ಸಮನೆ ಮೇಲ್ಮುಖವಾಗಿ ಓಡುತ್ತಿತ್ತು. ರೂಪಾಂತರಿ ವೈರಸ್‌ಗಳು, ಬಹಳ ಶೀಘ್ರವಾಗಿ ಜನರಲ್ಲಿ ಸೋಂಕುಂಟು ಮಾಡುತ್ತಿದ್ದವು.

ಈ ಅಲೆಯ ರೋಗಿಗಳಲ್ಲಿ ಒಕ್ಸಿಜನ್‌ನ ಅವಶ್ಯಕತೆ ಹೆಚ್ಚಿತ್ತು. ಆದರೆ ನಮ್ಮ ದೇಶದಲ್ಲಿ ಕೋವಿಡ್ ಜಯಿಸಿತೆಂಬ ಆಳುವವರ ಆಶ್ವಾಸನೆಗಳೊಳಗಾಗಿ ಅದಾಗಲೇ ಮೊದಲ ಅಲೆಯ ಸೋಂಕಿತರ ಚಿಕಿತ್ಸೆಗಾಗಿ ಸ್ಥಾಪಿಸಿದ ಹೆಚ್ಚುವರಿ ಆಸ್ಪತ್ರೆಗಳನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಒಕ್ಸಿಜನ್‌ನ ಉತ್ಪಾದನೆ, ರಾಜ್ಯಗಳ ನಡುವೆ ಅದರ ಸಮರ್ಪಕ ಹಂಚಿಕೆ, ಅವಶ್ಯಕತೆ ಇರುವ ಸ್ಥಳಗಳಿಗೆ ಅದರ ಸಾಗಾಣಿಕೆಗೆ ಸರ್ಕಾರ ಯಾವುದೇ ಯೋಜನೆ ನಿರೂಪಿಸಲಿಲ್ಲ. ಜನರಿಗೆ 2ನೇ ಅಲೆಗೆ ಸಮರ್ಪಕವಾಗಿ ಸನ್ನದ್ಧರಾಗುವ ಸಲಹೆ ಸೂಚನೆಗಳನ್ನು ನೀಡುವ ಬದಲು ಸರ್ಕಾರ ‘ನಮ್ಮ ದೇಶ ಕೋವಿಡ್ ಗೆದ್ದಿದೆ’ ಎನ್ನುವ ತಪ್ಪು ಮಾಹಿತಿ ನೀಡುತ್ತಿತ್ತು.

ಈ ಸೋಂಕಿನ ವಿರುದ್ಧದ ಹೋರಾಟದಲ್ಲಿ ನೆರವು ನೀಡುವ ಲಸಿಕೆಯ ಬೃಹತ್ ಪ್ರಮಾಣದ ಉತ್ಪಾದನೆಯಾಗಲಿಲ್ಲ. ಉತ್ಪಾದನೆಯಾದ ಲಸಿಕೆಯೂ ಸಮರ್ಪಕವಾಗಿ ಹಂಚಿಕೆಯಾಗಲಿಲ್ಲ. ಹಲವು ರಾಜ್ಯಗಳು ತಮಗೆ ದೊರೆತ ಲಸಿಕೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಿಲ್ಲ. ಈ ಹತ್ತು ಹಲವು ಕೊರತೆಗಳು 2ನೇ ಅಲೆಯನ್ನು ಸಮರ್ಪಕವಾಗಿ ಎದುರಿಸುವಲ್ಲಿ ದೇಶ ವಿಫಲವಾಗಲು ಪ್ರಮುಖ ಕಾರಣಗಳಾದವು.

12. ಮೂರನೇ ಅಲೆಯ ಮಾತು ಕೇಳಿಬರುತ್ತಿದೆ. ಅದನ್ನಾದರೂ ತಡೆಗಟ್ಟಬಹುದೆ?

ಇದರ ನಡುವೆ ತಜ್ಞರು ಮೂರನೇ ಅಲೆಯ ಮುನ್ಸೂಚನೆ ನೀಡುತ್ತಿದ್ದಾರೆ. ಯಾವುದೇ ವಿಷಯದ ಮುನ್ಸೂಚನೆ ನೀಡಲು ಅದರ ಬಗೆಗಿನ ಹಿಂದಿನ ಮಾಹಿತಿಗಳ ನಿಖರ ಅಂಕೆ ಸಂಖ್ಯೆಗಳ ಅಧ್ಯಯನ ಅತ್ಯಗತ್ಯ. ಆದರೆ ನಮ್ಮ ದೇಶದಲ್ಲಿ ಈ ಮಾಹಿತೆಗಳೇ ಸರಿಯಾಗಿ ದೊರೆಯುತ್ತಿಲ್ಲ. ದೊರಕಿದ ಮಾಹಿತಿ ನಂಬಲಸಾಧ್ಯ ಎನ್ನುವುದು ಹೆಚ್ಚಿನ ತಜ್ಞರ ಅಭಿಪ್ರಾಯ. ಈ ಸೋಂಕಿಗೆ ಒಳಗಾಗುವ ಇದರಿಂದ ನರಳುವ, ಸಾವಿಗೀಡಾಗುವ ಜನರ ಸಂಖ್ಯೆ, ಪ್ರಮಾಣ ಸರ್ಕಾರ ನೀಡುವ ಮಾಹಿತಿಗಿಂತ 5–6 ಪಟ್ಟು ಹೆಚ್ಚು ಎನ್ನುವುದು ತಜ್ಞರ ಅಂದಾಜು. ಬೇರೆ ಕಾಲದಲ್ಲಿ ನಮ್ಮ ದೇಶದಲ್ಲಿ ದಿನಕ್ಕೆ 27 ರಿಂದ 30 ಸಾವಿರ ಸಾವುಗಳಾಗುತ್ತವೆ. ಈ ಸೋಂಕಿನಿಂದ ದಿನಕ್ಕೆ 3–4 ಸಾವಿರ ಹೆಚ್ಚು ಸಾವಾಗಿದ್ದರೆ ನಮ್ಮ ರುದ್ರಭೂಮಿಗಳಲ್ಲಿ ಶವ ಸಂಸ್ಕಾರಕ್ಕೆ ಈ ರೀತಿ ದಿನಗಟ್ಟಲೆ ಉದ್ದ ಸಾಲಿನಲ್ಲಿ ಕಾಯುವ ಪ್ರಮೇಯ ಖಂಡಿತಾ ಬರುತ್ತಿರಲಿಲ್ಲ ಎನ್ನುವುದು ಹಲವಾರು ಅಭಿಪ್ರಾಯ.

ಈ ಎರಡನೆಯ ಅಲೆ ಆದಷ್ಟು ಬೇಗ ಮುಗಿಯಲಿ. ಮೂರನೆಯ ಅಲೆ ಬಂದರೂ ಅದರ ಪ್ರಾಬಲ್ಯತೆ ಹಾಗೂ ತಡೆಯಲು ಸರ್ಕಾರ ಸಂಪೂರ್ಣ ಸಿದ್ಧತೆ ಮಾಡಿಕೊಳ್ಳಲಿ. 3ನೇ ಅಲೆಯ ಸೋಂಕಿನ ಚಿಕಿತ್ಸೆಗೆ ಬೇಕಾದ ಸೂಕ್ತ ಔಷಧ ಹಾಗೂ ಸೋಂಕನ್ನು ತಡೆಗಟ್ಟುವ ಪ್ರಬಲ ಲಸಿಕೆ ಆದಷ್ಟು ಬೇಗ ಆವಿಷ್ಕಾರವಾಗಲಿ ಎಂದು ಹಾರೈಸೋಣ. ಲಸಿಕೆ ಹೋರಾಟದಲ್ಲಿ ನಾವೆಲ್ಲರೂ ಭಾಗಿಗಳಾಗಿ ಸೋಂಕನ್ನು ಸೋಲಿಸುವುದರಲ್ಲಿ ಯಶಸ್ವಿಯಾಗೋಣ.

"ಬದುಕಿನ ಹಕ್ಕು" ಆದ್ಯತೆಯಾಗಬೇಕು



ಕಳೆದ ಅರ್ಧ ಶತಮಾನದಲ್ಲೇ ಅತ್ಯಂತ ದೊಡ್ಡ ಮಾನವೀಯ ಬಿಕ್ಕಟ್ಟನ್ನು ದೇಶವು ಎದುರಿಸುತ್ತಿದ್ದರೂ ಸಹ, ಸಾಂಕ್ರಾಮಿಕದ ದುಷ್ಪರಿಣಾಮಗಳನ್ನು ಎದುರಿಸಲು ತಕ್ಕನಾದ ಪ್ಯಾಕೇಜ್‌ಅನ್ನು ಒದಗಿಸದ ವಿಶ್ವದ ಕೆಲವೇ ದೇಶಗಳಲ್ಲಿ ಭಾರತವೂ ಒಂದು.
ಈಗಲಾದರೂ ಸರಕಾರ ತುರ್ತಾಗಿ ಮಾಡಬೇಕಾಗಿರುವುದು ಏನೆಂದರೆ, ಬದುಕುವ ಹಕ್ಕಿಗೆ ಆದ್ಯತೆ ನೀಡುವ ಹಲವಾರು ಕ್ರಮಗಳನ್ನು ಹಂತ ಹಂತವಾಗಿ ಕೈಕೊಳ್ಳುವುದು. ಆದ್ಯತೆಯ ಮೇಲೆ ಕೈಗೊಳ್ಳಬೇಕಾದ ಈ ಕ್ರಮಗಳು ಇಂದು ಆರ್ಥಿಕ ಚೇತರಿಕೆಯನ್ನು ಪ್ರಾರಂಭಿಸುವ ಖಚಿತ ಕಾರ್ಯವಿಧಾನವೂ ಹೌದು, ಮಾರ್ಗವೂ ಹೌದು.
ಭಾರತವು ಸಂವಿಧಾನದಲ್ಲಿರುವ 'ಬದುಕುವ ಹಕ್ಕು' ಎಂಬ ಪದಕ್ಕೆ ಮತ್ತು ಸಮಾನತೆ ಮತ್ತು ಸೋದರತ್ವದ ಪ್ರತಿಜ್ಞೆಗಳಿಗೆ ಸತ್ವ ಮತ್ತು ಅರ್ಥವನ್ನು ನೀಡುವ ದೂರ ಸರಿಯಬಾರದು ಎನ್ನುತ್ತಾರೆ.

ಮಾನವ ಹಕ್ಕುಗಳ ಹೋರಾಟಗಾರರಾದ **ಹರ್ಷಮಂದೆರ್**
ಮತ್ತು ಅರ್ಥಶಾಸ್ತ್ರಜ್ಞರಾದ **ಪ್ರೊ. ಜಯತಿ ಘೋಷ್**
ಮತ್ತು **ಪ್ರೊ.ಪ್ರಭಾತ್ ಪಟ್ನಾಯಕ್**

ಅನು: ಕೆ.ಎಂ.ನಾಗರಾಜ್ (ಮೂಲ ಲೇಖನ ಕೃಪೆ: ದಿ ಹಿಂದು, ಮೇ 18)

ಕೊರೊನಾ ಸಾಂಕ್ರಾಮಿಕದಿಂದಾಗಿ ಉದ್ಭವಿಸಿರುವ ಆರೋಗ್ಯ ತುರ್ತುಪರಿಸ್ಥಿತಿ, ಬೃಹತ್ ಪ್ರಮಾಣದ ಉದ್ಯೋಗಗಳ ನಷ್ಟ, ದುಡಿಮೆಗೆ ಸಿಗುವ ಆದಾಯದ ಏಕಾಏಕಿ ಕುಸಿತ, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮತ್ತು ಹಸಿವಿನಿಂದ ನರಳುತ್ತಿರುವ ಜನರ ಸಂಖ್ಯೆಯ ಅತೀವ ಹೆಚ್ಚಳ ಮುಂತಾದ ಅನೇಕ ಬಿಕ್ಕಟ್ಟುಗಳ ಪರಿಣಾಮವಾಗಿ ಭಾರತದ ಬಹುಪಾಲು ಜನರು ಇಂದು ತತ್ತರಿಸಿ ಹೋಗಿದ್ದಾರೆ.

ಅನೇಕ ವೈಫಲ್ಯಗಳು

ಎಲ್ಲಾ ವಲಸೆ ಕಾರ್ಮಿಕರಿಗೂ, ಅವರು ಗುರುತಿನ ದಾಖಲೆ ಹೊಂದಿರದಿದ್ದರೂ ಸಹ, ಉಚಿತ ಪಡಿತರವನ್ನು ಒದಗಿಸುವಂತೆ ಮತ್ತು ಸಮುದಾಯ-ಅಡುಗೆ ವ್ಯವಸ್ಥೆಗಳನ್ನು ಆರಂಭಿಸಿ ದಿನಕ್ಕೆ ಎರಡು ಬಾರಿ ಉಚಿತ ಊಟ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸುಪ್ರೀಂ ಕೋರ್ಟ್ ಮೇ 13 ರಂದು ಕೇಂದ್ರ ಸರ್ಕಾರ ಮತ್ತು ಪಂಜಾಬ್, ಹರಿಯಾಣ ಹಾಗೂ ಉತ್ತರ ಪ್ರದೇಶ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಹಸಿವಿನ ಬಿಕ್ಕಟ್ಟು ದೇಶದಲ್ಲಿದೆ ಎಂಬುದನ್ನು 2020ರ ಮಾರ್ಚ್‌ನಲ್ಲಿ ಘೋಷಿಸಿದ್ದ ರಾಷ್ಟ್ರ ವ್ಯಾಪಿ ಲಾಕ್‌ಡೌನ್ ನಂತರ ಇದೇ ಮೊದಲ ಬಾರಿಗೆ ಒಪ್ಪಿಕೊಂಡಿರುವ ಸುಪ್ರೀಂ ಕೋರ್ಟ್, ಈ ಬಗ್ಗೆ ಸರ್ಕಾರಗಳು ತುರ್ತು ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಆದೇಶಿಸಿರುವ ತೀರ್ಪು ಮಹತ್ವಪೂರ್ಣವಾಗಿದೆ.

ಆದರೂ, ಮೂರು ಕಾರಣಗಳಿಂದಾಗಿ ಪಥ-ಪ್ರವರ್ತಕನಾಗುವ ಒಂದು ಅವಕಾಶವನ್ನು ಸುಪ್ರೀಂ ಕೋರ್ಟ್ ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದೆ: ಉಚಿತ ಪಡಿತರ ಮತ್ತು ಉಚಿತ ಊಟದ ಸೌಲಭ್ಯವನ್ನು ಅದು ಇಡೀ ದೇಶಕ್ಕೆ ವಿಸ್ತರಿಸಲಿಲ್ಲ; ಊಟ ಮತ್ತು ಪಡಿತರದ ಜೊತೆಗೆ ಸ್ವಲ್ಪ ನಗದು ಹಣವೂ ದೊರಕುವಂತೆ ಈ ಸೌಲಭ್ಯವನ್ನು ವಿಸ್ತರಿಸಲಿಲ್ಲ; ಮತ್ತು, ಈ ಸೌಲಭ್ಯವು ಒಂದು ಹಕ್ಕು ಎಂದು ಪರಿಗಣನೆಯಾಗುವುದರ ಬದಲು ಸರ್ಕಾರದ ಧಾರಾಳದ ಕೊಡುಗೆ ಎಂದು ಪರಿಗಣಿಸಲಾಗಿದೆ. ಜೀವಿಸುವ ಹಕ್ಕಿನೊಂದಿಗೆ ಸಂಬಂಧ ಹೊಂದಿರುವುದರಿಂದ ಮತ್ತು ಜೀವಿಸುವ ಹಕ್ಕಿನಿಂದ ಉದ್ಭವವಾಗುವ ಜೀವನೋಪಾಯದ ಹಕ್ಕು ಕೂಡ ಸಾರ್ವತ್ರಿಕವೇ ಎಂಬುದನ್ನು ತೀರ್ಪಿಗೆ ಆಧಾರವಾಗಿ ಗುರುತಿಸಿದ್ದರೆ, ಈ ಮೂರೂ ಲೋಪಗಳನ್ನು ನಿವಾರಿಸಬಹುದಿತ್ತು.

ನಾಚಿಕೆಗೇಡಿ ಲಸಿಕೆ ನೀತಿ

ತನ್ನ ಲಸಿಕೆ ನೀತಿಯ ಮೂಲಕ ಬದುಕುವ ಹಕ್ಕಿನ ಅತ್ಯಂತ ನಾಚಿಕೆಗೇಡಿನ ಉಲ್ಲಂಘನೆಯನ್ನು ಸರ್ಕಾರ ಮಾಡುತ್ತಿದೆ. ಇಂದಿನ ಸಾಂಕ್ರಾಮಿಕದ ಪರಿಸ್ಥಿತಿಯಲ್ಲಿ ಒಬ್ಬ ವ್ಯಕ್ತಿಯು ಬದುಕುಳಿಯಬೇಕು ಎಂದಾದರೆ, ಕೋವಿಡ್-19 ವಿರುದ್ಧ ಲಸಿಕೆ ಹಾಕಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಜೀವಿಸುವ ಹಕ್ಕನ್ನು ಗೌರವಿಸುವುದು ಮತ್ತು ಕಾಪಾಡುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ, ಲಸಿಕೆ ಪಡೆಯುವವರ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸದೆ, ಸರ್ಕಾರವು ಎಲ್ಲರಿಗೂ ಸಮಾನವಾಗಿ ಲಸಿಕೆ ಲಭ್ಯವಾಗುವಂತೆ ಮಾಡಲೇಬೇಕು. ಲಸಿಕೆ ಉಚಿತವಾಗಿ ಲಭ್ಯವಿದ್ದರೆ ಮಾತ್ರ ಈ ಕಾರ್ಯವನ್ನು ಸಾಧಿಸಬಹುದು. ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆಯನ್ನು ಅತಿ ಹೆಚ್ಚು ಖಾಸಗೀಕರಣಗೊಳಿಸಿರುವ ಅಮೇರಿಕಾ ಸೇರಿದಂತೆ ಅನೇಕ ದೇಶಗಳಲ್ಲಿ, ಲಸಿಕೆಗಳನ್ನು ಎಲ್ಲರಿಗೂ ಉಚಿತವಾಗಿ ಒದಗಿಸಲಾಗಿದೆ. ಆದರೆ, ಭಾರತದಲ್ಲಿ 18-45 ವರ್ಷ ವಯಸ್ಸಿನವರು ದುಬಾರಿ ಶುಲ್ಕ ತೆತ್ತು ಲಸಿಕೆಗಳನ್ನು ಖಾಸಗಿ ನರ್ಸಿಂಗ್ ಹೋಂಗಳ ಮೂಲಕ ಪಡೆಯುವಂತೆ ಮಾಡಲಾಗಿದೆ. ಸಾಂಕ್ರಾಮಿಕ ರೋಗವನ್ನು ನಿಗ್ರಹಿಸುವಲ್ಲಿ ಇದೊಂದು ಅಸಹ್ಯದ ಕ್ರಮವೂ ಮತ್ತು ಪ್ರತಿಕೂಲ ತಂತ್ರವೂ ಆಗುತ್ತದೆ.

ಕೇಂದ್ರ ಸರ್ಕಾರವು ಹೊಂದಿರುವ ಲೈಸೆನ್ಸ್ ಕಡ್ಡಾಯ ಅಧಿಕಾರವನ್ನು ಬಳಸಿಕೊಂಡು, ಅನೇಕ ಔಷದ ತಯಾರಕ ಕಂಪೆನಿಗಳ ಸಹಯೋಗದೊಂದಿಗೆ ಉತ್ಪಾದನೆಯನ್ನು ಹೆಚ್ಚಿಸಿ ಸಾಕಷ್ಟು ಲಸಿಕೆಗಳ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳಲಿಲ್ಲ. ಇಂತಿಷ್ಟು ಸಮಯದಲ್ಲಿ ಇಂತಿಷ್ಟು ಲಸಿಕೆಗಳನ್ನು ಒದಗಿಸಬೇಕೆಂಬ ಕೋರಿಕೆಯನ್ನು ಲಸಿಕೆ ತಯಾರಿಕರಿಗೆ ಸಲ್ಲಿಸಲಿಲ್ಲ. ರಾಜ್ಯ ಸರ್ಕಾರಗಳಿಗೆ ಲಸಿಕೆಗಳನ್ನು ಒದಗಿಸುವ ತನ್ನ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಖಾಸಗಿ ನರ್ಸಿಂಗ್ ಹೋಂಗಳು ಕೊಳ್ಳುವ ಲಸಿಕೆಗಳಿಗೆ ಬೇರೆ ಬೇರೆ ದರ ನಿಗದಿಪಡಿಸಿದ್ದರಿಂದಾಗಿ, ರಾಜ್ಯಗಳು ತಮ್ಮ ತಮ್ಮೊಳಗೆ ಮತ್ತು ಖಾಸಗಿ ನರ್ಸಿಂಗ್ ಹೋಂಗಳೊಂದಿಗೆ ಸ್ಪರ್ಧೆಗೆ ಇಳಿದು ಕಿತ್ತಾಡುವಂತೆ ಮಾಡಲಾಗಿದೆ. ಈ ರೀತಿಯಲ್ಲಿ ನಿಗದಿಪಡಿಸಿರುವ ಬೆಲೆಗಳು ಭಾರತ್ ಬಯೋಟೆಕ್ ಮತ್ತು ಸೀರಮ್ ಇನ್ಸಿಟ್ಯೂಟ್ ಆಫ್ ಇಂಡಿಯಾಗೆ ಹಣ ಕೀಳುವ ಅವಕಾಶವನ್ನು ಕಲ್ಪಿಸಿವೆ. ಭಾರತ ಸರ್ಕಾರದ ಇಂತಹ ಅನೇಕ ಘೋರ ವೈಫಲ್ಯಗಳ ಪರಿಣಾಮವನ್ನು ನಾವೀಗ ನೋಡುತ್ತಿದ್ದೇವೆ.

ಉಲ್ಬಣಗೊಂಡ ಸೋಂಕಿನಿಂದ ಆಗಲೋ ಈಗಲೋ ಎನ್ನುವ ಹಂತ ತಲುಪಿದಾಗಲೂ ಜನರ ಜೀವ ಉಳಿಸಲು ಸಾಕಷ್ಟು ಶ್ರಮ ವಹಿಸದ ಸರ್ಕಾರದ ಮನಃಸ್ಥಿತಿಯನ್ನು, ಎರಡನೇ ಅಲೆ ಅಪ್ಪಳಿಸಿರುವ ಈ ಸಮಯದಲ್ಲಿ ಜನರಿಗೆ ಜೀವನೋಪಾಯವೇ ಮಂಗಮಾಯವಾಗುತ್ತಿರುವಾಗ ನಾವು ಕಾಣುತ್ತಿರುವ ಅದರ ನಿರ್ದಯತೆ ಮಾತ್ರ ಸರಿಗಟ್ಟಬಲ್ಲದು. ಕನಿಷ್ಠ 90% ಕಾರ್ಮಿಕರು ಅನೌಪಚಾರಿಕ ವಲಯದಲ್ಲಿದ್ದಾರೆ. ಉದ್ಯೋಗ ಸಂಬಂಧಿತವಾಗಿ ಅವರಿಗೆ ಕಾನೂನಿನ ರಕ್ಷೆಯೇ ಇಲ್ಲ. ಸಾಮಾಜಿಕ ರಕ್ಷಣೆಯೂ ಇಲ್ಲ. ಹಿಂದಿನ ವರ್ಷದ ಲಾಕ್‌ಡೌನ್ ಉಂಟುಮಾಡಿದ ಆರ್ಥಿಕ ಸಂಕಷ್ಟಗಳಿಗೆ ತಕ್ಕ ಪರಿಹಾರವನ್ನು ನಿರಾಕರಿಸಲಾಗಿದೆ. ಅನೌಪಚಾರಿಕ ವಲಯದ ಉದ್ಯೋಗಗಳನ್ನೇ ಅವಲಂಬಿಸಿರುವ ಸುಮಾರು ಒಂದು ನೂರು ಕೋಟಿ ಜನರ ಜೀವನವು ದುಃಸ್ಥಿತಿಗೆ ಒಳಗಾಗಿರುವ ಸಮಸ್ಯೆಯ ಬಗ್ಗೆ ಸಮಾಜ ದನಿ ಎತ್ತುತ್ತಿಲ್ಲ. ನಮ್ಮ ರಾಷ್ಟ್ರ ಮಟ್ಟದ ನೀತಿ ನಿರೂಪಕರು ಅಸಂಘಟಿತ ವಲಯವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಅವರ ಈ ನಿಷ್ಕ್ರಿಯತೆಯು, ಹೇಳಲಾಗದ ಯಾತನೆಯನ್ನು ಅನುಭವಿಸುತ್ತಿರುವ ಜನರಿಗೆ ಮಾತ್ರವಲ್ಲ, ದೇಶದ ಭವಿಷ್ಯ ಮತ್ತು ಅದು ಅನುಸರಿಸುತ್ತಿರುವ ಆರ್ಥಿಕ ಬೆಳವಣಿಗೆಯ ದಿಕ್ಪಥದ ಮೇಲೆ ಭೀಕರ ಮತ್ತು ದೀರ್ಘಕಾಲೀನ ಪರಿಣಾಮ ಬೀರಲಿದೆ.

ಕೆಲವು ಸ್ವಯಂ ಸೇವಾ ಸಂಸ್ಥೆಗಳು ಒಟ್ಟಾಗಿ ಸೇರಿ, ಹಸಿವಿನ ಅಗಾಧತೆಯ ಬಗ್ಗೆ ('ಹಂಗರ್ ವಾಚ್') ಇತ್ತೀಚೆಗೆ ನಡೆಸಿದ ಒಂದು ಅಧ್ಯಯನದ ವರದಿಯ ಪ್ರಕಾರ, ಹಿಂದಿನ ವರ್ಷದ ಲಾಕ್‌ಡೌನ್ ತೆರವುಗೊಳಿಸಿದ ಎರಡು ತಿಂಗಳ ನಂತರ, ಮೂರರಲ್ಲಿ ಎರಡು ಕುಟುಂಬಗಳು ಲಾಕ್‌ಡೌನ್‌ಗೆ ಮೊದಲು ಉಣ್ಣುತ್ತಿದ್ದಕ್ಕಿಂತಲೂ ಕಡಿಮೆ ಉಣ್ಣುತ್ತಿವೆ ಮತ್ತು ಅವರು ಸೇವಿಸಿದ ಆಹಾರವು ಕಡಿಮೆ ಆರೋಗ್ಯಕರವಾಗಿತ್ತು. ಸಮೀಕ್ಷೆ ನಡೆಸಿದ ಕುಟುಂಬಗಳ ಪೈಕಿ ನಾಲ್ಕರಲ್ಲಿ ಒಂದರ ಆದಾಯವು ಅರ್ಧದಷ್ಟು ಕುಸಿದಿದೆ. ಗ್ರಾಮೀಣಕ್ಕೆ ಹೋಲಿಸಿದರೆ ನಗರ ಭಾರತದಲ್ಲಿ ಹಸಿದವರ ಸಂಖ್ಯೆ ಹೆಚ್ಚಾಗಿದೆ. ಮುಂದಾಲೋಚನೆ ಇಲ್ಲದೆ ಘೋಷಿಸಿದ ಇತ್ತೀಚಿನ ಲಾಕ್‌ಡೌನ್‌ಗಳು, ಜನ ಜೀವನವನ್ನು ಹಳಿಗೆ ತರುವ ಪ್ರಯತ್ನಗಳನ್ನು ನಿಷ್ಫಲಗೊಳಿಸುತ್ತವೆ.

ಒಂದು ಗಮನಾರ್ಹ ಪ್ಯಾಕೇಜ್

ಕಳೆದ ಅರ್ಧ ಶತಮಾನದಲ್ಲೇ ಅತ್ಯಂತ ದೊಡ್ಡ ಮಾನವೀಯ ಬಿಕ್ಕಟ್ಟನ್ನು ದೇಶವು ಎದುರಿಸುತ್ತಿದ್ದರೂ ಸಹ, ಸಾಂಕ್ರಾಮಿಕದ ದುಷ್ಪರಿಣಾಮಗಳನ್ನು ಎದುರಿಸಲು ತಕ್ಕನಾದ ಪ್ಯಾಕೇಜ್‌ಅನ್ನು ಒದಗಿಸದ ವಿಶ್ವದ ಕೆಲವೇ ದೇಶಗಳಲ್ಲಿ ಭಾರತವೂ ಒಂದು. ಕೈಬಿಗಿ ಹಿಡಿದ ಹಣಕಾಸು ನೀತಿಯನ್ನು ಅನುಸರಿಸುವ ದೇಶವಾಗಿ ಉಳಿದ ಭಾರತದಲ್ಲಿ, ಕೋವಿಡ್-19 ಜಾಢ್ಯ ಶುರುವಾದ ಏಪ್ರಿಲ್ 2020 ರಿಂದ ಫೆಬ್ರವರಿ 2021ರ ವರೆಗಿನ ಅವಧಿಯಲ್ಲಿ ಕೇಂದ್ರ ಸರ್ಕಾರದ ನೈಜ ಖರ್ಚು-ವೆಚ್ಚಗಳು ಜಿಡಿಪಿಯ ಶೇ.2.1ರಷ್ಟು ಮಾತ್ರ ಏರಿಕೆಯಾಗಿವೆ. ಈ ಅಂಶವು, ಮೊದಲ ಅಲೆಯಿಂದಲೇ ಹೆಚ್ಚು ಜರ್ಜರಿತವಾಗಿದ್ದ ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕತೆಯು ಕಳಪೆಯಾಗಿಯೇ ಏಕೆ ಉಳಿದಿದೆ ಎಂಬುದನ್ನು ವಿವರಿಸುತ್ತದೆ. ಈ ದೇಶಗಳ ಪೈಕಿ ಹೆಚ್ಚಿನವು ಒದಗಿಸಿದ ಹಣಕಾಸಿನ ಬೃಹತ್ ಪ್ಯಾಕೇಜ್‌ಗಳು ಜನರ ಆದಾಯ ಕೊರೆಯಾಗದಂತೆ ನೋಡಿಕೊಂಡು ತಮ್ಮ ಅರ್ಥವ್ಯವಸ್ಥೆಯನ್ನು ಸುಧಾರಿಸಿಕೊಂಡವು.

ಮೂಲಸೌಕರ್ಯ ಯೋಜನೆಗಳ ಉಳಿಕೆ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರ ಹಣ ಖರ್ಚುಮಾಡುವುದು ಅರ್ಥವ್ಯವಸ್ಥೆಯ ಚೇತರಿಕೆಗೆ ಒಂದು ಸಾಧನವೆಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಈ ಕ್ರಮಕ್ಕೆ ಬದಲಾಗಿ ಅದೇ ಹಣವನ್ನು ದುಡಿಯುವ ಲಕ್ಷ ಲಕ್ಷ ಮಂದಿ ಬಡವರಿಗೆ ನಗದು ವರ್ಗಾವಣೆ ಮಾಡಿದ್ದರೆ, ಜನರ ಹಸಿವು ಇಂಗುತ್ತಿತ್ತು, ಉದ್ಯೋಗ ಕಳೆದುಕೊಂಡವರಿಗೆ ಸ್ವಲ್ಪ ಸಮಾಧಾನ ಸಿಗುತ್ತಿತ್ತು ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನವೂ ಸಿಗುತ್ತಿತ್ತು. ಹೇಗೆಂದರೆ, ಈ ಎಲ್ಲ ನಗದು ವರ್ಗಾವಣೆಯ ಹಣವೂ ಸರಳ, ದೇಶೀಯವಾಗಿ ಉತ್ಪಾದಿಸಿದ ಸರಕುಗಳನ್ನು ಕೊಳ್ಳಲು ಖರ್ಚಾಗುತ್ತಿತ್ತು. ಹಾಗಾಗಿ, ಇಂತಹ ಸಾರ್ವಜನಿಕ ವೆಚ್ಚದ 'ಗುಣಕ' ಪರಿಣಾಮಗಳು ಮೂಲಸೌಕರ್ಯ ಯೋಜನೆಗಳಿಗೆ ಖರ್ಚು ಮಾಡಿದ್ದಕ್ಕಿಂತಲೂ ಹೆಚ್ಚಾಗಿರುತ್ತಿತ್ತು.

ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಉಚಿತ ಪಡಿತರ ಮತ್ತು ಊಟ ಒದಗಿಸುವ ಕ್ರಮಗಳು ಪ್ರಯೋಜನಕಾರಿಯಾಗಿವೆ, ನಿಜ. ಆದರೆ, ಈ ಕ್ರಮಗಳು ಅರ್ಥವ್ಯವಸ್ಥೆಯ ಮೇಲೆ ಬೀರುವ ವಿಸ್ತರಣಾ ಪರಿಣಾಮವು ನಗಣ್ಯ, ಏಕೆಂದರೆ, ಪಡಿತರ ಮತ್ತು ಊಟ ಒದಗಿಸಲು ಅಗತ್ಯವಿರುವ ಸರಕುಗಳಲ್ಲಿ ಹೆಚ್ಚಿನವು ಈಗಾಗಲೇ ಸಂಗ್ರಹದಲ್ಲಿರುವ ಆಹಾರ ಧಾನ್ಯಗಳ ದಾಸ್ತಾನುಗಳ ಪ್ರಮಾಣವನ್ನು ಇಳಿಸುತ್ತವೆ, ಅಷ್ಟೇ. ಹೀಗಾಗಿ, ಸಂಕಷ್ಟದಲ್ಲಿರುವ ಜನರಿಗೆ ಪರಿಹಾರವನ್ನು ಒದಗಿಸುವ ಅಗತ್ಯ ಮತ್ತು ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಅಗತ್ಯ, ಈ ಎರಡೂ ಅನಿವಾರ್ಯತೆಗಳನ್ನು ಪೂರೈಸಿಕೊಳ್ಳುವ ಮಾರ್ಗವೆಂದರೆ, ಜನರಿಗೆ ಉಚಿತ ಊಟ ಮತ್ತು ಪಡಿತರದ ಜೊತೆಗೆ, ಪ್ರತಿ ಕುಟುಂಬಕ್ಕೂ ತಿಂಗಳಿಗೆ ರೂ.7,000 (ಕನಿಷ್ಠ ವೇತನದ ಸರಿ ಸುಮಾರು) ನಗದು ವರ್ಗಾವಣೆಯನ್ನು ಮಾಡುವ ಕ್ರಮವೇ.

ಪ್ರಭುತ್ವವು ತುರ್ತಾಗಿ ಮಾಡಬೇಕಾಗಿರುವುದು ಏನೆಂದರೆ, ಬದುಕುವ ಹಕ್ಕಿಗೆ ಆದ್ಯತೆ ನೀಡುವ ಹಲವಾರು ಕ್ರಮಗಳನ್ನು ಹಂತ ಹಂತವಾಗಿ ಕೈಕೊಳ್ಳುವುದು. ಆದ್ಯತೆಯ ಮೇಲೆ ಕೈಗೊಳ್ಳಬೇಕಾದ ಈ ಕ್ರಮಗಳು ಇಂದು ಆರ್ಥಿಕ ಚೇತರಿಕೆಯನ್ನು ಪ್ರಾರಂಭಿಸುವ ಖಚಿತ ಕಾರ್ಯವಿಧಾನವೂ ಹೌದು, ಮಾರ್ಗವೂ ಹೌದು.

ಕೋವಿಡ್-19 ಲಸಿಕೆಗಳ ಉತ್ಪಾದನೆಯನ್ನು ಹೆಚ್ಚಿಸಿ, ಸಂಗ್ರಹಣೆಯನ್ನು ಕೇಂದ್ರೀಕೃತಗೊಳಿಸಿ ಜನರ ಸೋಂಕು ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಎಲ್ಲರಿಗೂ ಉಚಿತವಾಗಿ ಒದಗಿಸುವಂತೆ ಲಸಿಕೆಗಳನ್ನು ರಾಜ್ಯಗಳಿಗೆ ವಿತರಿಸುವುದು;

ಪುಟ 14 ನೋಡಿ



ಉಲ್ಬಣಗೊಂಡ ಸೋಂಕಿನಿಂದ ಆಗಲೋ ಈಗಲೋ ಎನ್ನುವ ಹಂತ ತಲುಪಿದಾಗಲೂ ಜನರ ಜೀವ ಉಳಿಸಲು ಸಾಕಷ್ಟು ಶ್ರಮ ವಹಿಸದ ಸರ್ಕಾರದ ಮನಃಸ್ಥಿತಿಯನ್ನು, ಎರಡನೇ ಅಲೆ ಅಪ್ಪಳಿಸಿರುವ ಈ ಸಮಯದಲ್ಲಿ ಜನರಿಗೆ ಜೀವನೋಪಾಯವೇ ಮಂಗಮಾಯವಾಗುತ್ತಿರುವಾಗ ನಾವು ಕಾಣುತ್ತಿರುವ ಅದರ ನಿರ್ದಯತೆ ಮಾತ್ರ ಸರಿಗಟ್ಟಬಲ್ಲದು.

"ಬದುಕಿನ ಹಕ್ಕು" ಆದ್ಯತೆಯಾಗಬೇಕು

ಪುಟ 13 ರಿಂದ


ಮುಂದಿನ ಆರು ತಿಂಗಳವರೆಗೆ ಅಗತ್ಯವಿರುವ ಎಲ್ಲರಿಗೂ ತಿಂಗಳಿಗೆ 5 ಕೆಜಿಯಂತೆ ಆಹಾರ ಧಾನ್ಯಗಳನ್ನು ಉಚಿತವಾಗಿ ಹಂಚುವುದು; ಖಾಯಂ ಉದ್ಯೋಗವಿಲ್ಲದ ಪ್ರತಿ ಕುಟುಂಬಕ್ಕೂ ಕನಿಷ್ಠ ಮೂರು ತಿಂಗಳವರೆಗೆ ತಿಂಗಳಿಗೆ ರೂ.7,000 ನಗದು ವರ್ಗಾವಣೆ; ಸಮಗ್ರ ಶಿಶು ಅಭಿವೃದ್ಧಿ ಸೇವೆಗಳಿಗೆ ಸಂಪನ್ಮೂಲಗಳನ್ನು ಹೆಚ್ಚಿಸಿ ಈ ಕಾರ್ಯಕ್ರಮಗಳ ಪುನರುಜ್ಜೀವನಗೊಳಿಸಿ ವಿಸ್ತರಿಸುವುದು; ಕೆಲಸ ಒದಗಿಸುವ ದಿನಗಳ ಸಂಖ್ಯೆಯ ಮೇಲೆ ಅಥವಾ ಪ್ರತಿ ಕುಟುಂಬದ ಫಲಾನುಭವಿಗಳ ಸಂಖ್ಯೆಯ ಮೇಲೆ ಯಾವುದೇ ಮಿತಿ ಹೇರದೆ, ಉದ್ಯೋಗ ಖಾತ್ರಿ ಯೋಜನೆಯನ್ನು ಬೇಡಿಕೆಗೆ ಅನುಗುಣವಾಗಿ ಜಾರಿಗೊಳಿಸುವುದು; ವಿದ್ಯಾವಂತ ನಿರುದ್ಯೋಗಿಗಳಿಗೂ ಪ್ರಯೋಜನ ದೊರೆಯುವಂತಾಗಲು ಉದ್ಯೋಗ ಖಾತ್ರಿಯೋಜನೆಯನ್ನು ನಗರಗಳಿಗೂ ವಿಸ್ತರಿಸುವುದು.

ಈ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಹಣ ಎಲ್ಲಿದೆ? ಎಂದು ಕೇಳಬಹುದು. ಗಣನೀಯ ಪ್ರಮಾಣದ ನಿರುದ್ಯೋಗ, ಬಳಕೆಯಾಗದ ಉತ್ಪಾದನಾ ಸಾಮರ್ಥ್ಯ ಮತ್ತು ಬಳಸದ ಆಹಾರ ಧಾನ್ಯಗಳ ದಾಸ್ತಾನು (ಪ್ರಸ್ತುತ ಸುಮಾರು 80 ದಶಲಕ್ಷ ಟನ್‌ಗಳು) ಹೊಂದಿರುವ ಅರ್ಥವ್ಯವಸ್ಥೆಯಲ್ಲಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಯಾರೊಬ್ಬರ ಬಳಕೆಯನ್ನೂ ಮೊಟಕುಗೊಳಿಸುವ ಅಗತ್ಯವಿಲ್ಲ. ವಿತ್ತೀಯ ಕೊರತೆಯು ಅನಪೇಕ್ಷಿತವಾಗಿ ಸಂಪತ್ತಿನ ಅಸಮಾನತೆಗಳನ್ನು ವಿಸ್ತರಿಸುತ್ತದೆ ಮತ್ತು ಜಾಗತಿಕವಾಗಿ ಹರಿದಾಡುವ ಹಣಕಾಸು ಬಂಡವಾಳವನ್ನು ಗಾಬರಿಗೊಳಿಸುತ್ತದೆ ಎಂಬುದರ ಹೊರತಾಗಿ, ವಿತ್ತೀಯ ಕೊರತೆಯನ್ನು ವಿಸ್ತರಿಸಿಕೊಳ್ಳುವುದರಿಂದ ಯಾವ ಹಾನಿಯೂ ಇಲ್ಲ.

ಈ ಎರಡೂ ಸಾಧ್ಯತೆಗಳನ್ನು ತಡೆಗಟ್ಟಲು, ಸಂಪತ್ತಿನ ತೆರಿಗೆಯನ್ನು ಜಾರಿಗೊಳಿಸುವುದು ಒಂದು ಸರಳ ಕ್ರಮವಾಗುತ್ತದೆ. ಲಾಭದ ಮೇಲೆ ಹೆಚ್ಚು ತೆರಿಗೆ ಹಾಕಿದರೂ ಸಾಕೇ ಸಾಕು. ಈ ಎರಡೂ ಕ್ರಮಗಳು ಒಟ್ಟಾಗಿ ಸಂಗ್ರಹಿಸಬಹುದಾದ ತೆರಿಗೆಗಳು, ಜಿಡಿಪಿಯ 3.5% ಗಿಂತಲೂ ಅಧಿಕವಲ್ಲ. ಈ 3.5% ತೆರಿಗೆಗಳಲ್ಲಿ ಸುಮಾರು 1% ಹಣವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ತೆರಿಗೆ ಆದಾಯವಾಗಿ ಹಿಂತಿರುಗುತ್ತದೆ. ಹಾಗಾಗಿ, ಜಿಡಿಪಿಯ ಶೇ.2.5ರಷ್ಟು ಹೊಸ ಹೆಚ್ಚುವರಿ ತೆರಿಗೆ ಆದಾಯದ ಅಗತ್ಯವಿರುತ್ತದೆ. ಈ ಮೊತ್ತವನ್ನು ಪಡೆದುಕೊಳ್ಳಲು ಆದಾಯ ಗಳಿಕೆ ಪಟ್ಟಿಯ ಮೇಲ್ತುದಿಯ 1% ಕುಟುಂಬಗಳ ಮೇಲೆ ಕೇವಲ 1.5% ಸಂಪತ್ತಿನ ತೆರಿಗೆಯನ್ನು ವಿಧಿಸಿದರೆ ಸಾಕೇ ಸಾಕು.

ಈ ಅಂಕಿ ಅಂಶಗಳು ಕೇವಲ ಉದಾಹರಣೆಯಷ್ಟೇ. ಅಮೇರಿಕಾದ ಅಧ್ಯಕ್ಷ ಜೋ ಬಿಡೆನ್ ಮತ್ತು ಅಮೇರಿಕಾದ ಖಜಾನೆ ಕಾರ್ಯದರ್ಶಿ ಜಾನೆಟ್ ಯೆಲೆನ್ ಅವರುಗಳು ಹೆಚ್ಚು ಹೆಚ್ಚು ಆಮೂಲಾಗ್ರ ಸುಧಾರಣಾ ಕ್ರಮಗಳನ್ನು ಪರಿಗಣಿಸುತ್ತಿರುವಾಗ, ಭಾರತವು 'ಬದುಕಿನ ಹಕ್ಕು' ಎಂಬ ಪದಕ್ಕೆ ಸತ್ವ ಮತ್ತು ಅರ್ಥವನ್ನು ನೀಡುವ ಮತ್ತು ಸಂವಿಧಾನದ ಸಮಾನತೆ ಮತ್ತು ಭ್ರಾತೃತ್ವದ ಪ್ರತಿಜ್ಞೆಗಳಿಂದ ದೂರ ಸರಿಯಬಾರದು.

ವಾಸನೆ ಮತ್ತು ರುಚಿ ಮಾತ್ರವಲ್ಲ, ಮುನ್ನೋಟವನ್ನೂ ನೀವು ಕಳಕೊಂಡಿದ್ದೀರಿ



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಅಳಿದ ಮೇಲೂ ಜ್ಞಾನ-ವಿಜ್ಞಾನದ ಪ್ರಗತಿಗೆ ಮುಡಿಪು

ಪಶ್ಚಿಮ ಬಂಗಾಲದಲ್ಲಿ ದೇಹದಾನ ಅಭಿಯಾನವನ್ನು ಆರಂಭಿಸಿ ಅದಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ ಬೃಜೊ ರಾಯ್ ಕಳೆದ ವಾರ ಕೊವಿಡ್ ನಿಂದ ನಿಧನರಾದರು. ಅವರು ತಮ್ಮ ದೇಹವನ್ನು ಕೊರೊನ



ವೈರಾಣು ದೇಹದಲ್ಲಿ ಉಂಟು ಮಾಡುವ ಪರಿಣಾಮದ ಬಗ್ಗೆ ಅರಿಯಲು ನೆರವಾಗುವ ರೋಗನಿದಾನಶಾಸ್ತ್ರ ಶವಪರೀಕ್ಷೆಗೆ (ಪೆಥಾಲಾಜಿಕಲ್ ಅಟಾಪ್ಸಿ) ಒಪ್ಪಿಸಿದ ದೇಶದ ಮೊದಲ ವ್ಯಕ್ತಿಯೆನಿಸಿದ್ದಾರೆ.

ಮೇ 17ರಂದು ಕೊವಿಡ್‌ನಿಂದಾಗಿ ನಿಧನರಾದ ಜ್ಯೋತ್ಸ್ನಾ ಬೋಸ್ ಈ ರೀತಿಯ ಪೆಥಾಲಾಜಿಕಲ್ ಅಟಾಪ್ಸಿಗೆ ದೇಹದಾನ ಮಾಡಿದ ದೇಶದ ಮೊದಲ ಮಹಿಳೆ ಎಂದೆನಿಸಿಕೊಂಡಿದ್ದಾರೆ.

ಇವರ ಶವಪರೀಕ್ಷೆಯನ್ನು ಆರ್ ಜಿ ಕರ್ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಮೇ 18ರಂದು ನಡೆಸಲಾಯಿತು ಎಂದು ಅವರ ಮೊಮ್ಮಗಳೂ ಅಗಿರುವ ಡಾ.ತೀಸ್ತಾ ಬಸು ಹೇಳಿದ್ದಾರೆ. "ಕೊರೊನ ವೈರಸ್ ಒಂದು ಹೊಸ ರೋಗವಾದ್ದರಿಂದ ಅದರ ಬಗ್ಗೆ ನಮಗೆ ಹೆಚ್ಚೇನೂ ತಿಳಿದಿಲ್ಲ. ನಮ್ಮ ಅಂಗಗಳ ಮೇಲೆ ಅದರ ಪೂರ್ಣ ಪರಿಣಾಮವನ್ನು ತಿಳಿಯಬೇಕಾಗಿದೆ. ರೋಗನಿದಾನಶಾಸ್ತ್ರೀಯ ಶವಪರೀಕ್ಷೆ ಅದಕ್ಕೆ ನೆರವಾಗುತ್ತದೆ" ಎಂದು ರೋಗನಿದಾನಶಾಸ್ತ್ರ (ಪೆಥಾಲಜಿ)ಯಲ್ಲಿ ಎಂ.ಡಿ. ಅಧ್ಯಯನ ಮಾಡುತ್ತಿರುವ ಅವರು ಹೇಳಿದ್ದಾರೆ.

1927ರಲ್ಲಿ ಈಗ ಬಾಂಗ್ಲಾದೇಶದಲ್ಲಿರುವ ಚಿತ್ತಗಾಂಗ್‌ನಲ್ಲಿ ಜನಿಸಿದ ಜ್ಯೋತ್ಸ್ನಾ ಬೋಸ್



ಎರಡನೇ ಮಹಾಯುದ್ಧದಲ್ಲಿ ತಂದೆಯನ್ನು ಕಳಕೊಂಡ ನಂತರ ಶಿಕ್ಷಣ ಮುಂದುವರೆಸಲಾಗದೆ ಬ್ರಿಟಿಶ್ ಟೆಲಿಫೋನ್ಸ್‌ನಲ್ಲಿ ಆಪರೇಟರ್ ಆಗಿ ಸೇರಿದರು. 1946ರಲ್ಲಿ ರಿನ್ ಬಡಾಯದ ವಿರುದ್ಧ ಅಂಚೆ-ತಂತಿ ನೌಕರರ ಮುಷ್ಕರದಲ್ಲಿ ಭಾಗವಹಿಸಿದ್ದ ಅವರು ಮುಂದೆ 1956ರಲ್ಲಿ ಕಮ್ಯುನಿಸ್ಟ್ ಪಕ್ಷವ್ನನು ಸೇರಿ ಕಾರ್ಮಿಕ ಚಳುವಳಿಯಲ್ಲಿ ಮತ್ತು ಸಾಮಾಜಿಕ ಚಳುವಳಿಯಲ್ಲಿ ಸಕ್ರಿಯರಾಗಿದ್ದವರು.

ಪುಟ 11 ರಿಂದ

ಜನತಾ ಪಕ್ಷದ ಆಳ್ವಿಕೆಯಲ್ಲಿ ಕಾರ್ಮಿಕ ವರ್ಗ



ಗಂಟೆಗಳ ವಾಕ್-ಔಟ್ ಮುಷ್ಕರಗಳು ನಡೆದವು.

ಭಾರತದ ಅತಿದೊಡ್ಡ ಪ್ರಕಾಶನ ಸಾಮ್ರಾಜ್ಯ ಟೈಮ್ಸ್-ಆಫ್ ಇಂಡಿಯಾ ಗುಂಪಿನ, 4,500 ಪತ್ರಕರ್ತರು ಮತ್ತು ಪತ್ರಕರ್ತರೇತರ ಕೆಲಸಗಾರರು, ವೇತನ ನ್ಯಾಯಮಂಡಳಿಯ ತೀರ್ಪಿನ ಅನುಷ್ಠಾನ ಬಾಕಿ ಉಳಿದಿದ್ದ ಕಾರಣ 1 ಜನವರಿ 1978 ರಿಂದ ಜಾರಿಗೆ ಬರುವಂತೆ ಸಾರ್ವತ್ರಿಕವಾಗಿ ಮಾಸಿಕ ರೂ. 150. ವೇತನ ಹೆಚ್ಚಳಕ್ಕೆ ಒತ್ತಾಯಿಸಿ, 1979 ರ ಜೂನ್ ಮಧ್ಯದಿಂದ ದೇಶವ್ಯಾಪಿ ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿದರು.

ಜನತಾ ಸರ್ಕಾರದಲ್ಲಿ ಆಂತರಿಕ ಬಿರುಕು ಮತ್ತು ಅದರ ಕುಸಿತ

ಸಿಡಿಎಸ್(ಕಡ್ಡಾಯ ಠೇವಣಿ ಸ್ಕಿಂ) ಬಾಕಿ ಹಣವನ್ನು ಮರುಪಾವತಿಸಲು ಸರ್ಕಾರ ನಿರಾಕರಿಸಿತು. ಬದಲಾಗಿ ಸುಗ್ರೀವಾಜ್ಞೆ ಮೂಲಕ ಸಿಡಿಎಸ್ ಅವಧಿಯನ್ನು ವಿಸ್ತರಿಸಲಾಯಿತು. ಎಲ್ಲೆಡೆ ಜನಸಾಮಾನ್ಯರಲ್ಲಿ ಅಸಮಾಧಾನವಿತ್ತು. ಉತ್ತರಪ್ರದೇಶ ಮತ್ತು ಕೇರಳದಲ್ಲಿ ಕೇಂದ್ರ ಮೀಸಲು ಪೊಲೀಸ್ ಸಿಬ್ಬಂದಿ ಮುಷ್ಕರ ನಡೆಸಿದರು. ಕೇರಳದಲ್ಲಿ 54 ದಿನಗಳವರೆಗೆ ಮುಷ್ಕರ ಮುಂದುವರೆಯಿತು.

ಆದರೆ ಜನತಾ ಪಕ್ಷ ಮತ್ತು ಸರ್ಕಾರದ ಜನಸಂಘ ಘಟಕದ ಕೋಮುವಾದಿ ವಿಧಾನದ ಬಗ್ಗೆ ಜನತಾ ಪಕ್ಷ ಮತ್ತು ಸರ್ಕಾರದಲ್ಲಿ ಅತ್ಯಂತ ಗಂಭೀರ ಸಮಸ್ಯೆ ಬೆಳೆಯಿತು. ಅಂತಿಮವಾಗಿ ಜನತಾ ಪಕ್ಷದ ರಾಜನಾರಾಯಣ್ ಮತ್ತು ಕಾಂಗ್ರೆಸ್ (ಐ) ಪಕ್ಷದ ವೈ.ಬಿ. ಚವಾಣ್ ಅವರು ಮೊರಾರ್ಜಿ ದೇಸಾಯಿ ಸರ್ಕಾರದ ವಿರುದ್ಧ ಲೋಕಸಭೆಯ 56 ಎಡ ಸದಸ್ಯರು ಬೆಂಬಲಿಸಿದ ಅವಿಶ್ವಾಸ ನಿರ್ಣಯ ಮಂಡಿಸಿದರು. ಅದು ಜುಲೈ 15, 1979 ರಂದು ಮೊರಾರ್ಜಿ ದೇಸಾಯಿ ಅವರು ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಕಾರಣವಾಯಿತು ಮತ್ತು ಸರ್ಕಾರ ಕುಸಿಯಿತು.

ಮೊರಾರ್ಜಿ ದೇಸಾಯಿ ಸರ್ಕಾರದ ಗೃಹ ಸಚಿವ ಚರಣ್ ಸಿಂಗ್ ಅವರು ಪ್ರಧಾನ ಮಂತ್ರಿ ಸ್ಥಾನಕ್ಕಾಗಿ ತಮ್ಮ ಹಕ್ಕನ್ನು ಪ್ರತಿಪಾದಿಸಿದರು. ಅವರನ್ನು ಬೆಂಬಲಿಸಲು, ಎಡ ಪಕ್ಷಗಳು ಚರಣ್ ಸಿಂಗ್ ಅವರನ್ನು ಈ ಕಾರ್ಮಿಕವರ್ಗದ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದವು. ಬೇಡಿಕೆಗಳನ್ನು ಚರಣ್ ಸಿಂಗ್ ಒಪ್ಪಿಕೊಂಡರು ಮತ್ತು ಅವರು ಪ್ರಧಾನಿಯಾಗಿ ಆಯ್ಕೆಯಾದರು. ಆದರೆ ರಾಜಕೀಯ ಪ್ರಕ್ಷುಬ್ಧತೆ ಮತ್ತು ಅನಿಶ್ಚಿತತೆಗಳಲ್ಲಿ ಮತ್ತು ಜನತಾ ಪಕ್ಷದಲ್ಲಿನ ಬಿರುಕುಗಳ ದೃಷ್ಟಿಯಿಂದ ಅವರು ಕೇವಲ 24 ದಿನಗಳವರೆಗೆ ಮುಂದುವರಿಯಲು ಸಾಧ್ಯವಾಯಿತು; ಅವರು ಆಗಸ್ಟ್ 20, 1979 ರಂದು ರಾಜೀನಾಮೆ ನೀಡಿದರು. 1980 ರ ಜನವರಿಯಲ್ಲಿ ದೇಶದಲ್ಲಿ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ಅವರು ಆದೇಶಿಸಿದರು (ಆದಾಗ್ಯೂ, ಅವರ ಕಿರು-ಅವಧಿಯ ಮಂತ್ರಿಮಂಡಲವು ರೈಲ್ವೆ ನೌಕರರಿಗೆ ಮತ್ತು ನಂತರ ಅಂಚೆ-ತಂತಿ ಮತ್ತು ರಕ್ಷಣಾ ಉತ್ಪಾದನಾ ನೌಕರರಿಗೆ ಉತ್ಪಾದಕತೆ-ಆಧಾರಿತ ಬೋನಸ್ ಅನ್ನು ಪಾವತಿಸಿತು.)

ಆಗಸ್ಟ್ 20, 1979 ರಂದು ಲೋಕಸಭೆಯನ್ನು ರಾಷ್ಟ್ರಪತಿಗಳು ವಿಸರ್ಜಿಸಿದರು ಮತ್ತು ಚರಣ್ ಸಿಂಗ್ ಅವರನ್ನು ಕೇರ್-ಟೇಕರ್ ಪ್ರಧಾನಿಯಾಗಿ ಮುಂದುವರಿಯುವಂತೆ ಕೇಳಲಾಯಿತು.

ಚರಣ್ ಸಿಂಗ್ ಮಂತ್ರಿಮಂಡಲದ 24 ದಿನಗಳ ಅಲ್ಪಾವಧಿಯಲ್ಲಿ ಮತ್ತು 1980 ರ ಜನವರಿಯಲ್ಲಿ ಸಾರ್ವತ್ರಿಕ ಚುನಾವಣೆಯ ತನಕ ಅವರು ಕೇರ್-ಟೇಕರ್ ಪ್ರಧಾನಮಂತ್ರಿಯಾಗಿದ್ದ ಅವಧಿಯಲ್ಲಿ, ಈ ಸರ್ಕಾರವೂ ಅದರ ಹಿಂದಿನ ಸರ್ಕಾರ ಮಾಡಿದಂತೆ ಕಾರ್ಮಿಕ ವಿರೋಧಿ ನೀತಿಗಳನ್ನು ಮುಂದುವರಿಸಿದ್ದರಿಂದ ಕಾರ್ಮಿಕ ವರ್ಗದ ಹೋರಾಟಗಳು ಅಬಾಧಿತವಾಗಿ ಮುಂದುವರೆದವು.

ಆದ್ದರಿಂದ ಭೂತಲಿಂಗಂ ಸಮಿತಿಯ ವರದಿ, ಕೈಗಾರಿಕಾ ಸಂಬಂಧಗಳ ಮಸೂದೆ, ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆ ಮಸೂದೆಗಳನ್ನು ಹಿಂದೆಗೆದುಕೊಳ್ಳುವದು, ಬೋನಸ್ ಕಾಯ್ದೆ ಮತ್ತು 8.33% ಬೋನಸ್ ಪುನಃ ಪರಿಚಯಿಸುವುದು, ವೇತನ-ಸ್ತಂಭನ ನೀತಿಯನ್ನು, ವಿಕ್ಟಿಮೈಜೇಶನ್ ಗಳನ್ನು ರದ್ದುಪಡಿಸುವುದು, ಇತ್ಯಾದಿಗಳನ್ನು ಒತ್ತಾಯಿಸಿ ಹೋರಾಟ ಮುಂದುವರೆಯಿತು.

ಈ ಅವಧಿಯ ಅತ್ಯಂತ ಮಹತ್ವದ ಮುಷ್ಕರ ಕ್ರಮವೆಂದರೆ 27 ಜೂನ್ 1979 ರಿಂದ ದೆಹಲಿ ಜವಳಿ ಕಾರ್ಮಿಕರ ಅನಿರ್ದಿಷ್ಟ ಮುಷ್ಕರ. ವೇತನ-ರಚನೆಯನ್ನು ಮರುಪರಿಶೀಲಿಸುವಂತೆ, ತಾತ್ಕಾಲಿಕ ವೇತನ ಹೆಚ್ಚಳ, ಡಿಎ ಹೆಚ್ಚಳ, ಜೀವನ-ವೆಚ್ಚ ಸೂಚ್ಯಂಕದ ದೋಷಗಳ ತಿದ್ದುಪಡಿ ಇತ್ಯಾದಿಗಳಿಗೆ ಒತ್ತಾಯಿಸಿ 24,000 ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದರು. ಮುಷ್ಕರವು 4 ತಿಂಗಳವರೆಗೆ ಮುಂದುವರೆಯಿತು.

ಕರ್ನಾಟಕದಲ್ಲಿ ಜವಳಿ ಕಾರ್ಮಿಕರು ಮಧ್ಯಂತರ ಪರಿಹಾರಕ್ಕಾಗಿ 1979 ರ ಸೆಪ್ಟೆಂಬರ್ 1 ರಂದು ಮುಷ್ಕರ ಮಾಡಿದರು.

ಬೆಂಗಳೂರು ಸಮಾವೇಶದಲ್ಲಿ ನಿರ್ಧರಿಸಿದಂತೆ ಇಪ್ಪತ್ತು ಲಕ್ಷ ಸಾರ್ವಜನಿಕ ವಲಯದ ಕಾರ್ಮಿಕರು, 14 ಸೆಪ್ಟೆಂಬರ್ 1979 ರಂದು ಯಶಸ್ವಿ ಸಾಂಕೇತಿಕ ಮುಷ್ಕರವನ್ನು ನಡೆಸಿದರು. ಅವರೊಡನೆ ಬ್ಯಾಂಕ್, ಎಲ್‌ಐಸಿ ಮತ್ತು ಆರ್.ಬಿ.ಐ. ಉದ್ಯೋಗಿಗಳು ಸಹ ಸೇರಿದರು.

11 ಅಕ್ಟೋಬರ್ 1979 ರಂದು ದೆಹಲಿಯ ಸುಮಾರು ಐದು ಲಕ್ಷ ಕೈಗಾರಿಕಾ ಕಾರ್ಮಿಕರು ಮುಷ್ಕರನಿರತ ಜವಳಿ ಕಾರ್ಮಿಕರಿಗೆ ಬೆಂಬಲವಾಗಿ ಯಶಸ್ವಿ 'ದೆಹಲಿ ಬಂದ್' ಆಚರಿಸಿದರು. ಈ ದಿನ, ದೆಹಲಿಯ ಎಲ್ಲಾ ಪ್ರಮುಖ ಕೈಗಾರಿಕಾ ಸಂಸ್ಥೆಗಳು ಮತ್ತು ಕೈಗಾರಿಕಾ-ವಸಾಹತುಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟವು ಮತ್ತು ಒಂದು ಕಾರ್ಖಾನೆ ಸಹ ಕೆಲಸ ಮಾಡಲಿಲ್ಲ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಈ ಸಮರಶೀಲ ಸೌಹಾರ್ದ ಕ್ರಮವನ್ನು ಬೆಂಬಲಿಸಿದವು.

ಅಷ್ಟರಲ್ಲಿ, ರೈಲ್ವೆ ನೌಕರರೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಬೋನಸ್‌ಗಾಗಿ ತಮ್ಮ ಹೋರಾಟವನ್ನು ತೀವ್ರಗೊಳಿಸಿದರು. ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಕರೆಯ ಮೇರೆಗೆ ರಾಜ್ಯ ನೌಕರರು ಸೆಪ್ಟೆಂಬರ್ 19, 1979 ರಂದು ಬೋನಸ್ ದಿನವನ್ನು ಆಚರಿಸಿದರು. ಕೇಂದ್ರ ನೌಕರರ ಸಂಘಗಳು 9 ನವೆಂಬರ್ 1979 ರಂದು ದೆಹಲಿಯಲ್ಲಿ ನಡೆದ ಸಮಾವೇಶದಲ್ಲಿ ಸಭೆ ಸೇರಿ 8.33% ಬೋನಸ್ ಗಾಗಿ ಒತ್ತಾಯಿಸಿದವು..

ಕೇರ್-ಟೇಕರ್ ಮಂತ್ರಿಮಂಡಲದ ಹಣಕಾಸು ಸಚಿವರು ಈ ಮಧ್ಯೆ ಎ.ಐ.ಆರ್.ಎಫ್. ಮತ್ತು ಎನ್.ಎಫ್.ಐ.ಆರ್. ಜೊತೆ ಉತ್ಪಾದಕತೆ-ಸಂಬಂಧಿತ ಬೋನಸ್ ಕುರಿತು ಚರ್ಚಿಸಿದರು. 13 ನವೆಂಬರ್ 1979 ರಂದು ರೈಲ್ವೆ ಸಚಿವರು ರೈಲ್ವೆ ನೌಕರರಿಗೆ ಉತ್ಪಾದಕತೆ-ಸಂಬಂಧಿತ ಬೋನಸ್ ಮಂಜೂರು ಮಾಡುವುದಾಗಿ ಘೋಷಿಸಿದರು 16 ನವೆಂಬರ್ 1979 ರಂದು ಸಂಪರ್ಕ ಸಚಿವರು ರೈಲ್ವೆ ಕೆಲಸಗಾರರ ಮಾದರಿಯಲ್ಲಿ ಅಂಚೆ-ತಂತಿ ಉದ್ಯೋಗಿಗಳಿಗೆ ಬೋನಸ್ ಯೋಜನೆಯನ್ನು ಘೋಷಿಸಿದರು.

1980 ರ ಜನವರಿಯಲ್ಲಿ ನಡೆದ ಲೋಕಸಭೆಯ ಚುನಾವಣೆಯಲ್ಲಿ ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಬಂದರು ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ (ಐ) ಸರ್ಕಾರವನ್ನು ಸ್ಥಾಪಿಸಲಾಯಿತು. ಭಾರತದ ಇತಿಹಾಸದಲ್ಲಿ ಹೊಸ ರಾಜಕೀಯ ಅಧ್ಯಾಯ ಪ್ರಾರಂಭವಾಯಿತು.

"ಚಿಲಿಯಲ್ಲಿ ಅಲೆಂದೆ ಮತ್ತೆ ನಗೆ ಬೀರಿದ್ದಾರೆ" ಒಂದು ಪತ್ರಿಕೆ ಚಿಲಿಯ ಸಂವಿಧಾನ ಸಭೆ ಮತ್ತು ಪ್ರಾದೇಶಿಕ ಚುನಾವಣೆಗಳಲ್ಲಿ ಎಡ – ಪ್ರಗತಿಪರ ಪಕ್ಷ/ಶಕ್ತಿ/ವ್ಯಕ್ತಿಗಳು ಸಾಧಿಸಿದ ಅದ್ಬುತ ವಿಜಯವನ್ನು ಈ ರೀತಿ ಬಣ್ಣಿಸಿದ್ದಾರೆ. 1970ರಲ್ಲಿ ಚಿಲಿಯ ಸೋಶಲಿಸ್ಟ್ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾದ ಅಲೆಂದೆ ಅವರ ಸರಕಾರವನ್ನು, 1973ರಲ್ಲಿ ಜನರಲ್ ಅಗಸ್ಟೊ ಪಿನೋಶೇ ಸಿಐಎ ಬೆಂಬಲಿತ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸಿ ಅವರ ಹತ್ಯೆಯನ್ನು ಮಾಡಲಾಗಿತ್ತು. ಆನಂತರ ಪಿನೋಶೆ ಸ್ಥಾಪಿಸಿದ ಸರ್ವಾಧಿಕಾರಿ ಸಂವಿಧಾನ ಮಿಲಿಟರಿ ನರಮೇಧ ಮತ್ತು ಅದನ್ನು ನಡೆಸಿದವರಿಗೆ ಸಾಮೂಹಿಕ ವಿನಾಯಿತಿ ಕೊಟ್ಟದ್ದಲ್ಲದೆ, ಚಿಲಿಯ ಜನಪರ–ಪ್ರಗತಿಪರ ನೀತಿಗಳಿಗೆ ಮಾರಕವಾಗುವ ಮೂಲಕ ಶಾಶ್ವತವಾಗಿ ಉರುಳಾಗಿತ್ತು. ಪಿನೋಶೆ ಸಂವಿಧಾನ ಬದಲಾಯಿಸುವುದು ಎಡ–ಪ್ರಗತಿಪರ ಚಳುವಳಿಗಳ ನಿತ್ಯಮಂತ್ರವಾಗಿತ್ತು. ಅಲೆಂದೆ ಈ ಚಳುವಳಿಯ ಪ್ರತೀಕವಾಗಿದ್ದರು.



'ಚಿಲಿಯಲ್ಲಿ ಅಲೆಂದೆ ಮತ್ತೆ ನಗೆ ಬೀರಿದ್ದಾರೆ'

ಸಂವಿಧಾನ ಸಭೆ, ಪ್ರಾದೇಶಿಕ ಚುನಾವಣೆಗಳಲ್ಲಿ ಎಡ–ಪ್ರಗತಿಪರ ಶಕ್ತಿಗಳಿಗೆ ಅದ್ಬುತ ಗೆಲುವು



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಚಿಲಿ ದೇಶದ 'ಹೊಸ ಸಂವಿಧಾನ' ವನ್ನು ಬರೆಯುವ ಜವಾಬ್ದಾರಿಯನ್ನು ಹೊಂದಿರುವ 'ಸಾಂವಿಧಾನಿಕ ಸಭೆ'ಗೆ ಮೇ 15 ಮತ್ತು 16 ರಂದು ಚುನಾವಣೆ ನಡೆಯಿತು. 155 ಸದಸ್ಯರನ್ನು ಆಯ್ಕೆ ಮಾಡಲು 60 ಲಕ್ಷಕ್ಕೂ ಹೆಚ್ಚು ಚಿಲಿಯರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಚಿಲಿಯ 'ಚುನಾವಣಾ ಸೇವೆ (ಸರ್ವೆಲ್) ಪ್ರಾಥಮಿಕ ಫಲಿತಾಂಶಗಳನ್ನು ಪ್ರಕಟಿಸಿತು. ಅದರ ಪ್ರಕಾರ, ಸ್ವತಂತ್ರ ಮತ್ತು ಎಡಪಂಥೀಯ ಪಡೆಗಳು ಅದ್ಬುತ ವಿಜಯವನ್ನು ಗಳಿಸಿ, 'ಸಾಂವಿಧಾನಿಕ ಸಮಾವೇಶ' ದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದಿವೆ. ಸಂವಿಧಾನ ಬರವಣಿಗೆಯ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ 'ಸಾಮಾಜಿಕ ಸುಧಾರಣೆ' ಗಳನ್ನು ತಡೆಯುವುದಾಗಿ ಪ್ರತಿಜ್ಞೆ ಮಾಡಿದ್ದ ಮತ್ತು ಹೊಸ ಸಂವಿಧಾನಕ್ಕೆ ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸಿದ್ದ ಬಲಪಂಥೀಯ ಶಕ್ತಿಗಳು ದೊಡ್ಡ ಸೋಲನ್ನು ಅನುಭವಿಸಿವೆ.

ಶೇ. 99.13% ಮತಗಳನ್ನು ಎಣಿಸಿದ ನಂತರ, 2019 ರ ಅಕ್ಟೋಬರ್ ನಲ್ಲಿ, ಸಾಮಾಜಿಕ ದಂಗೆಯ ಸಂದರ್ಭದಲ್ಲಿ ಹೊರಹೊಮ್ಮಿದ ವಿವಿಧ ಸಾಮಾಜಿಕ ಚಳುವಳಿಗಳು, ಕಾರ್ಮಿಕ ಸಂಘಗಳು ಮತ್ತು ಇತರ ಜನಪ್ರಿಯ ಸಂಸ್ಥೆಗಳ ಸ್ವತಂತ್ರ ಅಭ್ಯರ್ಥಿಗಳು 48 ಸ್ಥಾನಗಳನ್ನು ಗೆದ್ದಿದ್ದಾರೆ. ಎಡಪಂಥೀಯ ರಾಜಕೀಯ ಪಕ್ಷ ಗಳಾದ 'ಕಮ್ಯುನಿಸ್ಟ್ ಪಾರ್ಟಿ ಆಫ್ ಚಿಲಿ' ಬ್ರಾಡ್ ಫ್ರಂಟ್, ಮತ್ತು ಇತರ ನವ–ಉದಾರವಾದಿ ವಿರೋಧಿ ಪಕ್ಷಗಳಿಂದ ಕೂಡಿದ "ನಾನು ಸ್ವಾಭಿಮಾನವನ್ನು ಗೌರವಿಸುತ್ತೇನೆ" ಎಂಬ ಪಟ್ಟಿಯು 28 ಸ್ಥಾನಗಳನ್ನು ಗೆದ್ದಿದೆ. ಕೇಂದ್ರ–ಎಡ, ಸಾಮಾಜಿಕ ಪ್ರಜಾಪ್ರಭುತ್ವ ಪಕ್ಷಗಳನ್ನು ಒಳಗೊಂಡಿರುವ "ಅನುಮೋದನೆ" ಪಟ್ಟಿಯು 25 ಸ್ಥಾನಗಳನ್ನು ಪಡೆದುಕೊಂಡಿದೆ.

ಆಳುವ ಕೂಟ ಸೇರಿದಂತೆ ಬಲಪಂಥೀಯ ಪಕ್ಷಗಳ ಒಕ್ಕೂಟವಾದ "ಚಿಲಿಗಾಗಿ ಹೋಗೋಣ" ಪಟ್ಟಿಯು 37 ಸ್ಥಾನಗಳನ್ನು ಪಡೆದುಕೊಂಡಿದೆ. 'ಸಾಂವಿಧಾನಿಕ ಸಮಾವೇಶ'ದಲ್ಲಿ ಸ್ಥಳೀಯ ಸಮುದಾಯಗಳಿಗೆ ಮೀಸಲಾಗಿರುವ 17 ಸ್ಥಾನಗಳ ಫಲಿತಾಂಶಗಳನ್ನು ಈ ವಾರದ ಕೊನೆಯಲ್ಲಿ ಪ್ರತ್ಯೇಕವಾಗಿ ಹಂಚಿಕೊಳ್ಳಲಾಗುವುದು.

ಈ ಚುನಾವಣೆಗಳ ಜೊತೆಗೆ, 2021–2025ರ ಅವಧಿಗೆ 16 ಪ್ರಾದೇಶಿಕ ಗವರ್ನರ್ ಗಳು, 345 ಮೇಯರ್ ಗಳು ಮತ್ತು 2,240 ಪುರಸಭೆಯ ಕೌನ್ಸಿಲರ್ ಗಳನ್ನು ಆಯ್ಕೆ ಮಾಡಲು ಪ್ರಾದೇಶಿಕ ಮತ್ತು ಪುರಸಭೆ ಚುನಾವಣೆಗಳು ಕೂಡ ನಡೆದವು. ಈ ಚುನಾವಣೆಗಳ ಅಂತಿಮ ಫಲಿತಾಂಶಗಳು ವಾರದ ಅಂತ್ಯದಲ್ಲಿ ಪ್ರಕಟಗೊಳ್ಳುವುದು. ಆದಾಗ್ಯೂ ಲಭ್ಯವಿರುವ ಪ್ರಾಥಮಿಕ ವರದಿಗಳ ಅನುಸಾರದಂತೆ, ಫಲಿತಾಂಶಗಳು ಆಡಳಿತ ಒಕ್ಕೂಟ' ಕ್ಕೆ ಇದೇ ರೀತಿಯ ಹೊಡೆತವನ್ನು ಸೂಚಿಸುತ್ತಿವೆ ಎನ್ನಲಾಗಿದೆ. ಇದರಲ್ಲಿ ಪ್ರಮುಖ ಮೇಯರ್ ಗಳು ಅಧಿಕಾರವನ್ನು ಮತ್ತು ಪ್ರಾದೇಶಿಕ ಸರ್ಕಾರಗಳನ್ನು ಕಳೆದುಕೊಳ್ಳುವುದು ಸ್ಪಷ್ಟ ಗೊಂಡಿದೆ. ಏತನ್ಮಧ್ಯೆ, ಎಡಪಂಥೀಯ ಪಕ್ಷಗಳು ತಮ್ಮ ಪುರಸಭೆಗಳನ್ನು ಉಳಿಸಿಕೊಳ್ಳುವ ಜೊತೆಗೆ, ರಾಜಧಾನಿ ಸ್ಯಾಂಟಿಯಾಗೊ ಸೇರಿದಂತೆ ದೇಶಾದ್ಯಂತ ಹಲವಾರು ಹೊಸ ಪ್ರದೇಶಗಳಲ್ಲಿ ವಿಜಯವನ್ನು ತಮ್ಮದಾಗಿಸಿ ಕೊಂಡಿವೆ.

ಲಭ್ಯವಿರುವ ಪ್ರಾಥಮಿಕ ಫಲಿತಾಂಶಗಳ ಪ್ರಕಾರ, ಪ್ರಮುಖ ಸಾಮಾಜಿಕ ಮುಖಂಡ ಮತ್ತು ಮಾನವ ಹಕ್ಕುಗಳ ರಕ್ಷಕ ರೊಡ್ರಿಗೋ ಮುಂಡಾಕಾ ದೇಶದ ಎರಡನೇ ಪ್ರಮುಖ ಪ್ರದೇಶವಾದ 'ವಾಲ್ಪಾರಾಸೊ' ಪ್ರದೇಶದ ಗವರ್ನರ್ ಆಗಿ, ಬ್ರಾಡ್ ಫ್ರಂಟ್ ನ ಜಾರ್ಜ್ ಶಾರ್ಪ್' ವಾಲ್ಪಾರಾಸೊ' ದ ಮೇಯರ್ ಆಗಿ, ಬ್ರಾಡ್ ಫ್ರಂಟ್ ನ ಮಕರೆನಾ ರಿಪಮೊಂಟಿ ಸಾಂಪ್ರದಾಯಿಕವಾಗಿ ಬಲಪಂಥೀಯರಿಂದ ಪ್ರಾಬಲ್ಯ ಹೊಂದಿರುವ 'ವಿಯಾ ಡೆಲ್ ಮಾರ್ 'ನ ಮೇಯರ್ ಆಗಿ ಮತ್ತು ಡೇನಿಯಲ್ ಜಾಡು ಕಮ್ಯುನಿಸ್ಟ್ ಪಕ್ಷದ ರೆಕೊಲೆಟಾದ ಮೇಯರ್ ಆಗಿದ್ದಾರೆ.

ಚಿಲಿಯ ಅಧ್ಯಕ್ಷ ಸೆಬಾಸ್ಟಿಯನ್ ಪಿನೆರಾ' ಅವರು ಫಲಿತಾಂಶಗಳನ್ನು ಉಲ್ಲೇಖಿಸಿ ರಾಷ್ಟವನ್ನು ಉದ್ದೇಶಿಸಿ ಮಾತನಾಡುತ್ತಾ, "ಚುನಾವಣೆಯಲ್ಲಿ ಆಡಳಿತ ಪಕ್ಷ ಮತ್ತು ಸಾಂಪ್ರದಾಯಿಕ ಪಕ್ಷಗಳ ಅಗಾಧ ಸೋಲು ಮತ್ತು ಅವರ ಬಗ್ಗೆ ಜನತೆಯ ಭಾರಿ ಅಸಮಾಧಾನವನ್ನು ಗಂಭೀರವಾಗಿ ಗುರುತಿಸಿದ್ದಾರೆ." ನಾಗರಿಕರು ಸರ್ಕಾರಕ್ಕೆ ಮತ್ತು ಎಲ್ಲಾ ಸಾಂಪ್ರದಾಯಿಕ ರಾಜಕೀಯ ಪಡೆಗಳಿಗೆ ಸ್ಪಷ್ಟ ಮತ್ತು ಬಲವಾದ ಸಂದೇಶವನ್ನು ಈ ಮೂಲಕ ರವಾನಿಸಿದ್ದಾರೆ. ನಾವು ನಾಗರಿಕರ ಬೇಡಿಕೆಗಳು ಮತ್ತು ಆಕಾಂಕ್ಷೆಗಳನ್ನು ಸಮರ್ಪಕವಾಗಿ ಗುರುತಿಸಿ ಸ್ಪಂದಿಸುವಲ್ಲಿ ವಿಫಲವಾಗಿರುವುದನ್ನು ಚುನಾವಣೆಯ ಫಲಿತಾಂಶಗಳು ಸ್ಪಷ್ಟಗೊಳಿಸಿವೆ. ಹೊಸ ಅಭಿವ್ಯಕ್ತಿಗಳು ಮತ್ತು ನಾಯಕತ್ವದಿಂದ ನಮಗೆ ಸವಾಲು ಎದುರಾಗಿದೆ. ಜನರ ಸಂದೇಶವನ್ನು ನಮ್ರತೆ ಮತ್ತು ಗಮನದಿಂದ ಕೇಳುವುದು ನಮ್ಮ ಕರ್ತವ್ಯ" ಎಂದು ತಿಳಿಸಿದ್ದಾರೆ.

ಬಹುಪಾಲು ಘಟಕಗಳು ಸ್ಪಷ್ಟವಾಗಿ ರಚನಾತ್ಮಕ ಬದಲಾವಣೆಗಳ ಪರವಾಗಿವೆ. ಪ್ರಮುಖವಾಗಿ ಕಳೆದ ಐದು ದಶಕಗಳಿಂದ ಜಾರಿಯಲ್ಲಿರುವ ಆರ್ಥಿಕ ಮತ್ತು ರಾಜಕೀಯ ಮಾದರಿಗೆ ವಿರುದ್ಧವಾಗಿವೆ. 1980 ರಲ್ಲಿ ಜನರಲ್ ಅಗಸ್ಟೊ ಪಿನೋಶೆ, (1973–1990) ರ ಮಿಲಿಟರಿ ಸರ್ವಾಧಿಕಾರದ ಅಡಿಯಲ್ಲಿ ಸಂವಿಧಾನವನ್ನು ರೂಪಿಸಿ ಹೇರಲಾಗಿತ್ತು. ಅದರ ಬದಲಾಣೆಗೆ ಸ್ಪಷ್ಟವಾದ ಬಲವಾದ ಒತ್ತಾಯದ ಅಭಿವ್ಯಕ್ತಿ ಈ ಫಲಿತಾಂಶವಾಗಿದೆ.

ಚಿಲಿಯ ಸಮಾಜವು, ಸಾಮಾಜಿಕ – ಆರ್ಥಿಕ ಅಸಮಾನತೆಯನ್ನು ಕಿತ್ತೊಗೆದು, ಪ್ರಗತಿಪರ ಬದಲಾವಣೆಗಳನ್ನು ಸಾಧಿಸಲು ಮತ್ತು ಪ್ರಸ್ತುತ ಜಾರಿಯಲ್ಲಿರುವ ಪಿನೋಶೆ ಸರ್ವಾಧಿಕಾರಿ ಪ್ರಭುತ್ವದ ಸಂವಿಧಾನದಿಂದ ವಿಮೋಚನೆಗೊಳ್ಳಲು ಒಂದು ಹೆಜ್ಜೆ ಮುನ್ನಡೆಗೆ ಈ ಫಲಿತಾಂಶ ನಾಂದಿಯಾಗಿದೆ.

ಚಿಲಿಯಲ್ಲಿ ಕಳೆದ ಎರಡು ವರ್ಷಗಳ ಹಿಂದೆ ದಂಗೆಯು ಪ್ರೌಡ ಶಾಲಾ ವಿದ್ಯಾರ್ಥಿಗಳು 'ಮೆಟ್ರೋ ಸಾರಿಗೆ ಶುಲ್ಕ ಹೆಚ್ಚಳ'ವನ್ನು ತಿರಸ್ಕರಿಸುವುದರೊಂದಿಗೆ ಪ್ರಾರಂಭಿಸಿದರು. ಈ ಹೋರಾಟಕ್ಕೆ ವಿವಿಧ ಚಳುವಳಿಗಳಲ್ಲಿನ ಪ್ರಗತಿಪರರು, ಮತ್ತು ಹೆಚ್ಚಿನ ಜನಸಂಖ್ಯೆಯನ್ನು ಪಾಲ್ಗೊಳಿಸಿವಲ್ಲಿ ವಿದ್ಯಾರ್ಥಿ ಗಳು ಆರಂಭಿಸಿದ ಅಂದಿನ ಚಳುವಳಿ ದೊಡ್ಡ ಪ್ರಮಾಣದಲ್ಲಿ ಆಕರ್ಷಿಸಲ್ಪಟ್ಟಿತು. ಅದು ಈ ಮಟ್ಟಕ್ಕೆ ಯಶಸ್ವಿಯಾಯಿತು.

ಅದರ ಮೊದಲ ಚುನಾವಣಾ ಅಭಿವ್ಯಕ್ತಿಯಾಗಿ, ಬದಲಾವಣೆ ಮತ್ತು ಜನರ ಹಕ್ಕುಗಳ ವಿಸ್ತರಣೆ ಯನ್ನು ನಾವೆಲ್ಲಾ ಈ ಚುನಾವಣೆಗಳ ಫಲಿತಾಂಶ ಗಳಲ್ಲಿ ಕಾಣುತ್ತಿದ್ದೇವೆ. ಹೊಸ ಸಂವಿಧಾನ ಬರೆಯುವಲ್ಲಿ ಕಮ್ಯೂನಿಸ್ಟ್ ರು ಪ್ರಮುಖ ಪಾತ್ರ ನಿರ್ವಹಣೆ ಮಾಡುತ್ತಿರುವುದು ಆಶಾದಯಕ ಬೆಳವಣಿಗೆಯಾಗಿದೆ. ಇದು ಚಿಲಿಯ ಜನರ ಸದೃಡ–ವಿಶ್ವಾಸಪೂರ್ವ ಹೋರಾಟಕ್ಕೆ ಸಂದ ಅದ್ಭುತ ಗೆಲುವಾಗಿದೆ.


ಕೋವಿಡ್ ನಿಭಾವಣೆಯಲ್ಲಿ ವಿಫಲರಾದ ಸರಕಾರದ ವಿರುದ್ಧ ಆಕ್ರೋಶಗೊಂಡ ರೈತ–ಕಾರ್ಮಿಕರು

ವರದಿ ಪುಟ 5 ರಲ್ಲಿ





JANASHAKTHI KANNADA VARA PATRIKE May 24-30, 2021 Price: Rs. 10/- Date of Publication: 21 May 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ಎಂ.ಜಿ.ವೆಂಕಟೇಶ್: ಸಾಂಸ್ಕೃತಿಕ ಲೋಕದ ಸಶಕ್ತ ಕೊಂಡಿಯೊಂದು ಕಳಚಿತು

ಸಮುದಾಯ ಸಾಂಸ್ಕೃತಿಕ ಸಂಘಟನೆಯ ಪ್ರಾರಂಭದ ದಿನಗಳಿಂದಲೂ ತೊಡಗಿಸಿಕೊಂಡಿದ್ದ ಎಂ.ಜಿ.ವೆಂಕಟೇಶ್ ರವರನ್ನು ಕೊವಿಡ್ ಬಲಿ ತೆಗೆದುಕೊಂಡಿತು. ಕಳೆದ ಸುಮಾರು ಒಂದು ತಿಂಗಳಿನಿಂದ ಕೊವಿಡ್ ವಿರುದ್ದ ಸೆಣಸಿದ ಗೆಳೆಯನನ್ನು ಕೊವಿಡ್ ಮಣಿಸಿಯೇ ಬಿಟ್ಟಿತು. ಸಂಗೀತ ರಂಗಭೂಮಿ ಸಾಹಿತ್ಯಗಳ ವಿಷಯದಲ್ಲಿ ತಾಸುಗಟ್ಟಲೇ ಮಾತಾಡಬಲ್ಲ, ತಿಳಿದಿಲ್ಲದ ವಿಷಯವೇ ಇಲ್ಲವೆಂಬಂತಿದ್ದ ಎಂ.ಜಿ.ತನ್ನ ಪಾಂಡಿತ್ಯದ ಪ್ರದರ್ಶನವನ್ನು ಎಂದೂ ಮಾಡಿದ ವ್ಯಕ್ತಿಯಲ್ಲ. ಆದರೆ ಮಾತಿಗೆ ಕುಳಿತರೆ ಮಾಹಿತಿಯ ಬುಟ್ಟಿ ಖಾಲಿಯಾದುದೇ ಇಲ್ಲ.

ಸಮುದಾಯ ಸಂಘಟಿಸಿದ ಸಾಂಸ್ಕೃತಿಕ ಜಾತಾಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಎಂ.ಜಿ. ಹತ್ತು ವರ್ಷಗಳ ಕಾಲ ಸಮುದಾಯ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿದ್ದವರು. ನಟ, ರಂಗ ಸಂಘಟಕ, ಹಾಡುಗಾರ ಕೂಡಾ.

ಭಾರತದ ಮಹಾ ಲೆಕ್ಕ ಪರಿಶೋಧಕರ ಕಛೇರಿಯಲ್ಲಿ ಉನ್ನತ ಅಧಿಕಾರಿಯಾಗಿದ್ದರು. ಕರ್ತವ್ಯ ನಿರ್ವಹಣೆಗೆ ದೇಶದಾದ್ಯಂತ ಸಂಚರಿಸಿದವರು. ಹುದ್ದೆಯ ದರ್ಪವನ್ನೂ ತೋರದ, ಲೆಕ್ಕ ಪರಿಶೋಧಕರಾಗಿ ಕರ್ತವ್ಯ ನಿಷ್ಠೆಗೆ ಎಂದೂ ಎರವಾಗದಂತೆ ನಿರ್ವಹಿಸಿದವರು.

ಸಾಂಸ್ಕೃತಿಕ ಬೇರು ಬಿಳಲುಗಳ ಆಲದ ಮರದಂತಿದ್ದ ಅವರು ದೆಹಲಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಜನ ನಾಟ್ಯ ಮಂಚ್ ಮತ್ತು ಅದರ ಸಂಸ್ಥಾಪಕ ರಂಗ ಸಂಘಟಕ ಸಫ್ದರ್ ಹಾಷ್ಮಿಯವರ ನಿಕಟ ಸಂಪರ್ಕದಲ್ಲಿ ಇದ್ದವರು. ಇತ್ತೀಚೆಗೆ ಸುಧನ್ವಾ ದೇಶಪಾಂಡೆ ಯವರು ಬರೆದ "ಸಫ್ದರ್ ಹಾಶ್ಮಿ ಸಾವು ಮತ್ತು ಬದುಕು – ಹಲ್ಲಾ ಬೋಲ್" ಎನ್ನುವ ಇಂಗ್ಲಿಷ್ ಪುಸ್ತಕವನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದರು. ಕನ್ನಡದಲ್ಲಿ ಒಂದು ಅತ್ಯುತ್ತಮ ಪುಸ್ತಕವೆಂದು ಹಲವು ಜನರಿಂದ ಮೆಚ್ಚುಗೆ ಗಳಿಸಿದ ಈ ಪುಸ್ತಕವನ್ನು ನಮಗೆ ಬಿಟ್ಟು ತಮ್ಮ ಅಪೂರ್ವ ವಿದ್ವತ್ ನ್ನು ಒಳಗೇ ಇಟ್ಟುಕೊಂಡು ಅರ್ಧ ದಾರಿಯಲ್ಲಿ ವಿದಾಯ ಹೇಳಿದ ಗೆಳೆಯ ಎಂ.ಜಿ.ವೆಂಕಟೇಶ್ ರವರಿಗೆ ಸಮುದಾಯ ಕರ್ನಾಟಕ ಅಂತಿಮ ನಮನಗಳನ್ನು ಸಲ್ಲಿಸುತ್ತದೆ.

– ಸಮುದಾಯ ಕರ್ನಾಟಕ

ಎಂ.ಜಿ. ವೆಂಕಟೇಶ್ ಅವರನ್ನು ಸಫ್ದರ್ ಹಾಶ್ಮಿ ಅವರೇ ನನಗೆ ಪರಿಚಯ ಮಾಡಿಸಿದ್ದು. ಅಂದಿನಿಂದ ನನಗೆ ಆತ್ಮೀಯನಾದ ಸಹ–ರಂಗಕರ್ಮಿ, ಸಂಗಾತಿ, ಎಲ್ಲಕ್ಕಿಂತಲೂ ಹೆಚ್ಚಾಗಿ ಹಿರಿಯಣ್ಣನಂತೆ. ನನ್ನ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸುವಾಗ ಹಲವು ಬಾರಿ ದೇಶದ ವಿವಿಧ ಸಾಂಸ್ಕೃತಿಕ ಚಳುವಳಿ ಕುರಿತು ಮಾತನಾಡಿದ್ದೆವು. ಆಗ ಅವರಿಂದ ಒಂದು ಭಾಷೆ ಪಡೆದಿದ್ದೆ. ಅದು ಈ ಅನುವಾದ ಮುಗಿದ ಕೂಡಲೇ ಸಮುದಾಯದ ಸಮಗ್ರ ಇತಿಹಾಸವನ್ನು ಬರೆಯಬೇಕು ಎಂದು. ಸಮುದಾಯ ದೇಶದಲ್ಲೇ ವಿಶಿಷ್ಟವಾದ ಸಾಂಸ್ಕೃತಿಕ ಚಳುವಳಿ. ಅದರ ಇತಿಹಾಸ ಬರೆಯುವುದು ರಂಗಚಳುವಳಿಯ, ಎಡಚಳುವಳಿಯ, ಇತಿಹಾಸ ಅಳಿಸಿ ಹಾಕಲಾಗುತ್ತಿರುವ ತಿರುಚಲಾಗುತ್ತಿರುವ ದೇಶದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ತುರ್ತಿನದು. ಇದನ್ನು ಮಾಡಲು ಅತ್ಯಂತ ಸಮರ್ಥರಾಗಿದ್ದವರು ಎಂ.ಜಿ. ಆದರೆ ಆ ಭಾಷೆಯನ್ನು ಈಗ ಸಮುದಾಯದ ಮತ್ತು ಇತರ ಸಾಂಸ್ಕೃತಿಕ ಒಡನಾಡಿಗಳು ಪೂರೈಸಬೇಕಾಗಿದೆ. ಇದು ಅವರಿಗೆ ಕೊಡಬಹುದಾದ ನಿಜವಾದ ಶ್ರದ್ಧಾಂಜಲಿ.

– ಸುಧನ್ವ ದೇಶಪಾಂಡೆ, ಜನಮ್/ಲೆಫ್ಟ್ ವರ್ಡ್

ಹಲ್ಲಾಬೋಲ್ ಪುಸ್ತಕದ ಕನ್ನಡ ಭಾಷಾಂತರ ಮಾಡಿದ ಗೆಳೆಯ. ಆನ್‌ಲೈನ್ ಬಿಡುಗಡೆ ನಾಸಿರುದ್ದಿನ್ ಶಾ ಮಾಡಿದ್ದರು. ಅವರು ಒಪ್ಪಿದ್ದಾರೆ ಎಂದು ಹೇಳಿದಾಗ ಅದೆಷ್ಟು ಸಂಭ್ರಮಿಸಿದ್ದ. ..ಮಾತಾಡಲು ಪ್ರಾರಂಭಿಸಿದರೆ ಎನ್ಸೈಕ್ಲೋಪೀಡಿಯಾ..... ವಿಷಯಗಳ ಗಣಿ. ಅವನ ಜೊತೆ ಎಲ್ಲ ತಗೊಂಡು ಹೀಗೆ ಹೋಗಲು ಅಧಿಕಾರ ಇರಲಿಲ್ಲ ಅವನಿಗೆ. ಈ ಗೆಳೆಯ ಇನ್ನಿಲ್ಲವೆಂದು ಹೇಗೆ ನಂಬಲಿ. ಸಮುದಾಯ ಸಾಂಸ್ಕೃತಿಕ ಸಂಘಟನೆಯ ಪ್ರಾರಂಭದ ದಿನಗಳಿಂದ ತೊಡಗಿಸಿಕೊಂಡಿದ್ದ ಈ ಗೆಳೆಯನಿಗೆ ಸಮುದಾಯದ ಪ್ರತಿಯೊಂದು ವಿಷಯಗಳೂ ನಾಲಿಗೆಯ ತುದಿಯಲ್ಲಿ. ಬರಿಯೋ..ಬರಿಯೋ ಎಂದು ಹೇಳ್ತಾನೆ ಇದ್ದೆ. ಕಳೆದ ತಿಂಗಳು ಏಪ್ರಿಲ್ 12 ಸಫ್ದರ್ ಹಾಷ್ಮಿ ಹುಟ್ಟಿದ ದಿನ ಹಠ ಮಾಡಿ ಮನೆಗೆ ಕರೆಸಿಕೊಂಡು ಜನಶಕ್ತಿಗೆ ಸಫ್ದರ್ ಹಾಷ್ಮಿ ಯ ಜೊತೆಗಿನ ಅವನ ಸಾಂಗತ್ಯ, ಹಲ್ಲಾ ಬೋಲ್ ಪುಸ್ತಕದ ಮತ್ತೊಂದು ಮೆಲುಕು ಕಾರ್ಯಕ್ರಮ ಲೈವ್ ಮಾಡಿದ್ದೆ. ಹೋಗುವಾಗ ಮಾತು ಕೊಟ್ಟ ಖಂಡಿತಾ ಸಮುದಾಯದ ಕುರಿತು ಬರೀತೀನಿ ಅಂದ. ಆದರೆ.......ಸರಕಾರ ಪ್ರಜ್ಞಾಪೂರ್ವಕವಾಗಿ ಹಾಳುಗೆಡವಿದ ಆರೋಗ್ಯ ವ್ಯವಸ್ಥೆ ಮತ್ತೊಬ್ಬ ಗೆಳೆಯನ ಬಲಿ ತೆಗೆದುಕೊಂಡಿತು.

– ಕೆ.ಎಸ್. ವಿಮಲ

ಹಿರಿಯ ರಂಗಕರ್ಮಿ ಸಮುದಾಯದ ಸಂಗಾತಿ. ಸತತವಾಗಿ ಹತ್ತು ವರ್ಷಗಳು ಸಮುದಾಯ ಸಾಂಸ್ಕೃತಿಕ ಸಂಘಟನೆ ಪ್ರಧಾನ ಕಾರ್ಯದರ್ಶಿಯಾಗಿ, ನಾನು ಅಧ್ಯಕ್ಷನಾಗಿದ್ದಾಗ ನನ್ನೊಂದಿಗೆ ರಾಜ್ಯದೆಲ್ಲೆಡೆ ಸಂಘಟನೆಯನ್ನು ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಕ್ರಿಯಾಶೀಲವಾಗಿ ಕಟ್ಟಲು ಹೆಗಲಿಗೆ ಹೆಗಲು ಕೊಟ್ಟವರು ಒಲುಗಿ. ವಿಶ್ವಶಾಂತಿಗಾಗಿ ಸಮುದಾಯ ಸಂಘಟಿಸಿದ 100 ಅಡಿಗಳ ಬಣ್ಣದ ನಡೆ ಜಾಥಾದಲ್ಲಿ ದೇಶದ ಹಲವು ನಗರಗಳಲ್ಲಿ ಜೊತೆಯಾಗಿದ್ದವರು. ಸಮುದಾಯದ ಕುಟುಂಬದ ಪ್ರೀತಿಯ ಹಿರಿಯ ಜೀವ ನಮ್ಮೊಂದಿಗಿಲ್ಲ ಎಂಬುದನ್ನು ನಂಬಲಾಗುತ್ತಿಲ್ಲ. MGV ಯ ಆತ್ಮೀಯ ನಗು..ಅವರ ಸಾಮಾಜಿಕ ಸಾಂಸ್ಕೃತಿಕ ತಾತ್ವಿಕ ಬದ್ಧತೆಯನ್ನು ಮರೆಯಲಾಗದು. MGV ಯವರ ನೆನಪು ಚಿರಸ್ಮರಣೀಯವಾಗಿ ಸಾಂಸ್ಕೃತಿಕ ಜಗತ್ತಿನಲ್ಲಿ ಸಮುದಾಯದ ನೆನಪಲಿ ಸದಾ ಅಮರವಾಗಿರಲಿದೆ.

– ಸಿ. ಬಸವಲಿಂಗಯ್ಯ

ಹಾಡುತೋರಿದ ಹಾದಿ

ಎಂ.ಜಿ.ವೆಂಕಟೇಶ್ ದೇಶದಲ್ಲಿನ ತುರ್ತುಪರಿಸ್ಥಿತಿ ನಂತರ ಸಾಂಸ್ಕೃತಿಕ ಸಂಘಟನೆಯಾದ ಸಮುದಾಯ ಕನ್ನಡ ನೆಲದಲ್ಲಿ ನಡೆಸಿದ ಪ್ರಥಮ ಸಾಂಸ್ಕೃತಿ ಜಾಥಾದಲ್ಲಿ ಜತೆಯಾದ ಅಪರೂಪದ ಹಿರಿಯ ಗೆಳೆಯ. ಜಾಥಾ ಸಂದರ್ಭದಲ್ಲಿ ಅರ್ದ ಕರ್ನಾಟಕ ಸುತ್ತುತ್ತಾ ನಾಟಕ ಪ್ರದರ್ಶನಕ್ಕೂ ಮುಂಚೆ ಜನ್ನಿ ನೇತೃತ್ವದ ನಮ್ಮ ಹಾಡುಗಾರರ ತಂಡ ಕ್ರಾಂತಿಗೀತೆಗಳನ್ನು ಹಾಡುತ್ತಿದ್ದೆವು. ನಾವು ಹಾಡುತ್ತಿದ್ದ ಆ ಹಾಡುಗಳಲ್ಲಿ ಈ "ಹಳ್ಳಿಗಾಡ ಹಸುಗೂಸೆ" ಕೂಡ ಒಂದು. ಗೆಳೆಯ ಎಂ.ಜಿ. ವೆಂಕಟೇಶ್ ಅವರಿಗೆ ತುಂಬಾ ಇಷ್ಟವಾದ ಹಾಡು. ಕರೋನ ವೆಂಕಟೇಶ್ ಅನ್ನು ನಮ್ಮಿಂದ ಕಸ್ಕೊಂಡಿರಬಹುದು. ಆದರೆ ಅವರ ನಮ್ಮ ಒಡನಾಟದ ನೂರಾರು ನೆನಪುಗಳನ್ನು ಕಸ್ಕೊಳ್ಳಲಾರದು. ಆ ನೆನಪುಗಳಲ್ಲಿ ಇದೂ ಒಂದು. ಅವರಿಗೆ ಇಷ್ಟವಾದ ಹಾಡಿನೊಂದಿಗೆ, ವೆಂಕಟೇಶ್ ನಿಮ್ಗೆ ಭಾವಪೂರ್ಣ ನಮನಗಳು.

– ಪಿಚ್ಚಳ್ಳಿ ಶ್ರೀನಿವಾಸ (ಯೂ ಟ್ಯೂಬ್ ನಲ್ಲಿ)

ಯುವ ಸದಸ್ಯರುಗಳಿಗೆ ಮಾದರಿ

ಸಮುದಾಯ ಸಂಘಟಿಸಲು ಬಹಳ ಕಾಲ ರಾಜ್ಯವಿಡೀ ಸಂಚರಿಸಿ, ಎಲ್ಲ ಕಾರ್ಯಕ್ರಮಗಳಲ್ಲೂ ಮುಂದೆ ನಿಂತು ಭಾಗವಹಿಸುತ್ತಿದ್ದ ಎಂ ಜಿ ವಿ ಯುವ ಸದಸ್ಯರುಗಳಿಗೆ ಮಾದರಿಯಾಗಿದ್ದರು. .. ಸದಾ ಹಸನ್ಮುಖಿ, ತಿಳಿ ಹಾಸ್ಯದ ಮಾತುಗಳು, ಈ ಎಲ್ಲಕ್ಕಿಂತ ಮಿಗಿಲಾಗಿ ಸಾಮಾಜಿಕ ಹಾಗೂ ರಾಜಕೀಯ ಬದ್ಧತೆ ಇದ್ದವರು.

– ಕಾವ್ಯ ಅಚ್ಯುತ್

ಕೋವಿಡ್ ನಿಭಾವಣೆಯಲ್ಲಿ ವಿಫಲರಾದ ಸರಕಾರದ ವಿರುದ್ಧ ಆಕ್ರೋಶಗೊಂಡ ರೈತ-ಕಾರ್ಮಿಕರು

ಪುಟ 15 ಕ್ಕೆ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**